# ಸುವರ್ಣ ಕರ್ನಾಟಕ
# ರಾಜಕೀಯ ಸಿಂಹಾವಲೋಕನ

ಪ್ರೊ|| ಆರ್. ವಿ. ಹೊರಡಿ



ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

# ಸುವರ್ಣ ಕರ್ನಾಟಕ
# ರಾಜಕೀಯ ಸಿಂಹಾವಲೋಕನ

(ಕರ್ನಾಟಕ ಏಕೀಕರಣದ ನಂತರದ ರಾಜಕೀಯ ಸ್ಥಿತ್ಯಂತರಗಳ
ಕುರಿತು ಒಂದು ಕಿರುನೋಟ)

ಪ್ರೊ॥ ಆರ್. ಏ. ಹೊರಡಿ

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ ೫೮೦ ೦೦೧

SUVARNA KARNATAKA - RAJAKEEYA SIMHAVALOKANA -
by : Prof. R.V. Horadi,

Published by Karnataka Vidyavardhaka Sangh
as part of 'Suvarna Karnataka Celebrations'.

First Edition : March 2008

Copies: 1000 Pages: 10 + 70

Price : Rs. 40/-

© : K.V.V. Sangh, Dharwad - 580 001

ಸುವರ್ಣ ಕರ್ನಾಟಕ - ರಾಜಕೀಯ ಸಿಂಹಾವಲೋಕನ

ಮೊದಲನೆಯ ಮುದ್ರಣ : ಮಾರ್ಚ ೨೦೦೮

ಪ್ರತಿಗಳು : ೧೦೦೦ ಪುಟ : ೧೦ + ೭೦

ಬೆಲೆ : ರೂ. ೪೦/-

ಪುಸ್ತಕದ ಹಕ್ಕು : ಕ.ವಿ.ವ. ಸಂಘ, ಧಾರವಾಡ

ಪ್ರಕಾಶಕರು:
ಕರ್ನಾಟಕ ವಿದ್ಯಾವರ್ಧಕ ಸಂಘ,
ಧಾರವಾಡ

ಮುದ್ರಕರು:
ರವೀಂದ್ರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ್, ಧಾರವಾಡ - ೫೮೦ ೦೦೧
ದೂರವಾಣಿ : ೦೮೩೬-೨೭೯೦೦೩೦, ೨೭೪೧೯೮೪

# 'ನಾಡೋಜ'ರ ನಾಲ್ಕು ನುಡಿ

ಕರ್ನಾಟಕದ ಏಕೀಕರಣ ಆಗಿ ಅರ್ಧಶತಮಾನವೇ ಕಳೆದು ಹೋಗಿದೆ. ಆದರೂ ಕರ್ನಾಟಕದ ಬಗ್ಗೆ ಯಥಾರ್ಥವಾದ ವಿವರಣೆ ಹೇಳುವ ಒಂದು ಗ್ರಂಥವೂ ಈ ವರೆಗೆ ಬರಲಿಲ್ಲ. ಕೆಲವರೇನೊ ಕರ್ನಾಟಕದ ಬಗೆಗೆ ತಮಗೆ ತಿಳಿದಷ್ಟು ಬರೆದಿದ್ದಾರೆ. ಆದರೆ ಅವರ ತಿಳಿವಳಿಕೆ ಪೂರ್ಣವಾಗಿದೆ ಎಂದು ಹೇಳಲಿಕ್ಕೆ ಆಗುವುದಿಲ್ಲ.

ಕರ್ನಾಟಕ ಏಕೀಕರಣದ ನಂತರದ ರಾಜಕೀಯ ಸ್ಥಿತ್ಯಂತರಗಳ ಬಗ್ಗೆ ಅನೇಕರಲ್ಲಿ ಜಿಜ್ಞಾಸೆ ಇರುವುದು ಸ್ವಾಭಾವಿಕ. ಆ ಜಿಜ್ಞಾಸೆಯಿಂದ ಕೆಲವರು ಕೃತಿ ರಚನೆಗೆ ಮುಂದಾಗುತ್ತಾರೆ. ಆ ನಿಟ್ಟಿನಲ್ಲಿ ಪ್ರೊ॥ ಆರ್.ವಿ. ಹೊರಡಿಯವರು ಕರ್ನಾಟಕ ಏಕೀಕರಣದ ನಂತರದ ರಾಜಕೀಯ ಬೆಳವಣಿಗೆಗಳ ವಿವರಣೆಯ ಒಂದು ಪ್ರಾಮಾಣಿಕ ಪ್ರಯತ್ನ ಈ ಪುಟ್ಟ ಗ್ರಂಥವಾಗಿದೆ.

ಪ್ರೊ॥ ಹೊರಡಿಯವರು ಬರೆದ ಕರ್ನಾಟಕ ಏಕೀಕರಣದ ನಂತರದ ರಾಜಕೀಯ ವಿದ್ಯಮಾನಗಳ ಈ ಪುಸ್ತಕ ಪರಿಪೂರ್ಣವಾಗಿರದೇ ಇರಬಹುದು. ಆದರೆ ಈಗ ಬಂದ ಪುಸ್ತಕಗಳಲ್ಲಿ ಅದು ಬಹಳಷ್ಟು ಸತ್ಯವಾದ ವಿವರಣೆಗಳಿಂದ ಕೂಡಿದೆ. ಸ್ವಲ್ಪದರಲ್ಲಿ ಆ ವಿಷಯದ ಅಗಾಧತೆಯನ್ನು ತೋರಿಸುವುದು ಯಾರಿಗಾದರೂ ಕಷ್ಟ. ಆದರೆ ಪ್ರೊ॥ ಹೊರಡಿಯವರು ಕೆಲವೇ ಪುಟಗಳ ಮಿತಿಯಲ್ಲಿ ಸೊಗಸಾಗಿ ನಿರೂಪಣೆ ಮಾಡಿದ್ದಾರೆ. ಈ ಪುಟ್ಟ ಕೃತಿಯನ್ನು ಓದಿದವರಿಗೆ ಅವರಿಂದ ಬಹುದೊಡ್ಡ ಕೃತಿ ಬರಬೇಕೆನ್ನುವ ನಿರೀಕ್ಷೆ ಇದ್ದರೆ ಅದು ತಪ್ಪೇನೂ ಅಲ್ಲ.

ಈ ರೋಮಾಂಚಕಾರಿ ಕಥೆಯನ್ನು ಬರೆಯಬೇಕಾದ ವಸ್ತು ಹಾಗೂ ಅದನ್ನು ಯಥಾರ್ಥವಾಗಿ ತಿಳಿಸುವ ದೃಷ್ಟಿ ಪ್ರೊ॥ ಹೊರಡಿಯವರಲ್ಲಿ ಇದೆ. ಅವರು ಈಗ ಮಾಡಿರುವ ಈ ಸಣ್ಣ ಪ್ರಯತ್ನ ನಾವು ಮೆಚ್ಚುವಂತಿದೆ. ಆ ಕಾರಣದಿಂದಲೇ ಅವರಿಂದ ಈ ಕುರಿತು ಒಂದು ಬೃಹತ್ ಕೃತಿ ಬರಬೇಕೆನ್ನುವ ಆಸೆಯನ್ನು ನಾವು ಇರಿಸಿಕೊಂಡಿರುವುದು ಸರಿ.

**ನಾಡೋಜ ಡಾ॥ ಪಾಟೀಲ ಪುಟ್ಟಪ್ಪ.**

# ಪ್ರಾಸ್ತಾವಿಕ

ಕರ್ನಾಟಕ ಏಕೀಕರಣ ಚಳುವಳಿಗೆ ನಾಂದಿಹಾಡಿ ಕರ್ನಾಟಕ ರಾಜ್ಯ ನಿರ್ಮಾಣಗೊಳ್ಳುವಲ್ಲಿ ಅಹರ್ನಿಶ ಹೋರಾಟ ಗೈದು ಫಲ ಪಡೆಯುವಲ್ಲಿ ಯಶಸ್ವಿಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಸಾಹಿತ್ಯ ಸಂಸ್ಕೃತಿಯ ಸರ್ವತೋಮುಖ ಅಭಿವೃದ್ಧಿಗಾಗಿ ಕಳೆದ ೧೧೮ ವರ್ಷಗಳಿಂದ ನಿರಂತರ ಮುಂಚೂಣಿಯಲ್ಲಿ ನಿಂತು ಕಾರ್ಯಮಾಡುತ್ತ ಮುನ್ನಡೆದಿದೆ. ಸಂಘ ಕರ್ನಾಟಕದಲ್ಲಿ ಗ್ರಂಥಾಲಯ ಚಳುವಳಿಗೂ ನಾಂದಿ ಹಾಡಿ ಗ್ರಂಥಾಲಯಗಳ ಬೆಳವಣಿಗೆಗೆ ಕಾರಣವಾಗಿದೆ. ಸಾಹಿತ್ಯ, ಸಂಗೀತಾದಿ ಕಲೆಗಳಿಗೆ ಇಂಬುಕೊಟ್ಟು ಅವುಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ, ಹಾಗೆಯೇ ವಿವಿಧ ಮಂಟಪಗಳನ್ನು ರಚಿಸಿಕೊಂಡು ತನ್ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬದುಕಿನ ಇತರ ವಿಷಯಗಳತ್ತಲೂ ಜನಮನದಲ್ಲಿ ಜಾಗೃತಿಯನ್ನುಂಟುಮಾಡುತ್ತಲಿದೆ. ಕನ್ನಡ–ಕನ್ನಡಿಗ–ಕರ್ನಾಟಕ ಎನ್ನುವದನ್ನೇ ತನ್ನ ಮಂತ್ರವಾಗಿಸಿಕೊಂಡು ಸಮಗ್ರ ಕರ್ನಾಟಕದ ಉತ್ತರೋತ್ತರ ಉತ್ಕರ್ಷವನ್ನು ಹಾರೈಸುತ್ತಲಿದೆ.

ಸಂಘವು ತನ್ನ ೧೧೮ ವರ್ಷಗಳ ಇತಿಹಾಸದಲ್ಲಿ ೮೭ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಕನ್ನಡ ಸಾರಸ್ವತಕ್ಕೆ ಮೌಲಿಕವಾದ ಕೊಡುಗೆಯನ್ನು ನೀಡಿದೆ. ಕನ್ನಡದ ಪ್ರಾತಃಸ್ಮರಣೀಯರಾದ ಅನೇಕ ಹಿರಿಯ ಲೇಖಕರ ಗ್ರಂಥಗಳ ಪ್ರಥಮ ಮುದ್ರಣವನ್ನು ಪ್ರಕಟಿಸಿದ ಕೀರ್ತಿಯೂ ನಮ್ಮ ಸಂಘದ್ದಾಗಿದೆ.

ನಮ್ಮ ಸಂಘವು ಕರ್ನಾಟಕ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಾಡು–ನುಡಿಗೆ ಸಂಬಂಧಿಸಿದಂತೆ ಹಲವು ಉಪನ್ಯಾಸಗಳನ್ನು ಏರ್ಪಡಿಸಿತ್ತು. ಅವುಗಳಲ್ಲಿ ರಾಜ್ಯಶಾಸ್ತ್ರದ ಹಿರಿಯ ಪ್ರಾಧ್ಯಾಪಕರಾದ ಪ್ರೊ. ಆರ್. ವಿ. ಹೊರಡಿಯವರು 'ಸುವರ್ಣ ಕರ್ನಾಟಕ : ಏಕೀಕರಣದ ನಂತರದ ರಾಜಕೀಯ ಸ್ಥಿತ್ಯಂತರಗಳ ಪಕ್ಷಿನೋಟ'ವನ್ನು ಕುರಿತು ಉದ್ಬೋಧಕವಾದ ಉಪನ್ಯಾಸವನ್ನು ನೀಡಿದ್ದೂ ಒಂದು. ಆ ಉಪನ್ಯಾಸವನ್ನೇ ಗ್ರಂಥರೂಪದಲ್ಲಿ ಸಂಘವು ತನ್ನ ಪ್ರಕಟಣೆಯಾಗಿ ಹೊರತರುತ್ತದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ.

ರಾಜ್ಯಶಾಸ್ತ್ರದ ಪರಿಣತ ಪ್ರಾಧ್ಯಾಪಕರೂ, ಕವಿ ಮಿತ್ರರೂ ಆದ ಪ್ರೊ. ಆರ್. ವಿ. ಹೊರಡಿ ಅವರು ನಮ್ಮ ವಿಜ್ಞಾಪನೆಯನ್ನು ಮನ್ನಿಸಿ ತಮ್ಮ ಉಪನ್ಯಾಸವನ್ನು ಗ್ರಂಥರೂಪದಲ್ಲಿ ಪ್ರಕಟಿಸಲು ಅನುವು ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಸಂಘದ ಪರವಾಗಿ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಪ್ರಸ್ತುತ ಕೃತಿಗೆ ಚಿಕ್ಕದಾದರೂ ಚೊಕ್ಕದಾದ ಮುನ್ನುಡಿಯನ್ನು ಬರೆದುಕೊಟ್ಟು ಗ್ರಂಥದ ಮೌಲ್ಯವನ್ನು ನಮ್ಮ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಹೆಚ್ಚಿಸಿದ್ದಾರೆ. ಅವರಿಗೂ ಸಂಘದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಸುವರ್ಣ ಕರ್ನಾಟಕ – ರಾಜಕೀಯ ಸಿಂಹಾವಲೋಕನ ಗ್ರಂಥವನ್ನು ಅತ್ಯಂತ ಸುಂದರವಾಗಿ ಮುದ್ರಿಸಿಕೊಟ್ಟ ಧಾರವಾಡ ಮನೋಹರ ಮುದ್ರಣಾಲಯದ ಶ್ರೀ ರವಿ–ಚಂದ್ರು ಅವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಗ್ರಂಥ ಪ್ರಕಟಣೆಯಲ್ಲಿ ಸಹಕರಿಸಿದ ಸಂಘದ ಪದಾಧಿಕಾರಿಗಳ ಸಹಾಯವನ್ನು ಮರೆಯಲಾರೆ. ಅವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಧಾರವಾಡ

**ಪ್ರೊ. ಬಿ. ವ್ಹಿ. ಗುಂಜೆಟ್ಟಿ**
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

# ಲೇಖಕನ ನುಡಿ

ಸುವರ್ಣ ಕರ್ನಾಟಕ ಮಹೋತ್ಸವದ ಅಂಗವಾಗಿ ೧೧೮ ವರ್ಷಗಳ ಇತಿಹಾಸ ಹೊಂದಿರುವ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸೂಚನೆಯ ಮೇರೆಗೆ ಕರ್ನಾಟಕ ಏಕೀಕರಣದ ನಂತರದ ರಾಜಕೀಯ ಸ್ಥಿತ್ಯಂತರಗಳ ಕುರಿತು ಈ ಪುಟ್ಟ ಪುಸ್ತಕವನ್ನು ರಚಿಸಿದ್ದೇನೆ. ಇದು ಕರ್ನಾಟಕದ ಕಳೆದ ಐವತ್ತು ವರ್ಷಗಳ ರಾಜಕೀಯ ಏರುಪೇರುಗಳನ್ನು, ತಿರುವುಗಳನ್ನು, ಘಟನೆಗಳನ್ನು ಸಂಪೂರ್ಣವಾಗಿ, ಸಮಗ್ರವಾಗಿ ದಾಖಲಿಸುವ ಕೃತಿಯಂತೂ ಖಂಡಿತ ಅಲ್ಲ.

ಕರ್ನಾಟಕ ಏಕೀಕರಣದ ನಂತರ ಜನಿಸಿದ ಎರಡು ತಲೆಮಾರುಗಳ ಕನ್ನಡಿಗರನ್ನು ಮನಸ್ಸಿನಲ್ಲಿಟ್ಟುಕೊಂಡು ಕಳೆದ ಐವತ್ತು ವರ್ಷಗಳಲ್ಲಿ ಕರ್ನಾಟಕ ಕಂಡ ರಾಜಕೀಯ ಸ್ಥಿತ್ಯಂತರಗಳನ್ನು ಕುರಿತಾದ ಒಂದು ಕಿರುನೋಟ ಇಲ್ಲಿದೆ. ಈ ಪುಸ್ತಕ ಓದಿದವರಿಗೆ ಅರ್ಧಶತಮಾನದ ಕರ್ನಾಟಕದ ಕಥೆ-ವ್ಯಥೆಯ ಚಿಕ್ಕ ಚಿತ್ರ ಕಣ್ಮುಂದೆ ಮೂಡಿಬರಬಹುದೆಂಬ ಆಶಾಭಾವನೆ ನನ್ನದು. ರಾಗ, ದ್ವೇಷಕ್ಕೊಳಗಾಗದೇ, ಯಾರ ಪರವಾಗಿ ಅಥವಾ ವಿರುದ್ಧವಾಗಿ ಹೇಳುವ ಪ್ರಯತ್ನ ಮಾಡದೇ ನನ್ನ ಪ್ರಾಮಾಣಿಕ ಅನಿಸಿಕೆ, ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಿದ್ದೇನೆ. ತಪ್ಪು ಸಂಗತಿಗಳೇನಾದರೂ ಇದರಲ್ಲಿ ನುಸುಳಿದ್ದರೆ, ಯಾರಾದರೂ ಎತ್ತಿ ತೋರಿಸಿದರೆ, ತಿದ್ದಿಕೊಳ್ಳಲು ಸಿದ್ಧ !

'ಚಲಿಸುವ ವಿಶ್ವಕೋಶ'ವೆಂದೇ ಕರೆಯಲ್ಪಡುವ ಪ್ರಖ್ಯಾತ ಪತ್ರಕರ್ತ 'ಪ್ರಪಂಚ'ದ ಪಾಪು ಅವರೊಡನೆ ಆಗಾಗ ನಡೆಸಿದ ಸಂಭಾಷಣೆ, ಚರ್ಚೆಗಳಿಂದ ಅನೇಕರಂತೆ ನಾನೂ ಕೂಡ ಪ್ರಭಾವಿತನಾಗಿದ್ದೇನೆ, ಪ್ರಯೋಜನ ಪಡೆದಿದ್ದೇನೆ. ಪ್ರಸ್ತುತ ಪುಸ್ತಕ ಕುರಿತು ಅವರು ಮೆಚ್ಚುಗೆಯ ಮಾತುಗಳನ್ನಾಡಿ ಬೆನ್ನು ತಟ್ಟಿದ್ದಾರೆ. ಅವರು ನನ್ನ ಬಗೆಗೆ ಎಂದಿನಿಂದಲೂ ತೋರುತ್ತ ಬಂದಿರುವ ಪ್ರೀತಿ, ವಿಶ್ವಾಸ, ಪ್ರೋತ್ಸಾಹಕ್ಕೆ ನಾನು ಅವರಿಗೆ ಚಿರಋಣಿಯಾಗಿದ್ದೇನೆ.

ನನ್ನ ಬಗೆಗೆ ಮೊದಲಿನಿಂದಲೂ ಪ್ರೀತಿ, ವಿಶ್ವಾಸ ತೋರುತ್ತ ಬಂದಿರುವ ವಿದ್ಯಾರ್ಥಿಗಳ ಅಚ್ಚು ಮೆಚ್ಚಿನ ಪ್ರಾಧ್ಯಾಪಕ, ಸಂಘಟಕ, ಸದಭಿರುಚಿಯ ಸಾಹಿತ್ಯ ಪ್ರೇಮಿ ಪ್ರೊ. ಬಿ. ವ್ಹಿ. ಗುಂಜೆಟ್ಟಿಯವರು ಈ ಪುಸ್ತಕಕ್ಕೆ ಬೆನ್ನುಡಿ ಬರೆದುಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನಾನು ಆಭಾರಿ.

ಈ ಪುಟ್ಟ ಪುಸ್ತಕದ ಕರಡು ಪ್ರತಿಯನ್ನು ಪ್ರೀತಿಯಿಂದ ಪರಿಶೀಲಿಸಿ ಸಲಹೆ, ಸೂಚನೆಗಳನ್ನು ನೀಡಿದ ಸನ್ಮಿತ್ರ–ಹೆಸರಾಂತ ಸಂಶೋಧಕ ಡಾ॥ ಎಂ.ಎಂ. ಕಲಬುರ್ಗಿ ಅವರಿಗೆ ನಾನು ಉಪಕೃತನಾಗಿದ್ದೇನೆ.

ಈ ಕೃತಿ ರಚಿಸುವಾಗ ನಾನು ಕೆಲವು ಪುಸ್ತಕಗಳು ಹಾಗೂ ಲೇಖನಗಳ ನೆರವು ಪಡೆದಿದ್ದೇನೆ. ಅವುಗಳ ಪೈಕಿ 'ಕೋಚೆ' ಅವರ 'ಎಸ್.ನಿಜಲಿಂಗಪ್ಪ–ಒಂದು ಅಧ್ಯಯನ'; 'ದೇಜಗೌ'ರ 'ಕರ್ನಾಟಕದ ರೂವಾರಿ'; ಡಾ॥ ಪಾಟೀಲ ಪುಟ್ಟಪ್ಪನವರನ್ನು ಕುರಿತಾದ ಅಭಿನಂದನ ಗ್ರಂಥ 'ಪ್ರಪಂಚದ ಪಾಪು'; ಡಾ॥ ಸೂರ್ಯನಾಥ ಕಾಮತರ 'ಕರ್ನಾಟಕದ ಸಂಕ್ಷಿಪ್ತ ಇತಿಹಾಸ'; ಶ್ರೀಯುತರಾದ ಎಸ್.ಬಿ. ಶ್ರೀನಿವಾಸರಾವ್ ಹಾಗೂ ಅರಳುಮಲ್ಲಿಗೆ ಪಾರ್ಥಸಾರಥಿಯವರು ಸಂಪಾದಿಸಿರುವ 'ಕರ್ನಾಟಕದ ಮುಖ್ಯಮಂತ್ರಿಗಳು'; ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವ 'ಕನ್ನಡ–ಕನ್ನಡಿಗ–ಕರ್ನಾಟಕ' ಹಾಗೂ ಪ್ರಜಾವಾಣಿ ಪತ್ರಿಕೆ ಪ್ರಕಟಿಸಿದ 'ಸುವರ್ಣ ಕರ್ನಾಟಕ ವಿಶೇಷ ಲೇಖನಮಾಲೆ' ಇವುಗಳನ್ನು ಹೆಸರಿಸಬಹುದು.

ಈ ಪುಸ್ತಕ ಪ್ರಕಟಣೆಯ ವಿಷಯದಲ್ಲಿ ಸ್ವಯಂಪ್ರೇರಿತ ಮೊದಲ ಆಸಕ್ತಿ ತೋರಿ, ಉತ್ಸಾಹದಿಂದ ಡಿಟಿಪಿ ಮಾಡಿಸುವಲ್ಲಿ ಸಕ್ರಿಯವಾಗಿ ಸಹಕರಿಸಿದ ಅಪರೂಪದ ತರುಣಮಿತ್ರ ಧಾರವಾಡದ ಡಾ॥ ಹಿರೇಮಲ್ಲೂರ ಈಶ್ವರನ್ ವಿಜ್ಞಾನ ಕಾಲೇಜಿನ ಪ್ರಿನ್ಸಿಪಾಲರಾದ ಶಶಿಧರ ತೋಡಕರ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಡಿಟಿಪಿ ಕೆಲಸವನ್ನು ಬೇಸರಿಸದೇ, ಅಚ್ಚುಕಟ್ಟಾಗಿ, ನಿಷ್ಠೆಯಿಂದ ಪೂರೈಸಿದ ಪ್ರೊ॥ ಮುಖ್ತಾರಅಹ್ಮದ ಗುಳಗುಂದಿ ಹಾಗೂ ಶ್ರೀ ಆಜಾದ್ ಅವರನ್ನು ನೆನೆಯಲೇಬೇಕು.

ಈ ಪುಸ್ತಕ ಪ್ರಕಟಣೆಯ ಹೊಣೆಹೊತ್ತು ಪ್ರೋತ್ಸಾಹಿಸಿ, ಪುರಸ್ಕರಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ನಾಡೋಜ ಡಾ॥ ಪಾಟೀಲ ಪುಟ್ಟಪ್ಪನವರಿಗೆ ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಆತ್ಮೀಯ ಮಿತ್ರ ಪ್ರೊ॥ ಬಿ.ವಿ. ಗುಂಜೆಟ್ಟಿಯವರಿಗೆ ಹಾಗೂ ಸಂಘದ ಪದಾಧಿಕಾರಿಗಳಿಗೆಲ್ಲ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸುಂದರವಾಗಿ ಮುದ್ರಣದ ಕೆಲಸ ನಿರ್ವಹಿಸಿದ ಮನೋಹರ ಮುದ್ರಣಾಲಯದ ರವಿ–ಚಂದ್ರು ಸಹೋದರರನ್ನು ಅಭಿನಂದಿಸುತ್ತೇನೆ.

ಧಾರವಾಡ.
೧–೩–೦೮

**– ಪ್ರೊ. ಆರ್.ವಿ. ಹೊರಡಿ**

# ಅಂತರಂಗ


| | | | ಪುಟ |
|---|---|---|---|
| ೧. | ದೊರೆ, ದಿವಾನರ ಆಡಳಿತ ಅಂತ್ಯ | .... | ೧ |
| ೨. | ೧೯೪೭ ರಿಂದ ೧೯೫೬ರ ವರೆಗೆ ಮೈಸೂರು ಪ್ರದೇಶವನ್ನಾಳಿದ 'ತ್ರಿಮೂರ್ತಿ'ಗಳು | .... | ೨ |
| ೩. | ಚೆಲುವ ಕನ್ನಡ ನಾಡಿಗಾಗಿ ನಡೆದ ಹೋರಾಟ | .... | ೨ |
| ೪. | ನನಸಾದ ಏಕೀಕರಣದ ಕನಸು : ಮೊದಲ ಮುಖ್ಯಮಂತ್ರಿ 'ಎಸ್ಸೆನ್' | .... | ೯ |
| ೫. | ರಾಜಕೀಯ ರಂಗದ 'ಜಟ್ಟಿ' – ಬಿ.ಡಿ. ಜತ್ತಿ | .... | ೧೧ |
| ೬ | 'ರಾಮ'ನ ವನವಾಸ ಮುಗಿಯುವವರೆಗೆ 'ಭರತ'ನಿಗೆ ಪಟ್ಟಾಭಿಷೇಕ : ಪರ್ಯಾಯ ವ್ಯವಸ್ಥೆ – ಎಸ್. ಆರ್. ಕಂಠಿ ಮುಖ್ಯಮಂತ್ರಿ! | .... | ೧೩ |
| ೭ | ನೆಹರೂ ನಂತರದ ಕಾಂಗ್ರೆಸ್ | .... | ೧೪ |
| ೮. | ಎಸ್. ನಿಜಲಿಂಗಪ್ಪ – ನಿಜವಾದ 'ಗಾಂಧೀವಾದಿ'! | .... | ೧೫ |
| ೯. | ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಕೊನೆಯ ಅಧ್ಯಕ್ಷ ! | .... | ೧೬ |
| ೧೦. | ಕರ್ನಾಟಕ ಕಂಡ ದಕ್ಷ ಮುಖ್ಯಮಂತ್ರಿ : ವೀರೇಂದ್ರ ಪಾಟೀಲ | .... | ೧೭ |
| ೧೧. | 'ಎಕ್ಸಪೋ' ಚಳವಳಿ | .... | ೧೯ |
| ೧೨. | ಒಂದು ದಶಕ 'ದೊರೆ'ಯಂತೆ ದರ್ಬಾರ್ ನಡೆಸಿದ ಅರಸ! | .... | ೨೦ |
| ೧೩. | ಹಿಂದುಳಿದ ವರ್ಗಗಳ 'ಹರಿಕಾರ' ಹಾವನೂರ್ | .... | ೨೧ |

೧೪. ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ .... ೨೨

೧೫. ಅರಸರ ಅವನತಿಯ ಆರಂಭ .... ೨೪

೧೬. ಆರ್. ಗುಂಡೂರಾವ್ – ಆಗ ಖಾಸಗಿ ಬಸ್ಸಿನ
'ಏಜಂಟಗಿರಿ'. ಈಗ ಸರಕಾರದ 'ಸೂತ್ರಧಾರಿ'! .... ೨೫

೧೭. ಕರ್ನಾಟಕದ ಮೊಟ್ಟಮೊದಲ 'ಕಾಂಗ್ರೆಸ್ಸೇತರ' ಮೈತ್ರಿ ಸರಕಾರ .... ೨೯

೧೮. ಸಮ್ಮೋಹಕ ವ್ಯಕ್ತಿತ್ವದ ಚಾಣಾಕ್ಷ ರಾಜಕಾರಣಿ :
ರಾಮಕೃಷ್ಣ ಹೆಗಡೆ .... ೨೯

೧೯. ಜನತಾಪಕ್ಷದಲ್ಲಿ ಒಡಕು – ಅರಸ್ ಉಚ್ಚಾಟನೆ
ಅಸೆಂಬ್ಲಿ ಚುನಾವಣೆ – ಕಾಂಗ್ರೆಸ್ಸೇತರ ಸರಕಾರ .... ೩೧

೨೦. 'ರಾಯಿಸ್ಟ್' ಬೊಮ್ಮಾಯಿಯವರ ಅಲ್ಪಾಯುಷಿ ಸರಕಾರ .... ೩೪

೨೧. ೧೯೮೯–೯೪ ಐದು ವರ್ಷದಲ್ಲಿ ಮೂವರು ಮುಖ್ಯಮಂತ್ರಿಗಳು!
ವೀರೇಂದ್ರ ಪಾಟೀಲರ 'ಸೆಕೆಂಡ್ ಇನಿಂಗ್ಸ್'! .... ೩೬

೨೨. 'ಬೋಗಿ'ಯಲ್ಲ, ಯಾವಾಗಲೂ 'ಎಂಜಿನ್'
ಆಗಬಯಸುವ ಬಂಗಾರಪ್ಪ ! .... ೩೭

೨೩. ಮೂರಕ್ಕೆ ಇಳಿಯದ ಆರಕ್ಕೆ ಏರದ ಮುಖ್ಯಮಂತ್ರಿ
ವೀರಪ್ಪ ಮೊಯ್ಲಿ! .... ೪೧

೨೪. 'ಮಣ್ಣಿನ ಮಗ' ಎಚ್. ಡಿ. ದೇವೇಗೌಡ ಮುಖ್ಯಮಂತ್ರಿ .... ೪೨

೨೫. ಹದಿನೆಂಟು ತಿಂಗಳ ಮುಖ್ಯಮಂತ್ರಿತ್ವದ ನಂಟು! .... ೪೫

೨೬. ಮೊದಲ ಕನ್ನಡ ಪ್ರಧಾನಿ ದೇವೇಗೌಡರ ಹಳ್ಳಿಯಿಂದ
'ದಿಳ್ಳಿ'ವರೆಗಿನ ಸುದೀರ್ಘ ಪಯಣ! .... ೪೬

೨೭ ಲೋಹಿಯಾ ಸಮಾಜವಾದಿಯ ಕೈಗೆ ರಾಜ್ಯದ 'ಪಟೇಲ್'ಗಿರಿ!.... ೪೭

೨೮. ದೇವೇಗೌಡ ಪ್ರಧಾನ ಮಂತ್ರಿ!
ಜೆ.ಎಚ್.ಪಟೇಲ್ ಮುಖ್ಯಮಂತ್ರಿ! .... ೪೮

೨೯. ಸ್ನೇಹ ಜೀವಿ, ಸೊಗಸುಗಾರ,
ಶಿಸ್ತಿನ ಸುಸಂಸ್ಕೃತ ಮನುಷ್ಯ 'ಎಸ್.ಎಂ.ಕೃಷ್ಣ!' .... ೪೯

೩೦. ಸಮ್ಮಿಶ್ರ ಸರಕಾರದ ಸಾರಥಿ – ಧರ್ಮಸಿಂಗ್ ! .... ೫೨

೩೧. 'ಕರ್ನಾಟಕ ಅಭಿವೃದ್ಧಿ ರಂಗ'ದ
ಮುಖ್ಯಮಂತ್ರಿ ಕುಮಾರಸ್ವಾಮಿ ! .... ೫೪

೩೨. ದೋಸ್ತಿ ಸರಕಾರದ ಇಪ್ಪತ್ತು ತಿಂಗಳ ಸಾಧನೆ .... ೫೬

೩೩. ಅಕ್ಟೋಬರ್ ೩, ೨೦೦೭ರ ನಂತರದಲ್ಲಿ ಕರ್ನಾಟಕದಲ್ಲಿ
ಕಂಡುಬಂದ ರಾಜಕೀಯ ಸ್ಥಿತ್ಯಂತರಗಳು .... ೫೯

೩೪. ದಕ್ಷಿಣ ಭಾರತದ ರಾಜ್ಯವೊಂದರ ಪ್ರಪ್ರಥಮ ಬಿ.ಜೆ.ಪಿ.
ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ :
ಸಾತ್ ದಿನೋಂಕಾ ಸುಲ್ತಾನ್ ! .... ೬೮

# ಸುವರ್ಣ ಕರ್ನಾಟಕ –
# ರಾಜಕೀಯ ಸಿಂಹಾವಲೋಕನ

## ದೊರೆ, ದಿವಾನರ ಆಡಳಿತ ಅಂತ್ಯ

ಭಾರತ ೧೯೪೭ರ ಆಗಸ್ಟ್ ೧೫ ರಂದು ಸ್ವತಂತ್ರವಾಯಿತೇನೊ ನಿಜ. ಆದರೆ ಮೈಸೂರು ಸಂಸ್ಥಾನ ಮಾತ್ರ 'ಪ್ರಭುತ್ವ'ದಿಂದ 'ಪ್ರಜಾಪ್ರಭುತ್ವ'ಕ್ಕೆ ಪರಿವರ್ತನೆಗೊಳ್ಳಲು ಒಂದೆರಡು ತಿಂಗಳು ಕಾಯಬೇಕಾಯಿತು. ಮತ್ತೊಂದು ಅಹಿಂಸಾತ್ಮಕ ಸಮರ ಹೂಡಬೇಕಾಯಿತು. ಆದರೂ ದೇಶ ದಾಸ್ಯವಿಮೋಚನಗೊಂಡ ಕೆಲವೇ ದಿನಗಳಲ್ಲಿ ಜನತಂತ್ರದಲ್ಲಿ ವಿಶ್ವಾಸವನ್ನು ಹೊಂದಿದ್ದ ಮೈಸೂರು ಅರಸರು ರಾಜತ್ವವನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಿದ ಮೊಟ್ಟಮೊದಲ ರಾಜಮನೆತನ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿಯವರು 'ದಿವಾನ'ರ ಆಡಳಿತದ ಸರಕಾರಕ್ಕೆ ಬದಲು ಜನಪ್ರತಿನಿಧಿಗಳ ಸರಕಾರ ಸ್ಥಾಪಿಸಬೇಕೆಂಬ ಹೋರಾಟದಲ್ಲಿ ಭಾಗಿಯಾಗಿ 'ಮೈಸೂರ ಚಲೊ' ಚಳವಳಿಯ 'ಸರ್ವಾಧಿಕಾರಿ' ಯಾಗಿ ನೇಮಕಗೊಂಡಿದ್ದರು. ಮುಂದೆ ಇದೇ ಕೆ.ಸಿ.ರೆಡ್ಡಿಯವರು ೨೪.೧೦.೧೯೪೭ರಂದು ಮೈಸೂರು ಸಂಸ್ಥಾನ ಪ್ರದೇಶದ ಪ್ರಪ್ರಥಮ 'ಜವಾಬ್ದಾರಿ ಸರಕಾರದ' ಮುಖ್ಯಮಂತ್ರಿಯಾದರು. ಮಹಾರಾಜರಿಗೆ ಜವಾಬ್ದಾರರಾಗಿರುತ್ತಿದ್ದ 'ದಿವಾನರ' ಕಾಲ ಮುಗಿದು ಜನಪ್ರತಿನಿಧಿಗಳ ಮೂಲಕ ಜನರಿಗೆ ಜವಾಬ್ದಾರಾಗಿರುವ ಮಂತ್ರಿಗಳ ಶಕೆ ಶುರುವಾಯಿತು. ಪ್ರಜೆಗಳೇ ಪ್ರಭುಗಳೆಂಬ ವಿಚಾರ ಪ್ರಚುರಗೊಳ್ಳತೊಡಗಿತು.

## ೧೯೪೭ ರಿಂದ ೧೯೫೬ರ ವರೆಗೆ ಮೈಸೂರು ಪ್ರದೇಶವನ್ನಾಳಿದ 'ತ್ರಿಮೂರ್ತಿ'ಗಳು

ಮುಖ್ಯಮಂತ್ರಿ ಪದವನ್ನು ಐದು ವರ್ಷಗಳವರೆಗೆ ಸಮರ್ಥವಾಗಿ ನಿರ್ವಹಿಸಿದ ರೆಡ್ಡಿಯುವರು ನಂತರ ಕೇಂದ್ರ ಸರಕಾರದ ಸಚಿವರಾಗಿ, ಮಧ್ಯಪ್ರದೇಶದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿ ೧೯೭೬ರಲ್ಲಿ ವಿಧಿವಶರಾದರು.

ನಂತರ ಮುಖ್ಯಮಂತ್ರಿಯಾದ ಕೆಂಗಲ್ ಹನುಮಂತಯ್ಯನವರು 'ಕಲ್ಲಿನಲ್ಲಿ ಮಹಾಕಾವ್ಯ' ನಿರ್ಮಿಸಿದ ಭವ್ಯ ಸುಂದರ 'ವಿಧಾನಸೌಧ'ದ ರೂವಾರಿ ಎನಿಸಿದರು. ಕರ್ನಾಟಕ ಏಕೀಕರಣ ಬೆಂಬಲಿಸಿದ ಕೆಂಗಲ್ ಅಧಿಕಾರ ಕಳೆದುಕೊಂಡರು. ತಾವೇ ನಿರ್ಮಿಸಿದ ವಿಧಾನಸೌಧದಲ್ಲಿ ಕುಳಿತು ಆಡಳಿತ ನಡೆಸುವ ಅವಕಾಶದಿಂದ ವಂಚಿತರಾದರು.

ಕರ್ನಾಟಕ ಏಕೀಕರಣಕ್ಕೆ ವಿರೋಧವಾಗಿದ್ದ, ಕೆಂಗಲ್ ಸಂಪುಟದಲ್ಲಿ ಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪನವರು ೧೯೫೬ರ ಆಗಸ್ಟ್ ೧೯ ರಂದು ಮೈಸೂರು ಮುಖ್ಯಮಂತ್ರಿಯಾದರು. ಮಂಜಪ್ಪನವರು ಸಚ್ಚಾರಿತ್ರ್ಯ ಶೀಲ ರಾಜಕಾರಣಿ ಆಗಿದ್ದರು. ಇವರದು ೧೯೫೬ರ ಅಕ್ಟೋಬರ್ ೩೧ರ ವರೆಗಿನ ಅಲ್ಪಾವಧಿ ಅಧಿಕಾರವಾಗಿತ್ತು. 'ಬದುಕಬೇಕು, ಬದುಕಿದರೆ ಕಡಿದಾಳರಂತೆ ಬದುಕಬೇಕು' – ಎಂಬ ಸಿದ್ದವನಹಳ್ಳಿ ನಿಜಲಿಂಗಪ್ಪನವರ ನುಡಿ ಕಡಿದಾಳರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಇಂಥ ಕಡಿದಾಳರು; "೧೯೬೯ ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಇಬ್ಭಾಗವಾದನಂತರ 'ಭ್ರಷ್ಟಾಚಾರದ ಯುಗ' ಭಾರತದಲ್ಲಿ ಪ್ರಾರಂಭವಾಯಿತು" ಎಂದು ಹೇಳಿದ್ದರು.

## ಚೆಲುವ ಕನ್ನಡ ನಾಡಿಗಾಗಿ ನಡೆದ ಹೋರಾಟ

"ಸುಮಾರು ೧೯೦೫ರಿಂದ ೧೯೨೦ರ ವರೆಗಿನ ಕಾಲದಲ್ಲಿ ಭಾರತದ ರಾಜಕೀಯ ರಂಗದಲ್ಲಿ ಕಾಲಿಟ್ಟ ಕರ್ನಾಟಕದ ಕಾರ್ಯಕರ್ತರು ಎರಡು ಕನಸುಗಳನ್ನು ಕಂಡರು, ಎರಡು ಕಲ್ಪನೆಗಳನ್ನು ಕಟ್ಟಿದರು, ಎರಡು ನಕ್ಷೆಗಳನ್ನು ಮುಂದಿಟ್ಟುಕೊಂಡರು; ಒಂದು ಭಾರತದ ಸ್ವಾತಂತ್ರ್ಯ, ಇನ್ನೊಂದು ಕರ್ನಾಟಕದ ಏಕೀಕರಣ" ಎಂದು ಡಾ|| ರಂ. ರಾ. ದಿವಾಕರ್ ಬರೆಯುತ್ತಾರೆ.

ಕನ್ನಡ ಭಾಷಿಕ ಜನ ೨೦ ಆಡಳಿತಗಳಿಗೆ ಒಳಗಾಗಿ ಹರಿದು ಹಂಚಿ ಹೋಗಿದ್ದರು. ಕೆಲವು ಪ್ರದೇಶಗಳು ಬ್ರಿಟಿಶರ ಆಡಳಿತಕ್ಕೆ ಒಳಗಾಗಿದ್ದರೆ, ಇನ್ನು

ಕೆಲವು ದೇಶೀಯ ರಾಜರ ಆಳ್ವಿಕೆಗೆ ಒಳಗಾಗಿದ್ದುವು. ಉತ್ತರ ಕರ್ನಾಟಕದ ಅನೇಕ ಪ್ರದೇಶಗಳು ಮರಾಠಿ ಸಂಸ್ಥಾನಿಕರಿಂದ ಆಳಲ್ಪಡುತ್ತಿದ್ದು ಆ ರಾಜ್ಯಗಳಲ್ಲಿ ಶಿಕ್ಷಣ ಮತ್ತು ಆಡಳಿತಗಳು ಮರಾಠಿಯಲ್ಲೇ ನಡೆಯುತ್ತಲಿದ್ದು ಕನ್ನಡವು ಸಾರ್ವಜನಿಕ ಜೀವನದಿಂದ ಉಚ್ಚಾಟಿತವಾಗಿತ್ತು. ಮುಂಬೈ ಮತ್ತು ಮದ್ರಾಸ್ ಪ್ರಾಂತಗಳಲ್ಲಿದ್ದ ಕನ್ನಡ ಪ್ರದೇಶಗಳು ಆಯಾ ರಾಜ್ಯಗಳ ತೀರ ಕಿರು ಭಾಗಗಳಾಗಿದ್ದು ಕನ್ನಡ ಜನ ಆ ರಾಜ್ಯಗಳಲ್ಲಿ ಅಲ್ಪಸಂಖ್ಯಾತರಾಗಿದ್ದರು. ಈ ರಾಜ್ಯಗಳಲ್ಲಿ ನಂತರ ಸ್ಥಾಪಿತವಾದ ವಿಧಾನ ಸಭೆಗಳಲ್ಲೂ ಕನ್ನಡಿಗರಿಗಿದ್ದ ಪ್ರಾತಿನಿಧ್ಯ ಅತಿ ಕಡಿಮೆ ಪ್ರಮಾಣದ್ದಿತ್ತು. ಕನ್ನಡಿಗರ ಅಲ್ಪಸಂಖ್ಯಾತ ಸ್ಥಿತಿಯಿಂದಾಗಿ ಈ ರಾಜ್ಯಗಳಲ್ಲಿ ಕನ್ನಡ ಪ್ರದೇಶಗಳು ಕಡೆಗಣಿಸಲ್ಪಟ್ಟು ತೀರ ಹಿಂದುಳಿದಿದ್ದವು.

ಹೈದರಾಬಾದ್ ರಾಜ್ಯದಲ್ಲಿಯೂ ಕನ್ನಡ ತಾತ್ಸಾರಕ್ಕೆ ಒಳಗಾಗಿತ್ತು. ಆಡಳಿತ, ಶಿಕ್ಷಣಗಳು ಉರ್ದುವಿನಲ್ಲಿ ನಡೆಯುತ್ತಿದ್ದು, ಇಲ್ಲಿನ ಕನ್ನಡ ಜಿಲ್ಲೆಗಳಂತೂ ತೀರ ಹಿಂದುಳಿದ ಪ್ರದೇಶಗಳಾಗಿದ್ದವು. ರಸ್ತೆ, ಸಾರಿಗೆ, ಶಿಕ್ಷಣ ಸೌಕರ್ಯಗಳು ಹೆಸರಿಗೆ ಮಾತ್ರ ಇದ್ದವು.

ಸಾಂಗ್ಲಿ, ಮಿರಜ್, ಕುರಂದವಾಡ್, ಜತ್ತ, ಅಕ್ಕಲಕೋಟೆ ಮುಂತಾದ ಸಂಸ್ಥಾನಗಳಲ್ಲಿ ಕನ್ನಡವು ಪೂರ್ತಿಯಾಗಿ ಮಾಯವಾಗಿ ಆ ಪ್ರದೇಶಗಳು ಇಂದಿಗೂ ಮಹಾರಾಷ್ಟ್ರದಲ್ಲಿ ಉಳಿಯುವಂಥ ದುಸ್ಥಿತಿ ಬಂತು.

ಕನ್ನಡ ಪ್ರದೇಶಗಳು ಹೇಗೆ ಹರಿದು ಹಂಚಿ ಹೋಗಿದ್ದುವೆಂಬುದನ್ನು ಕಲ್ಪಿಸಿಕೊಂಡರೆ ಬಹುಶಃ ಕನ್ನಡನಾಡಿನ ಏಕೀಕರಣಪೂರ್ವದ ದಯನೀಯ ಸ್ಥಿತಿಯ ಚಿತ್ರಣ ಕಣ್ಮುಂದೆ ಕಟ್ಟುತ್ತದೆ. ಪುಣೆಯಿಂದ ಬೆಂಗಳೂರಿಗೆ ಬರುವ ರೈಲು ಎಂಟು ಆಡಳಿತಗಳಿಗೆ ಸೇರಿದ ಪ್ರದೇಶಗಳಿಂದ ಹಾಯ್ದು ಬರಬೇಕಿತ್ತು.

೧೯೧೭ರಲ್ಲಿ ಪ್ರಕಟವಾದ ಆಲೂರು ವೆಂಕಟರಾಯರ 'ಕರ್ನಾಟಕದ ಗತ ವೈಭವ'ವು ಅಂದು ಕರ್ನಾಟಕದ ಬುದ್ಧಿಜೀವಿಗಳಲ್ಲಿ ಆಗುತ್ತಿದ್ದ ಜಾಗೃತಿಯನ್ನು ಪ್ರತಿಬಿಂಬಿಸುತ್ತದೆ.

ಗ್ರಂಥಗಳ ಪ್ರಕಟಣೆಗಳ ಜೊತೆಯಾಗಿಯೇ ಕನ್ನಡ ಸಾಹಿತ್ಯ ಹಾಗೂ ವಿದ್ವತ್ತುಗಳನ್ನು ಬೆಂಬಲಿಸಿ ಪ್ರೋತ್ಸಾಹಿಸಲು ಕನ್ನಡ ನಾಡಿನಲ್ಲಿ ಕೆಲವು ಸಂಸ್ಥೆಗಳು ಹುಟ್ಟಿಕೊಂಡವು. ೧೮೯೦ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಾಯಿತು.

ಇದಕ್ಕೂ ಮೊದಲೇ ಉತ್ತರ ಕರ್ನಾಟಕದ ಶಿಕ್ಷಣ ಇಲಾಖೆಯ ಅಧಿಕಾರಿ ಡೆಪ್ಯೂಟಿ ಚನ್ನಬಸಪ್ಪನವರು ಮರಾಠಿ ಶಿಕ್ಷಣದ ವಿರುದ್ಧ ಕನ್ನಡ

ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಂತೆ ಪ್ರೇರೇಪಿಸಿದರಲ್ಲದೇ ಮೋಡಿ ಲಿಪಿ(ಹಳೆಯ ಮರಾಠಿ ಲಿಪಿ)ಯ ಬದಲು ಕನ್ನಡದಲ್ಲೇ ಲೆಕ್ಕ ಪತ್ರಗಳನ್ನಿಡಲು ಕನ್ನಡಿಗರನ್ನು ಪ್ರೇರೇಪಿಸಿ ಸಾಕಷ್ಟು ಜಾಗೃತಿಯನ್ನು ಹುಟ್ಟಿಸಿದ್ದರು.

ವಿದ್ಯಾವರ್ಧಕ ಸಂಘವು ೧೮೯೬ರಲ್ಲಿ 'ವಾಗ್ಭೂಷಣ' ಎಂಬ ಮುಖಪತ್ರವನ್ನು ಹೊರಡಿಸಿತು. ಸಂಘವು ಕರ್ನಾಟಕದ ಅನ್ಯ ಭಾಗಗಳ ಜೊತೆ ಸಂಪರ್ಕವಿರಿಸಿಕೊಂಡಿತ್ತು. ಕನ್ನಡ ಪ್ರದೇಶಗಳು ಏಕಾಡಳಿತಕ್ಕೆ ಒಳಪಡಬೇಕೆಂದು ಮೊದಲು ವಿಚಾರ ಪ್ರಕಟಿಸಿದವರು ಬೆನಗಲ್ ರಾಮರಾವ್ ಎಂದು ವಿದ್ವಾನ್ ಬಿ. ಶಿವಮೂರ್ತಿ ಶಾಸ್ತ್ರಿಗಳು ಹೇಳಿದ್ದಾರೆ.

೧೯೧೫ರಲ್ಲಿ ಕರ್ನಾಟಕದ ಹಿರಿಯ ಲೇಖಕರೂ, ಬುದ್ಧಿಜೀವಿಗಳೂ ಸಭೆ ಸೇರಿ 'ಕರ್ನಾಟಕದ ಸಾಹಿತ್ಯ ಪರಿಷತ್ತ'ನ್ನು ಸ್ಥಾಪಿಸಿದರು. ೧೯೧೬ರಲ್ಲಿ ಆಲೂರು ವೆಂಕಟರಾಯರು ಧಾರವಾಡದಲ್ಲಿ ಕರ್ನಾಟಕ ಸಭಾವನ್ನು ಸ್ಥಾಪಿಸಿದರು.

ಮೈಸೂರಿನ ಮಾಜಿ ದಿವಾನರಾಗಿದ್ದ ಶ್ರೀ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ೧೯೨೦ರಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಳನವು ನಡೆದು ಕರ್ನಾಟಕ ಏಕೀಕರಣವನ್ನು ಬಲವಾಗಿ ಪ್ರತಿಪಾದಿಸಿತು.

೧೯೨೪ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಸೇರಿದಾಗ ಕರ್ನಾಟಕ ಏಕೀಕರಣ ಸಮ್ಮೇಳನವು ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಸೇರಿ ಕರ್ನಾಟಕ ಏಕೀಕರಣ ಸಭಾವನ್ನು ಸ್ಥಾಪಿಸಿತು.

ಮುಂದೆ ಇಂಥ ಸಮ್ಮೇಳನಗಳು ಆಗಾಗ ನಡೆದವು.

೧೯೩೧ರಲ್ಲಿ ಕಾರವಾರದಲ್ಲಿ ಜೆ. ವಿ. ಸಲ್ಡಾನಾ ಅವರ ಅಧ್ಯಕ್ಷತೆಯಲ್ಲಿ ಹಾಗೂ ೧೯೪೪ರಲ್ಲಿ ಧಾರವಾಡದಲ್ಲಿ ಕೆ. ಬಿ. ಜಿನರಾಜ ಹೆಗ್ಗಡೆಯವರ ನೇತೃತ್ವದಲ್ಲಿ ಏಕೀಕರಣವನ್ನು ಬೆಂಬಲಿಸುವ ಸಮ್ಮೇಳನಗಳು ನಡೆದವು.

೧೯೨೭ರಲ್ಲಿ ಮುಂಬೈಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್‌ನ ಪ್ರತಿನಿಧಿ ಸಭೆಯು(ಎ.ಐ.ಸಿ.ಸಿ) ಕರ್ನಾಟಕವನ್ನು ಒಂದು ಪ್ರತ್ಯೇಕ ಪ್ರಾಂತವಾಗಿ ಮಾಡಲು ಬೆಂಬಲ ಸೂಚಿಸಿತು. ೧೯೩೭ರಲ್ಲಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ಸು ಕರ್ನಾಟಕ ಏಕೀಕರಣವನ್ನು ಬೆಂಬಲಿಸಿ ತನ್ನ ಕಾರ್ಯಕ್ರಮವಾಗಿ ಸೂಚಿಸಿತು.

೧೯೩೮ರಲ್ಲಿ ಮುಂಬೈ, ಮದ್ರಾಸ್‌ಗಳಲ್ಲಿ ಹೊಸದಾಗಿ ಚುನಾಯಿತವಾದ ಶಾಸನ ಸಭೆಗಳು ಏಕೀಕರಣವನ್ನು ಒತ್ತಾಯಿಸಿ ಠರಾವು ಮಾಡಿದವು.

ಕನ್ನಡ ಸಾಹಿತ್ಯ, ಪತ್ರಿಕೋದ್ಯಮಗಳು ಏಕೀಕರಣಕ್ಕೆ ಬೇಕಾದ ವಾತಾವರಣವನ್ನು ಕಲ್ಪಿಸುವಲ್ಲಿ ಅಗ್ರ ಪಾತ್ರವಹಿಸಿದವು.

ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು', ಬಿ.ಎಂ.ಶ್ರೀಯವರ 'ಏರಿಸೀ ಹಾರಿಸೀ ಕನ್ನಡಿಗರ ಬಾವುಟ', ಶಾಂತ ಕವಿಯ 'ರಕ್ಷಿಸು ಕರ್ನಾಟಕ ದೇವಿ', ಗೋವಿಂದ ಪೈಯವರ 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ', ಬೇಂದ್ರೆಯವರ 'ಏಳು ಶೂರರ ಖಣೀ ಏಳು ಶೂರರ ರಾಣಿ', ಕುವೆಂಪುರವರ 'ಜಯಹೇ ಕರ್ನಾಟಕ ಮಾತೆ'– ಮುಂತಾದ ನಾಡ ಗೀತೆಗಳು ಕನ್ನಡ ನಾಡು, ನುಡಿಗಳ ಬಗೆಗಿನ ಅಭಿಮಾನದ ಜಾಗೃತಿಯಲ್ಲಿ ಅತ್ಯಂತ ಪ್ರಭಾವೀ ಪಾತ್ರವಹಿಸಿದವು.

ಧಾರವಾಡದ 'ವಾಗ್ಭೂಷಣ', 'ಜಯ ಕರ್ನಾಟಕ' ಮತ್ತು 'ಕರ್ಮವೀರ' (ಮುಂದೆ 'ಕರ್ಮವೀರ' ಹುಬ್ಬಳ್ಳಿಗೆ ಹೋಯಿತು) ಬೆಳಗಾವಿಯ 'ಸಂಯುಕ್ತ ಕರ್ನಾಟಕ', ಬಳ್ಳಾರಿಯ 'ನವ ಸಂದೇಶ', ಬೆಂಗಳೂರಿನ 'ವಿಶ್ವ ಕರ್ನಾಟಕ', ಮಂಗಳೂರಿನ 'ರಾಷ್ಟ್ರ ಬಂಧು', 'ಕಂಠೀರವ', ಹುಬ್ಬಳ್ಳಿಯ 'ಪ್ರಪಂಚ' ಮುಂತಾದ ಪತ್ರಿಕೆಗಳು ಏಕೀಕರಣ ಚಳವಳಿಯಲ್ಲಿ, ಸ್ವಾತಂತ್ರ್ಯ ಪೂರ್ವದ ಅವಧಿಯಲ್ಲಿ ಮತ್ತು ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಮಹತ್ವದ ಪಾತ್ರವಹಿಸಿದ್ದವು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ 'ಕರ್ನಾಟಕ ಸಂಘ'ವು ಸ್ಥಾಪಿತವಾಯಿತು. ಅದು 'ಪ್ರಬುದ್ಧ ಕರ್ನಾಟಕ'ವನ್ನು ಆರಂಭಿಸಿತು. ನಾಡಿನೆಲ್ಲೆಡೆ ಕಾಲೇಜುಗಳಲ್ಲಿ, ಪಟ್ಟಣಗಳಲ್ಲಿ ಕರ್ನಾಟಕ ಸಂಘಗಳು ಅಸ್ತಿತ್ವಕ್ಕೆ ಬಂದು ಕನ್ನಡದ ಏಕೀಕರಣದ ಕೆಲಸವನ್ನು ಮಾಡಿದವು.

ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದು ಖಚಿತವಾದ ನಂತರ ೧೯೪೭ರ ಆಗಸ್ಟನಲ್ಲಿ 'ಕರ್ನಾಟಕಸ್ಥರ ಮಹಾಸಭೆ' (ಆಲ್ ಕರ್ನಾಟಕ ಕನ್‌ವೆನ್‌ಶನ್) ಮುಂಬೈಯ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರ ಅಧ್ಯಕ್ಷತೆಯಲ್ಲಿ ದಾವಣಗೆರೆಯಲ್ಲಿ ಸೇರಿತು. ಮದ್ರಾಸಿನ ಮಂತ್ರಿಗಳಾದ ಶ್ರೀ ರಾಮಕೃಷ್ಣ ಕಾರಂತರು ಇದನ್ನು ಉದ್ಘಾಟಿಸಿದರು. ಕರ್ನಾಟಕ ಪ್ರಾಂತ ರಚನೆಗೆ ಶೀಘ್ರವಾಗಿ ಕಾರ್ಯಪ್ರವೃತ್ತವಾಗುವಂತೆ ಆಗ್ರಹಪೂರ್ವಕವಾಗಿ ಘಟನಾ ಸಮಿತಿಯನ್ನು ಮಹಾಸಭೆ ಕೇಳಿಕೊಂಡಿತು. ಇದಾದ ನಂತರ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿದ ಮೈಸೂರು ಕಾಂಗ್ರೆಸ್ಸು ದಾವಣಗೆರೆ ಠರಾವಿಗೆ ಬೆಂಬಲ ಸೂಚಿಸಿತು.

ಭಾರತವು ಸ್ವತಂತ್ರವಾದಾಗ ಕನ್ನಡ ಭಾಷಾ ಪ್ರದೇಶಗಳು (ಸಂಸ್ಥಾನಗಳ ವಿಲೀನದ ನಂತರ) ಮೈಸೂರು, ಹೈದರಾಬಾದು, ಮುಂಬೈ, ಮದ್ರಾಸು ಮತ್ತು ಕೊಡಗು ಈ ರೀತಿ ಕೇವಲ ಐದು ಆಡಳಿತಕ್ಕೆ ಸೇರಿದವು. ದೇಶವು ಸ್ವತಂತ್ರವಾದರೂ ಕಾಂಗ್ರೆಸ್ಸು ಭಾಷಾವಾರು ಪ್ರಾಂತಗಳ ರಚನೆಯ ದೆಸೆಯಲ್ಲಿ ಯಾವ ಹೆಜ್ಜೆಯನ್ನೂ ಇಡಲಿಲ್ಲ.

೧೯೪೭ರ ಡಿಸೆಂಬರ್‌ನಲ್ಲಿ ಕಾಸರಗೋಡಿನಲ್ಲಿ ರಂ.ರಾ.ದಿವಾಕರರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನವು ಜರುಗಿ ಏಕೀಕರಣದ ಪರವಾಗಿ ತೀವ್ರ ಒತ್ತಾಯ ತರುವ ಗೊತ್ತುವಳಿಯನ್ನು ಪಾಸು ಮಾಡಿತು.

ಭಾಷಾವಾರು ರಾಜ್ಯ ರಚನೆಯ ಪ್ರಶ್ನೆಯನ್ನು ಪರಿಶೀಲಿಸಲು ನೇಮಿಸಿದ್ದ ಎಸ್. ಕೆ. ಧರ್ ಸಮಿತಿಯು ೧೯೪೮ರಲ್ಲಿ ತನ್ನ ವರದಿ ಸಲ್ಲಿಸಿ ಭಾಷಾವಾರು ಪ್ರಾಂತ ರಚನೆಯು ಸಮರ್ಥನೀಯವಲ್ಲವೆಂದು ವಾದಿಸಿತು. ಇದು ಕನ್ನಡಿಗರ ಅಸಮಾಧಾನಕ್ಕೆ ಕಾರಣವಾಯಿತು.

ಇದೇ ಕಾಲಕ್ಕೆ ಭಾಷಾವಾರು ಪ್ರಾಂತ ರಚನೆಯ ಪುನಃ ಪರಿಶೀಲನೆಗೆ ಕಾಂಗ್ರೆಸ್ಸು 'ಜೆ.ವಿ.ಪಿ' (ಜವಾಹರಲಾಲ ನೆಹರೂ, ವಲ್ಲಭಭಾಯ್ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯ)ಸಮಿತಿಯನ್ನು ನೇಮಿಸಿತು. ಹರಿಹರದಲ್ಲಿ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಕೆ.ಪಿ.ಸಿ.ಸಿಯು ಕರ್ನಾಟಕ ರಾಜ್ಯ ನಿರ್ಮಾಣವನ್ನು ಒತ್ತಾಯಿಸಿ ಠರಾವು ಮಾಡಿತು. ೧೯೪೯ರ ಏಪ್ರಿಲ್‌ನಲ್ಲಿ ಪ್ರಕಟವಾದ 'ಜೆ.ವಿ.ಪಿ' ವರದಿಯು ಆಂಧ್ರ ಪ್ರಾಂತ ರಚನೆಯನ್ನು ಮಾತ್ರ ಬೆಂಬಲಿಸಿ ಅನ್ಯ ಭಾಷಾ ಪ್ರಾಂತಗಳ ರಚನೆಯ ವಿಚಾರವನ್ನು ಮುಂದೂಡಿತು. ಈ ಬಗ್ಗೆ ಕರ್ನಾಟಕದಲ್ಲಿ ತೀವ್ರ ಪ್ರತಿಭಟನೆ ಕಂಡು ಬಂದಿತು.

೧೯೫೧ರಲ್ಲಿ ಎ.ಐ.ಸಿ.ಸಿ ಅಧಿವೇಶನ ಬೆಂಗಳೂರಿನಲ್ಲಿ ನಡೆದಾಗ ತಾಳಕೆರೆ ಸುಬ್ರಹ್ಮಣ್ಯ ಅವರ ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ ಪ್ರಾಂತ ರಚನಾ ಸಮ್ಮೇಳನ ನಡೆಯಿತು. ಅಲ್ಲಿ ಆಂಧ್ರದ ಕಳಾ ವೆಂಕಟರಾವ್, ಮಹಾರಾಷ್ಟ್ರದ ಹಿರೇ, ತಮಿಳುನಾಡಿನ ಕಾಮರಾಜ ನಾಡಾರ್ ಮುಂತಾದವರು ಏಕೀಕರಣವನ್ನು ಬೆಂಬಲಿಸಿ ಮಾತನಾಡಿದರು.

೧೯೫೧ರಲ್ಲಿ ಕಾಂಗ್ರೆಸ್ಸು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಭಾಷಾವಾರು ರಾಜ್ಯ ರಚನೆಯ ವಿಚಾರವನ್ನು ಸೇರಿಸಿತ್ತು.

ಆಂಧ್ರ ಪ್ರಾಂತ ರಚನೆಯನ್ನು ಒತ್ತಾಯಿಸಿ ಪೊಟ್ಟಿ ಶ್ರೀರಾಮುಲು ಎಂಬವರು ೧೯೫೨ರ ಡಿಸೆಂಬರ್‌ನಲ್ಲಿ ಆಮರಣ ಉಪವಾಸ ಕೈಗೊಂಡು ಹುತಾತ್ಮರಾದದ್ದರಿಂದ ಆಂಧ್ರ ಪ್ರಾಂತದಾದ್ಯಂತ ಭಾರೀ ಗಲಭೆಗಳಾದ್ದರಿಂದ

ಕೇಂದ್ರ ಸರಕಾರವು ಆಂಧ್ರ ಪ್ರಾಂತ ರಚನೆಗೆ ಒಪ್ಪಿಕೊಂಡಿತು. ಆಂಧ್ರ ಪ್ರಾಂತದಲ್ಲಿ ಬಳ್ಳಾರಿ ಸೇರ್ಪಡೆ ಕುರಿತು ವಿವಾದ ಉಂಟಾದಾಗ ಕೇಂದ್ರವು ಮಿಶ್ರಾ ಆಯೋಗವನ್ನು ನೇಮಿಸಿತು. ಈ ಆಯೋಗವು ಬಳ್ಳಾರಿಯು ಕನ್ನಡ ಪ್ರದೇಶವೆಂದು ತೀರ್ಪು ನೀಡಿತು. ಈ ಮೊದಲೇ ವಾಂಛೂ ಸಮಿತಿಯು ಆಲೂರು, ಅದವಾನಿ ರಾಯದುರ್ಗಗಳನ್ನು ಆಂಧ್ರಕ್ಕೆ ಸೇರಿಸಲು ಶಿಫಾರಸ್ಸು ಮಾಡಿತ್ತು. ೧೯೫೩ರಲ್ಲಿ ಆಂಧ್ರ ಪ್ರಾಂತ ರಚನೆಯಾದಾಗ ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳನ್ನು ಮೈಸೂರು ಸಂಸ್ಥಾನ ಪ್ರದೇಶದಲ್ಲಿ ವಿಲೀನಗೊಳಿಸಲಾಯಿತು.

೧೯೫೩ರಲ್ಲಿ ಮೈಸೂರಿನ ಹಿರಿಯ ಮುತ್ಸದ್ದಿ ಸರ್ ಎಂ. ವಿಶ್ವೇಶ್ವರಯ್ಯನವರು ಹಾಗೂ ಮೈಸೂರಿನ ಮುಖ್ಯಮಂತ್ರಿಯಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ಏಕೀಕರಣವನ್ನು ಬೆಂಬಲಿಸಿ ಮಾತನಾಡಿದರು.

ಇದೇ ಕಾಲಕ್ಕೆ ಏಕೀಕರಣ ಚಳವಳಿಯ ಅಧ್ವರ್ಯುಗಳಲ್ಲಿ ಒಬ್ಬರಾದ ಅಂದಾನಪ್ಪ ದೊಡ್ಡಮೇಟಿಯವರು ಸ್ವಗ್ರಾಮವಾದ ಜಕ್ಕಲಿಯಲ್ಲಿ ಸರತಿ ಉಪವಾಸ ಸತ್ರವನ್ನು ಆರಂಭಿಸಿದರು. ಸರತಿ ಉಪವಾಸ ಚಳವಳಿ ಬಿಜಾಪೂರ, ಉತ್ತರ ಕನ್ನಡ ಜಿಲ್ಲೆಗಳಿಗೂ ಹರಡಿತು. ಹುಬ್ಬಳ್ಳಿ ಬಳಿಯ ಅದರಗುಂಚಿಯಲ್ಲಿ. ಶಂಕರಗೌಡ ಪಾಟೀಲ ಎಂಬ ರಾಜಕೀಯ ಕಾರ್ಯಕರ್ತರು ಆಮರಣ ಉಪವಾಸ ಕೈಗೊಂಡರು. ಹುಬ್ಬಳ್ಳಿಯಲ್ಲಿ ನಡೆದ ಕೆ.ಪಿ.ಸಿ.ಸಿ ಸಭೆಯ ಕಾಲಕ್ಕೆ ಭಾರೀ ಪ್ರದರ್ಶನ ಹಾಗೂ ಗಲಭೆಗಳು ನಡೆದವು. ಈ ಘಟನೆಯು ಏಕೀಕರಣ ಚಳವಳಿಗೆ ಹೆಚ್ಚಿನ ತೀವ್ರತೆಯನ್ನು ತಂದುಕೊಟ್ಟಿತು.

೧೯೫೩ರಲ್ಲಿ 'ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು' ಎಂಬ ಉಗ್ರ ಚಳವಳಿಯ ಮನೋಭಾವದ ಸಂಸ್ಥೆಯೊಂದು ಉದಯಿಸಿ ದಾವಣಗೆರೆಯಲ್ಲಿ ಸಮ್ಮೇಳನ ನಡೆಸಿತು. ಕೋಟ ರಾಮಕೃಷ್ಣ ಕಾರಂತರು ಈ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಳವಂಡಿ ಶಿವಮೂರ್ತಿ ಸ್ವಾಮಿಗಳು ಉದ್ಘಾಟಕರು. ಏಕೀಕರಣಕ್ಕಾಗಿ ಸತ್ಯಾಗ್ರಹ ನಡೆಸಲು ಪರಿಷತ್ತು ಕರೆ ನೀಡಿತು. ವಾಲಿ ಚೆನ್ನಪ್ಪ, ಶಾಂತಿನಾಥ ಇಂಗಳೆ, ವೀರಭದ್ರಪ್ಪ ಶಿರೂರ, ಪಟ್ಟಣ ಮಹಾದೇವಪ್ಪ, ಮುರಗೋಡ ಮಹಾದೇವಪ್ಪ ಮುಂತಾದವರ ನಾಯಕತ್ವದಲ್ಲಿ ಸಹಸ್ರಾರು ಸತ್ಯಾಗ್ರಹಿಗಳು ಚಳವಳಿಯಲ್ಲಿ ಭಾಗವಹಿಸಿ ಬಂಧಿತರಾದರು.

ಇದೇ ಕಾಲದಲ್ಲಿ ಮುಂಬೈ ವಿಧಾನ ಸಭೆಗೆ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ಸು ಸೋತಿತು.

ಹುಬ್ಬಳ್ಳಿಯಲ್ಲಿ ಏಕೀಕರಣ ಪಕ್ಷದ ಹುರಿಯಾಳು ಗೆದ್ದರು. ಕಾಂಗ್ರೆಸ್ಸೇ ಅಲ್ಲದೇ, ಕಮ್ಯುನಿಸ್ಟ್‌ಪಕ್ಷ, ಜನಸಂಘ, ಹಿಂದೂ ಮಹಾಸಭಾ, ಪ್ರಜಾ ಸಮಾಜವಾದಿ ಪಕ್ಷಗಳೂ ಏಕೀಕರಣವನ್ನು ಬೆಂಬಲಿಸಿದ್ದವು.

ಕರ್ನಾಟಕ ಏಕೀಕರಣ ಚಳವಳಿಯ ಕಾಲದಲ್ಲಿ, ಈ ಹಿಂದೆ, ಕಲಬುರ್ಗಿಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ಸಭೆ ಸೇರಿದಾಗಿನ ಒಂದು ಘಟನೆಯನ್ನು ಶ್ರೀ ಎಸ್. ನಿಜಲಿಂಗಪ್ಪನವರು ಹೀಗೆ ಸ್ಮರಿಸಿಕೊಂಡಿದ್ದಾರೆ :

"ಅಂದಿನ ಸಭೆಯ ಅಧ್ಯಕ್ಷತೆಯನ್ನು ನಾನೇ ವಹಿಸಿದ್ದೆ. ಮೈಸೂರಿನ ಜನರ ಮನಸ್ಸಿಗೆ ನೋವಾಗದಂತೆ ಕರ್ನಾಟಕ ಏಕೀಕರಣವಾಗಬೇಕೆಂಬ ಗೊತ್ತುವಳಿಯನ್ನು ತಿ. ರು. ನೆಸ್ವಿಯವರು ಮಂಡಿಸಿದರು. ಟಿ. ಸುಬ್ರಹ್ಮಣ್ಯ ಅವರು ಅನುಮೋದಿಸಿದರು. ನಮ್ಮ ಅಭಿಪ್ರಾಯದಲ್ಲಿ ಈ ಅಧಿಕೃತ ಗೊತ್ತುವಳಿ ಸ್ವೀಕೃತ ಆಗಬೇಕೆನ್ನುವುದೇ ಆಗಿತ್ತು. ಆದರೆ, ಈ ಹುಮ್ಮಸ್ಸಿನ ಯುವಕರು ಕೇಳಬೇಕಲ್ಲ? ಪಾಟೀಲ ಪುಟ್ಟಪ್ಪನವರು 'ಮೈಸೂರನ್ನು ವಿಲೀನಗೊಳಿಸಿ' 'ಕರ್ನಾಟಕ' ರಾಜ್ಯವಾಗಬೇಕೆಂದು ತಿದ್ದುಪಡಿ ಸೂಚಿಸಿದರು. ಅದಕ್ಕೆ ನಮ್ಮವರೇ ಆದ 'ಪಾಪು' ಸ್ನೇಹಿತರಾದ ಕೋ. ಚೆನ್ನಬಸಪ್ಪ ಅವರು ಅನುಮೋದನೆ ನೀಡಿದರು. ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ನಾವು ಎಷ್ಟೇ ಒತ್ತಾಯಿಸಿದರೂ ಈ ಬಿಸಿರಕ್ತದ ತರುಣರು ಒಪ್ಪಲಿಲ್ಲ. ಆಗ ತಿದ್ದುಪಡಿಯನ್ನು ಮತಕ್ಕೆ ಹಾಕಲಾಯಿತು. ಸಭೆ ಭಾರೀ ಬಹುಮತದಿಂದ ತಿದ್ದುಪಡಿಯನ್ನು ಒಪ್ಪಿಕೊಂಡಿತು. ಈ ತರುಣರು ನಮ್ಮನ್ನು ಸೋಲಿಸಿಯೇ ಬಿಟ್ಟರು! ಆದರೆ, ಅದರಿಂದ ನಮಗೇನೂ ಅಂಥ ದುಃಖವಾಗಲಿಲ್ಲ – ಆ ಮಾತು ಬೇರೆ".

ಆಂಧ್ರ ಪ್ರಾಂತದ ರಚನೆಯಿಂದ ಕನ್ನಡಿಗರಲ್ಲಾದ ಅಸಮಾಧಾನ, ಉಪಚುನಾವಣೆಗಳಲ್ಲಾದ ಪರಾಜಯ ಹಾಗೂ 'ಅ.ಕ.ರಾ.ನಿ. ಪರಿಷತ್ತು' ನಡೆಸಿದ ಚಳವಳಿಗಳ ಪರಿಣಾಮದಿಂದಾಗಿ ಕೇಂದ್ರ ಸರಕಾರವು ೧೯೫೩ರ ಡಿಸೆಂಬರ್‌ದಲ್ಲಿ ಫಜಲ್‌ಅಲಿ ನೇತೃತ್ವದಲ್ಲಿ 'ರಾಜ್ಯ ಪುನಾರಚನಾ ಆಯೋಗ'ವನ್ನು ನೇಮಿಸಿತು. ಪಂಡಿತ ಹೃದಯನಾಥ ಕುಂಝುರು ಮತ್ತು ಸರದಾರ ಕೆ. ಎಂ. ಪಣಿಕ್ಕರ್ ಅವರು ಈ ಆಯೋಗದ ಸದಸ್ಯರಾಗಿದ್ದರು.

ಈ ಆಯೋಗವು ೧೯೫೫ರ ಅಕ್ಟೋಬರ್‌ದಲ್ಲಿ ತನ್ನ ವರದಿ ಸಲ್ಲಿಸಿತು. ಕರ್ನಾಟಕ ಏಕೀಕರಣಕ್ಕೆ ಈ ವರದಿಯಲ್ಲಿ ಶಿಫಾರಸ್ಸು ಮಾಡಲಾಗಿತ್ತು. ಆದರೆ ಕಾಸರಗೋಡು ತಾಲೂಕನ್ನು ಕೇರಳಕ್ಕೂ, ಬಳ್ಳಾರಿ, ಹೊಸಪೇಟೆ ಪ್ರದೇಶಗಳನ್ನು ಆಂಧ್ರಕ್ಕೂ ನೀಡುವಂತೆ ಈ ಆಯೋಗ ಸಲಹೆ ನೀಡಿತ್ತು.

೧೯೫೬ರ ಜನವರಿ ತಿಂಗಳಲ್ಲಿ ಕೇಂದ್ರ ಸರಕಾರವು ಕನ್ನಡ ರಾಜ್ಯ ರಚನೆಗೆ ಒಪ್ಪಿಗೆ ಸೂಚಿಸಿ ಹೊಸ ರಾಜ್ಯವನ್ನು 'ಮೈಸೂರು' ಎಂದು ಕರೆಯಲಾಗುವುದೆಂದು ಪ್ರಕಟಿಸಿತು. (ರಾಜ್ಯ ಪುನಾರಚನಾ ಆಯೋಗವು ತನ್ನ ವರದಿಯನ್ನು ಸಿದ್ಧಪಡಿಸುತ್ತಿದ್ದಾಗ ಮೈಸೂರು ಸಂಸ್ಥಾನದ ಕೆಲವು ವರ್ಗಗಳು ಒಮ್ಮಿಂದೊಮ್ಮೆಗೇ ಏಕೀಕರಣವನ್ನು ವಿರೋಧಿಸಿದ್ದಲ್ಲದೇ ಎರಡು ಕರ್ನಾಟಕಗಳ ರಚನೆಗೆ ಸೂಚನೆ ನೀಡಿ ಮೈಸೂರಿನ ವೈಶಿಷ್ಟ್ಯವನ್ನು ಉಳಿಸಿಕೊಳ್ಳಬೇಕೆಂದು ಪ್ರಬಲವಾಗಿ ವಾದಿಸತೊಡಗಿದವು. ಈ ಕಾರಣದಿಂದ ಹೊಸ ರಾಜ್ಯದ ಹೆಸರನ್ನು 'ಮೈಸೂರು' ಎಂದೇ ಮುಂದುವರಿಸಲು ತೀರ್ಮಾನಿಸಲಾಯಿತು.)

ಮೈಸೂರು ವಿಧಾನಸಭೆಯು ೧೯೫೫ರಲ್ಲಿ ಏಕೀಕೃತ ರಾಜ್ಯದ ರಚನೆಯನ್ನು ಸ್ವಾಗತಿಸುವ ಹಾಗೂ ಬಳ್ಳಾರಿಯು ಆಂಧ್ರಕ್ಕೆ ವರ್ಗಾಯಿಸಲ್ಪಡಬಾರದೆಂದು ಒತ್ತಾಯಿಸುವ ಠರಾವನ್ನು ಮಾಡಿತು. ಏಕೀಕರಣ ವಿರೋಧಿಗಳ ಮನವೊಲಿಸಲು ಕೆಂಗಲ್ ಹನುಮಂತಯ್ಯನವರು ಬಹಳ ಶ್ರಮಪಟ್ಟರು. ಈ ಕಾರಣಕ್ಕಾಗಿಯೇ ಅವರು ತಮ್ಮ ಮುಖ್ಯಮಂತ್ರಿ ಹುದ್ದೆಯನ್ನು ತ್ಯಾಗ ಮಾಡಬೇಕಾಗಿ ಬಂತು!

೧೯೫೬ರ ಆಗಸ್ಟ್‌ನಲ್ಲಿ ಸಂಸತ್ತಿನ ಉಭಯ ಸದನಗಳೂ ನವ ಮೈಸೂರು ರಾಜ್ಯ ನಿರ್ಮಾಣದ ಮಸೂದೆಗೆ ಅಸ್ತು ನೀಡಿದವು. ಬಳ್ಳಾರಿಯು ಕರ್ನಾಟಕದಲ್ಲಿ ಉಳಿಯಿತು. ಆದರೆ ಕಾಸರಗೋಡು, ತಾಳವಾಡಿ, ಹೊಸೂರು, ಮಡಕಶಿರಾ, ಜತ್ತ, ಅಕ್ಕಲಕೋಟೆ, ಸೊಲ್ಲಾಪುರ ಮುಂತಾದ ಕನ್ನಡ ಪ್ರದೇಶಗಳು ಮೈಸೂರಿನ ಹೊರಗುಳಿದವು.

೧೯೫೬ರ ನವಂಬರ ಒಂದರಂದು ವಿಶಾಲ ಮೈಸೂರು ರಾಜ್ಯದ ಉದಯವಾಯಿತು.

## ನನಸಾದ ಏಕೀಕರಣದ ಕನಸು : ಮೊದಲ ಮುಖ್ಯಮಂತ್ರಿ 'ಎಸ್ಸೆನ್'

೧೯೫೬ರ ನವಂಬರ ೧ – ಕನ್ನಡಿಗರ ಬಹುದಿನದ ಕನಸು ನನಸಾದ ದಿನ! ರಾಜ್ಯಪುನರ್ವಿಂಗಡಣಾ ಆಯೋಗದ ಶಿಫಾರಸಿನ ಮೇರೆಗೆ, ಭಾಷಾವಾರು ತಳಹದಿಯ ಮೇಲೆ ಹೊಸದಾಗಿ ರಚಿತವಾದ 'ವಿಶಾಲ ಮೈಸೂರು ರಾಜ್ಯ'ದ ಮೊಟ್ಟಮೊದಲ ಮುಖ್ಯಮಂತ್ರಿಯಾಗಿ 'ಎಸ್ಸೆನ್' ಎಂದೇ

ಚಿರಪರಿಚಿತರಾಗಿದ್ದ ಕರ್ನಾಟಕ ಏಕೀಕರಣದ ರೂವಾರಿ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಅಧಿಕಾರ ವಹಿಸಿಕೊಂಡರು. ಕೆಲವು ಒಕ್ಕಲಿಗ ಮುಖಂಡರು ಕಡಿದಾಳ ಮಂಜಪ್ಪನವರು ಮುಖ್ಯಮಂತ್ರಿಯಾಗಬೇಕೆಂದು ಬಯಸಿದ್ದರು. ಹಾಗೆ ನೋಡಿದರೆ, ಜವಾಹರಲಾಲ ನೆಹರೂರಿಗೂ 'ಎಸ್ಸೆನ್' ಮುಖ್ಯಮಂತ್ರಿಯಾಗುವುದು ಇಷ್ಟವಿರಲಿಲ್ಲ. ಆದರೂ ನಿಜಲಿಂಗಪ್ಪನವರು ನವೋದಿತ 'ವಿಶಾಲ ಮೈಸೂರು ರಾಜ್ಯ'ದ ಮುಖ್ಯಮಂತ್ರಿಯಾಗಿ ಒಮ್ಮತದಿಂದ ಆಯ್ಕೆಯಾದರು. ಹಳೇ ಮೈಸೂರಿಗರ ವಿರೋಧದಿಂದಾಗಿ ಹೊಸ ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಟ್ಟು ಕರೆಯುವ ಭಾಗ್ಯ ಕನ್ನಡಿಗರಿಗೆ ಒದಗಿ ಬರಲಿಲ್ಲ. ಆದರೆ, ಮುಂದೆ ೧೯೭೩ರಲ್ಲಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ರಾಜ್ಯಕ್ಕೆ 'ಕರ್ನಾಟಕ' ಎಂದು ಕರೆಯುವುದನ್ನು ವಿರೋಧಿಸಿದವರಲ್ಲಿ ಪ್ರಮುಖರಾಗಿದ್ದ ದೇವರಾಜ ಅರಸ ಮುಖ್ಯಮಂತ್ರಿ ಯಾಗಿದ್ದಾಗಲೇ 'ವಿಶಾಲ ಮೈಸೂರು' ಕರ್ನಾಟಕ ಎಂದು ಪುನರ್ನಾಮಕರಣ ಗೊಂಡದ್ದು ಈಗ ಇತಿಹಾಸ.

೧೯೫೭ರ ವಿಧಾನ ಸಭಾ ಚುನಾವಣೆಯಲ್ಲಿ ಮೊಳಕಾಲ್ಮೂರು ಕ್ಷೇತ್ರದಿಂದ ಆಯ್ಕೆಯಾದ 'ಎಸ್ಸೆನ್' ಎರಡನೆಯ ಬಾರಿಗೆ ಮತ್ತೆ ಮುಖ್ಯಮಂತ್ರಿಯಾದರು. ಕರ್ನಾಟಕ ಕಟ್ಟುವ ಕೆಲಸ ಆರಂಭಿಸಿದರು. ಶರಾವತಿ ವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಂಡು ಅದು ಏಳು ವರ್ಷಗಳಲ್ಲಿ ಮುಗಿಯುವಂತೆ ಕ್ರಮ ಕೈಗೊಂಡರು. ಬಿ. ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಭೂಸುಧಾರಣಾ ಮಂಡಲಿ ರಚಿಸಿದರು. ಹಿಂದಿನ ಸರಕಾರ ರಚಿಸಿದ್ದ ವೇತನ ಆಯೋಗದ ವರದಿಯಂತೆ ಸರಕಾರಿ ನೌಕರರ ಸಾರಿಗೆ, ಸಂಬಳ ಹೆಚ್ಚಿಸಿದರು. ವಿದ್ಯುಚ್ಛಕ್ತಿ ಮಂಡಳಿ ಸ್ಥಾಪಿಸಿದರು. ತುಂಗಭದ್ರಾ, ಕಬಿನಿ ಜಲಾಶಯ ಯೋಜನೆಗಳು ಆರಂಭವಾದವು. 'ಎಸ್ಸೆನ್' ರಾಜ್ಯದ ಅಭ್ಯುದಯದತ್ತ ಗಮನ ಹರಿಸಿದ್ದರೆ, ಅತ್ತ ಕಾಂಗ್ರೆಸ್‌ನಲ್ಲಿನ ಅಧಿಕಾರ ವಂಚಿತ ಅತೃಪ್ತ ಶಾಸಕರ ಗುಂಪು ಅವರ ವಿರುದ್ಧ ಸಂಚು ನಡೆಸಿತ್ತು. ದಿನಗಳೆದಂತೆ ಕಾಂಗ್ರೆಸ್‌ನಲ್ಲಿಯ 'ಗುಂಪುಗಾರಿಕೆ' ಬಲಗೊಂಡು 'ಎಸ್ಸೆನ್' ಸರಕಾರಕ್ಕೆ 'ಬಾಲಗ್ರಹಬಾಧೆ' ತಟ್ಟಿತು. ಕೇವಲ ಐದು ಮತಗಳ ಅಂತರದಿಂದ ಶಾಸಕಾಂಗ ಪಕ್ಷದಲ್ಲಿ ಸೋಲು ಅನುಭವಿಸಿದ ನಿಜಲಿಂಗಪ್ಪನವರು ತಮ್ಮ ಜೊತೆಗಾರರ ವಿಶ್ವಾಸಘಾತ ವರ್ತನೆಗೆ ಬೇಸತ್ತು ಅಧಿಕಾರ ತ್ಯಜಿಸಿದರು. ಇವತ್ತಿನ ನಾಯಕರಂತೆ ಕುತಂತ್ರ ಮಾಡಿ, 'ಕುದುರೆ ವ್ಯಾಪಾರಕ್ಕಿಳಿದು,' ಶಾಸಕರಿಗೆ 'ಬೆಂಬಲಬೆಲೆ' ಕೊಟ್ಟು ಹೇಗಾದರೂ ಮಾಡಿ ಅಧಿಕಾರದಲ್ಲುಳಿಯುವ ಹಪಾಪಿ ಅವರಿಗಿರಲಿಲ್ಲ. ಸಕ್ರಿಯ ರಾಜಕೀಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳದ ಗಾಂಧೀಜಿ ಯಾವುದೇ ಅಧಿಕಾರ, ಹುದ್ದೆ ಬಯಸಲಿಲ್ಲ. ಆದರೆ, ರಾಜಕೀಯ ಮಾಡುವುದನ್ನು ಬಿಡಲಿಲ್ಲ. ನಿಜಲಿಂಗಪ್ಪನವರು ಮಾತ್ರ ಸಕ್ರಿಯ ರಾಜಕೀಯದಲ್ಲಿದ್ದರೂ

'ರಾಜಕೀಯ' ಮಾಡಲಿಲ್ಲ – ಮಾಡುವುದು ಗೊತ್ತಿರಲಿಲ್ಲ – ಅಥವಾ ಮಾಡುವ ಮನಸ್ಸಿರಲಿಲ್ಲ.

ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಹೊರಬಂದ 'ಎಸ್ಸೆನ್'ರನ್ನು ಕೇಂದ್ರಸರಕಾರವೇ ಕರೆದು ಅವರನ್ನು 'ಕೃಷಿ ಅಧ್ಯಯನ ಮಂಡಲಿ' ಹಾಗೂ ರಾಷ್ಟ್ರೀಯ ತೈಲ ನಿಗಮಗಳ ಅಧ್ಯಕ್ಷರನ್ನಾಗಿ ನೇಮಿಸಿತು. ೧೯೬೦ರಲ್ಲಿ ಕೆ.ಪಿ.ಸಿ.ಸಿ.ಅಧ್ಯಕ್ಷ ಸ್ಥಾನವೂ ಇವರನ್ನು ಅರಸಿ ಬಂದಿತು.

## ರಾಜಕೀಯ ರಂಗದ 'ಜಟ್ಟಿ' – ಬಿ.ಡಿ. ಜತ್ತಿ

ನಿಜಲಿಂಗಪ್ಪನವರ ರಾಜೀನಾಮೆ ನಂತರ, ೧೯೫೮ರಲ್ಲಿ 'ವಿಶಾಲ ಮೈಸೂರು' ರಾಜ್ಯದ ಎರಡನೇ ಮುಖ್ಯಮಂತ್ರಿಯಾಗಿ ರಾಜಕೀಯ ರಂಗದ 'ಜಟ್ಟಿ' ಎಂದು ಕರೆಯಲ್ಪಡುತ್ತಿದ್ದ ಬಸಪ್ಪ ದಾನಪ್ಪ ಜತ್ತಿಯವರು ಅಧಿಕಾರ ಸ್ವೀಕರಿಸಿದರು. ಇವರು 'ಮೂರ್ತಿ' ಚಿಕ್ಕದಾದರೂ 'ಕೀರ್ತಿ ದೊಡ್ಡದು' ಎಂಬ ಮಾತಿಗೆ ನಿದರ್ಶನವಾಗಿದ್ದರು. ೧೯೪೧ರಲ್ಲಿ ಜಮುಖಂಡಿಯಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದ ಜತ್ತಿಯವರು ೧೯೪೫ ರಲ್ಲಿ ಜಮಖಂಡಿ ನಗರ ಸಭೆಯ ಅಧ್ಯಕ್ಷರಾದರು. ಮುಂದೆ ಎರಡೇ ವರ್ಷದಲ್ಲಿ ಜಮುಖಂಡಿ ಸಂಸ್ಥಾನದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ೧೯೪೨ರ 'ಚಲೇಜಾವ್' ಚಳವಳಿಯಲ್ಲಿ ಭಾಗವಹಿಸಿ ಸಂಸ್ಥಾನದಲ್ಲಿ ಪ್ರಜಾಸತ್ತಾತ್ಮಕ ಆಡಳಿತ ಬರಬೇಕೆಂಬ ಹೋರಾಟ ಮಾಡಿದ ಜತ್ತಿಯವರು ಒಮ್ಮೆ ಕೋರ್ಟಿನಲ್ಲಿ ಎಲ್ಲ ವಿರೋಧಗಳನ್ನು ಎದುರಿಸಿ ಗಾಂಧಿಟೋಪಿ ಧರಿಸಿಯೇ ವಾದ ಮಾಡಿ ತಮ್ಮ ಸನದು ರದ್ದಾಗದಂತೆ ನೋಡಿಕೊಳ್ಳುವುದರಲ್ಲಿ ಸಫಲರಾದರು. ಬಸವಣ್ಣನವರ ಕಟ್ಟಾ ಅನುಯಾಯಿ ಆಗಿದ್ದ ಇವರು ಜಾತ್ಯತೀತ ಮನೋಭಾವದವರಾಗಿದ್ದರು. ಅಧಿಕಾರದಲ್ಲಿದ್ದಾಗ ಎಲ್ಲ ಜಾತಿಯವರಿಗೂ ಅವಕಾಶ ಒದಗಿಸಿಕೊಟ್ಟರು.

ಜಮುಖಂಡಿ ಸಂಸ್ಥಾನ ಭಾರತದ ಒಕ್ಕೂಟದಲ್ಲಿ ವಿಲೀನಗೊಂಡ ನಂತರ ವಿಲೀನಗೊಂಡ ಪ್ರದೇಶಗಳ ಪ್ರತಿನಿಧಿಯಾಗಿ ಮುಂಬೈ ವಿಧಾನಸಭೆಗೆ ನಾಮಕರಣಗೊಂಡು ಅಂದಿನ ಬಿ.ಜಿ.ಖೇರ ಸರಕಾರದಲ್ಲಿ ಸಂಸದೀಯ ಕಾರ್ಯದರ್ಶಿಯಾಗಿ ನೇಮಕಗೊಂಡರು. ೧೯೫೨ರ ಚುನಾವಣೆಯಲ್ಲಿ ಮುಂಬೈ ವಿಧಾನಸಭೆಗೆ ಆಯ್ಕೆಯಾಗಿ ಆರೋಗ್ಯ ಹಾಗೂ ಕಾರ್ಮಿಕ ಖಾತೆಯ ಉಪಮಂತ್ರಿಯಾದರು.

೧೯೫೬ರಲ್ಲಿ ರಾಜ್ಯ ಪುನರ್ರಚನೆಯಾದಾಗ ಜತ್ತಿಯವರು 'ವಿಶಾಲ ಮೈಸೂರು' ರಾಜ್ಯದ ಭೂಸುಧಾರಣಾ ಸಮಿತಿಯ ಅಧ್ಯಕ್ಷರಾಗಿ

ನೇಮಕವಾದರು. ರಾಜ್ಯ ಭೂಸುಧಾರಣಾ ಕಾಯ್ದೆಗಳಿಗೆ ಜತ್ತಿ ಸಮಿತಿಯ ವರದಿಯೇ ಆಧಾರ ಒದಗಿಸಿತು. ೧೯೫೭, ೧೯೬೨ ಹಾಗೂ ೧೯೬೭ ವಿಧಾನಸಭಾ ಚುನಾವಣೆಗಳಲ್ಲಿ ಜಯಗಳಿಸಿದ ಜತ್ತಿಯವರು ೧೯೫೮ ರಿಂದ ೧೯೬೨ ರವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿ ಅದರ ಉನ್ನತಿಗಾಗಿ ಶ್ರಮಿಸಿದರು. ಅನೇಕ ಸುಧಾರಣೆಗಳನ್ನು ಮಾಡಿದರು. ಜತ್ತಿಯವರು ತಮ್ಮ ಅಧಿಕಾರಾವಧಿಯಲ್ಲಿ ವಿರೋಧ ಪಕ್ಷಕ್ಕಿಂತ ಹೆಚ್ಚಾಗಿ ತಮ್ಮ ಸ್ವಂತ ಪಕ್ಷದ ಪರಿಧಿಯೊಳಗೇ ಹೆಚ್ಚು ವಿರೋಧವನ್ನು ಎದುರಿಸಬೇಕಾಯಿತು.

ಬೇರೆ ಬೇರೆ ಆಡಳಿತ ವ್ಯವಸ್ಥೆಗೆ ಒಳಪಟ್ಟ ಐದು ಭಾಗಗಳು ಒಟ್ಟಾಗಿ ಸೇರಿ ಏಕೀಕೃತ ಹೊಸ ರಾಜ್ಯ ಉದಯವಾಗಿತ್ತಾದ್ದರಿಂದ ಆಯಾ ಪ್ರದೇಶದ ಕಾಯ್ದೆ, ಕಾನೂನುಗಳು ಬೇರೆ ಬೇರೆಯಾಗಿದ್ದವು. ಹೀಗಾಗಿ, ಆಡಳಿತದಲ್ಲಿ ಅನೇಕ ಸಮಸ್ಯೆಗಳು ತಲೆದೋರಿದ್ದವು. ಆದ್ದರಿಂದ, ಜತ್ತಿಯವರು ರಾಜ್ಯದಲ್ಲಿಯ ವಿವಿಧ ಕಾಯ್ದೆಗಳಲ್ಲಿ ಏಕರೂಪತೆಯನ್ನು ತರಲು ಬಹಳಷ್ಟು ಶ್ರಮಿಸಿ ಬಹುಮಟ್ಟಿಗೆ ಯಶಸ್ವಿಯಾದರು. ಹಳೆಯ ಕಡತ ವಿಲೇವಾರಿಯಲ್ಲಿ ವೇಗ ಮತ್ತು ಪರಿಣತಿಯನ್ನು ಸಾಧಿಸಿದ್ದ ಅವರು ಮೊರಾರ್ಜಿ ದೇಸಾಯಿಯವರ ಗರಡಿಯಲ್ಲಿ ತಯಾರಾಗಿದ್ದ ದಕ್ಷ ಹಾಗೂ ಶುದ್ಧಹಸ್ತದ ಆಡಳಿತಗಾರರಾಗಿದ್ದರು.

ಮಾಜಿ ಮುಖ್ಯಮಂತ್ರಿಯಾಗಿದ್ದರೂ ೧೯೬೨ ರಿಂದ ೧೯೬೮ರ ವರೆಗೆ ಅವರು ಮತ್ತೆ ಮುಖ್ಯಮಂತ್ರಿಯಾದ ನಿಜಲಿಂಗಪ್ಪನವರ ಸಂಪುಟದಲ್ಲಿ ಹಣಕಾಸು ಹಾಗೂ ಆಹಾರ ಮಂತ್ರಿಯಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು. ೧೯೬೮ರಲ್ಲಿ ಪುದುಚೆರಿಯ ಉಪರಾಜ್ಯಪಾಲರಾಗಿ ನೇಮಕಗೊಂಡು ರಾಜ್ಯದ ರಾಜಕೀಯಕ್ಕೆ ವಿದಾಯ ಹೇಳಿದರು. ಆದರೆ, ಪುದುಚೆರಿಗೆ ತೆರಳುವ ಮುನ್ನ ತಮ್ಮ ಬಣದ ಕಾಂಗ್ರೆಸ್ 'ನಾಯಕತ್ವ'ವನ್ನು ದೇವರಾಜ ಅರಸರಿಗೆ ವಹಿಸಿ ಹೋದರು.

ಪುದುಚೆರಿಯಲ್ಲಿ ನಾಲ್ಕು ವರ್ಷ ಕಳೆಯುವಷ್ಟರಲ್ಲಿ ಜತ್ತಿಯವರ ಜೀವನದಲ್ಲಿ ಶುಕ್ರದೆಸೆ ಶುರುವಾಗಿತ್ತು. ಉನ್ನತ ಹುದ್ದೆಗಳು ಅವರನ್ನರಸಿಕೊಂಡು ಬಂದವು. ೧೯೭೨ರಲ್ಲಿ ಅವರು ಓರಿಸಾ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡರು. ಆಗ, ಇಂದಿರಾ ಗಾಂಧಿಯವರ ನಿಕಟ ವರ್ತಿಯಾಗಿದ್ದ ಶ್ರೀಮತಿ ನಂದಿನಿ ಸತ್ಪತಿ ಆ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಎರಡು ವರ್ಷ ಕಳೆಯುವಷ್ಟರಲ್ಲಿ ೧೯೭೪ರಲ್ಲಿ, ರಾಷ್ಟ್ರದ ಅತ್ಯುನ್ನತ ಹುದ್ದೆಗಳಲ್ಲಿ ಎರಡನೆಯದಾದ ಉಪರಾಷ್ಟ್ರಪತಿ ಹುದ್ದೆ ಅಲಂಕರಿಸುವ ಅದೃಷ್ಟ ಇವರಿಗೆ ಒಲಿಯಿತು. ತಮ್ಮ ರಾಜಕೀಯ ಜೀವನದ ತ್ವರಿತ ಉತ್ಕರ್ಷಕ್ಕೆ ಇಬ್ಬರು ಮಹಿಳೆಯರು – ಇಂದಿರಾ ಗಾಂಧಿ ಹಾಗೂ

ನಂದಿನಿ ಸತ್ಪತಿ - ಕಾರಣರೆಂದು ಜತ್ತಿಯುವರು ಹೇಳುತ್ತಿದ್ದರು. ಉಪರಾಷ್ಟ್ರಪತಿಯಾಗಿದ್ದಾಗ ಹಂಗಾಮಿ ರಾಷ್ಟ್ರಪತಿಯಾಗಿ ಕೆಲಕಾಲ ಕಾರ್ಯನಿರ್ವಹಿಸುವ ಅವಕಾಶವೂ ಅವರಿಗೆ ಲಭಿಸಿತು.

## 'ರಾಮ'ನ ವನವಾಸ ಮುಗಿಯುವರೆಗೆ 'ಭರತ'ನಿಗೆ ಪಟ್ಟಾಭಿಷೇಕ : ಪರ್ಯಾಯ ವ್ಯವಸ್ಥೆ - ಎಸ್.ಆರ್.ಕಂಠಿ ಮುಖ್ಯಮಂತ್ರಿ !

೧೯೬೨ರಲ್ಲಿ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಹೊಸದುರ್ಗ ಕ್ಷೇತ್ರದಿಂದ ಸ್ಪರ್ಧಿಸಿದ್ದ 'ಎಸ್ಸೆನ್' ಅನಿರೀಕ್ಷಿತವಾಗಿ, (ಪಕ್ಷದವರ ಒಳಸಂಚಿಗೆ ಬಲಿಯಾಗಿ) ಪರಾಭವಗೊಂಡರು. ಆದರೆ ಶಾಸಕಾಂಗ ಪಕ್ಷದಲ್ಲಿ ಕಾಂಗ್ರೆಸ್ ಬಹುಮತ ಪಡೆದಿತ್ತು. 'ಎಸ್ಸೆನ್'ರನ್ನೇ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲು ಕಾಂಗ್ರೆಸ್ ಶಾಸಕಾಂಗ ಪಕ್ಷ ಸಿದ್ಧವಿತ್ತು. ಆದರೆ, ತತ್ವನಿಷ್ಠರಾದ ನಿಜಲಿಂಗಪ್ಪನವರು ಹಿಂಬಾಗಿಲ ಪ್ರವೇಶಕ್ಕೆ ಸಿದ್ಧರಿರಲಿಲ್ಲ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಯೋಧರೂ 'ಎಸ್ಸೆನ್'ರವರ ಬಹುಕಾಲದ ಸ್ನೇಹಿತರೂ, ಸತತ ಹದಿನಾಲ್ಕು ವರ್ಷ ಅವಿಭಜಿತ ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಪದ ನಿರ್ವಹಿಸಿ 'ಕರ್ನಾಟಕದ ಉಕ್ಕಿನ ಮನುಷ್ಯ'ರೆಂದೇ ಹೆಸರಾಗಿದ್ದ ಹಳ್ಳಿಕೇರಿ ಗುದ್ಲೆಪ್ಪನವರು ಮಹತ್ವದ ಪಾತ್ರವನ್ನಾಡಿ ಒಂದು ತಾತ್ಪೂರ್ತಿಕ ಕಾರ್ಯತಂತ್ರವನ್ನು ರೂಪಿಸಿದರು. ಅದರ ಪ್ರಕಾರ ತಾತ್ಕಾಲಿಕ ವ್ಯವಸ್ಥೆಯಾಗಿ, ಅಂದರೆ 'ಎಸ್ಸೆನ್' ಬೇರೊಂದು ಕ್ಷೇತ್ರದಿಂದ ಚುನಾಯಿತರಾಗಿ ಬರುವವರೆಗೆ, ಸಜ್ಜನ ರಾಜಕಾರಣಿಯಾಗಿದ್ದ ಎಸ್. ಆರ್. ಕಂಠಿಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಯಿತು.

ಮುಂದೆ ಕೆಲವೇ ದಿನಗಳಲ್ಲಿ ಬಾಗಲಕೋಟೆಯ ಕಾಂಗ್ರೆಸ್ ಶಾಸಕ ಬಿ. ಟಿ. ಮುರನಾಳರಿಂದ ಅವರ ವಿಧಾನ ಸಭೆ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿಸಲಾಯಿತು. ತೆರವಾದ ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಯಲ್ಲಿ ನಿಜಲಿಂಗಪ್ಪನವರು ಅಭ್ಯರ್ಥಿಯಾಗಿ ಸ್ಪರ್ಧಿಸಿ ೧೯೬೨ರ ಜೂನ್ ೨೧ ರಂದು ಗೆದ್ದು ಬಂದರು. ರಾಮನ ವನವಾಸ ಮುಗಿಯಿತು ! 'ಭರತ'ನಂತೆ ೧೦೪ ದಿನ ರಾಜ್ಯಭಾರ ನಿರ್ವಹಿಸಿದ ಕಂಠಿಯವರು ತಡಮಾಡದೇ ತಮ್ಮ ಪದವಿಗೆ ರಾಜೀನಾಮೆ ಕೊಟ್ಟರು. 'ಎಸ್ಸೆನ್'ರು ಆರು ವರ್ಷದಲ್ಲಿ ಮೂರನೆಯ ಬಾರಿಗೆ 'ವಿಶಾಲ ಮೈಸೂರು' ರಾಜ್ಯದ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದರು.

# ನೆಹರೂ ನಂತರದ ಕಾಂಗ್ರೆಸ್

ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಮುಖ ರಾಷ್ಟ್ರೀಯ ನಾಯಕರಲ್ಲಿ ಒಬ್ಬರಾಗಿದ್ದ 'ಎಸ್ಸೆನ್' ರಾಜ್ಯದ ಮುಖ್ಯಮಂತ್ರಿಯಾಗಿ ಅಪಾರ ಜನಪ್ರಿಯತೆ ಗಳಿಸಿದ್ದರು. ೧೯೬೨ರ ದೀಪಾವಳಿ ಸಮಯದಲ್ಲಿ ಭಾರತದ ಮಿತ್ರ, ಸೋದರ ಎಂದೆಲ್ಲ ನೆಹರೂ ಭಾವಿಸಿದ್ದ ನೆರೆಯ ಕಮ್ಯುನಿಸ್ಟ್ ರಾಷ್ಟ್ರ ಚೀನಾ ಯಾವುದೇ ಪ್ರಚೋದನೆಯಿಲ್ಲದೇ ನಮ್ಮ ದೇಶದ ಮೇಲೆ ದಾಳಿ ಮಾಡಿ ನಮ್ಮ ಭೂಪ್ರದೇಶ ಆಕ್ರಮಿಸಿಕೊಂಡು ವಿಶ್ವಾಸಘಾತ ಎಸಗಿತು. ಈ ಘಟನೆಯಿಂದ ಭಾರತದ ವಿದೇಶ ನೀತಿಯ ಪ್ರವರ್ತಕ ಹಾಗೂ ಅಧಿಕೃತ ಪ್ರತಿಪಾದಕರಾಗಿದ್ದ ಜವಾಹರಲಾಲ ನೆಹರೂ ಭಾರಿ ಆಘಾತಕ್ಕೊಳಗಾದರು. ಈ ಆಘಾತದಿಂದ ಚೇತರಿಸಿಕೊಳ್ಳದ ನೆಹರೂ ೧೯೬೪ರಲ್ಲಿ ತೀರಿಹೋದರು. ಇವರನಂತರ ಪ್ರಧಾನಿಯಾದ ಲಾಲಬಹಾದ್ದೂರ ಶಾಸ್ತ್ರೀಯವರು ಅಲ್ಪಾವಧಿಯಲ್ಲಿಯೇ ಸಮರ್ಥ ನಾಯಕತ್ವದ ಗುಣಗಳನ್ನು ಪ್ರದರ್ಶಿಸಿ ಜನಪ್ರಿಯ ಪ್ರಧಾನಿ ಎನಿಸಿದರು. ಆದರೆ ಇವರದು ಇಪ್ಪತ್ತು ತಿಂಗಳ ಅಲ್ಪಾವಧಿಯ ಆಡಳಿತವಾಗಿತ್ತು. ೧೯೬೬ರಲ್ಲಿ ಸೋವಿಯೆಟ್ ರಷಿಯಾದ ತಾಷ್ಕೆಂಟ್‌ದಲ್ಲಿ ಶಾಸ್ತ್ರಿಯವರು (ಪಾಕಿಸ್ತಾನದೊಂದಿಗೆ ಶಾಂತಿ ಸಂಧಾನಕ್ಕೆಂದು ತೆರಳಿದಾಗ) ಆಕಸ್ಮಿಕವಾಗಿ ಹೃದಯಾಘಾತದಿಂದ ನಿಧನರಾದರು. ಮೊರಾರ್ಜಿ ದೇಸಾಯಿಯವರ ಬಗೆಗೆ 'ಅಲರ್ಜಿ'ಇದ್ದ ಕಾಂಗ್ರೆಸ್ಸಿನ ಹಿರಿಯ ನಾಯಕರಾದ ಕಾಮರಾಜ್, ಎಸ್ಸೆನ್, ಎಸ್.ಕೆ.ಪಾಟೀಲ, ಅತುಲ್ಯ ಘೋಷ ಮುಂತಾದವರು, 'ಹೇಳಿದಂತೆ ಕೇಳುತ್ತಾಳೆಂಬ' ತಪ್ಪು ಕಲ್ಪನೆಗೊಳಗಾಗಿ ನೆಹರೂ ಕುಡಿ ಇಂದಿರಾ ಗಾಂಧಿಯವರನ್ನು ಪ್ರಧಾನಿ ಪಟ್ಟಕ್ಕೇರಿಸಿದರು. ಈ 'ಪ್ರಮಾದ' ಮುಂದೆ ಕಾಂಗ್ರೆಸ್ಸಿನ ಇಬ್ಭಾಗಕ್ಕೆ ಕಾರಣವಾಯಿತಲ್ಲದೆ ಈ ನಾಯಕರು ದೊಡ್ಡ ಬೆಲೆ ತೆರಬೇಕಾಯಿತು.

೧೯೬೭ರಲ್ಲಿ ದೇಶದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ನೆಹರೂರ ನಾಯಕತ್ವ ಇಲ್ಲದ ಕಾಂಗ್ರೆಸ್ ಪಕ್ಷದ ಅತಿರಥ ಮಹಾರಥರು ಶೋಚನೀಯ ಸೋಲು ಅನುಭವಿಸಿದರು. ಕೇಂದ್ರ ಹಾಗೂ ರಾಜ್ಯಗಳಲ್ಲಿ ಕಾಂಗ್ರೆಸ್ ಬಲ ಕುಂದಿತ್ತು. 'ಎಸ್ಸೆನ್' ಅಂದಿನ ಧಾರವಾಡ ಜಿಲ್ಲೆಯ ಶಿಗ್ಗಾಂವ ಕ್ಷೇತ್ರದಿಂದ 'ಅವಿರೋಧವಾಗಿ' ವಿಧಾನಸಭೆಗೆ ಆಯ್ಕೆಯಾದರು. ಆಗ ಅವರು 'ಕುಸ್ತಿ ಆಡದೆಯೇ ಗೆದ್ದ ಪೈಲ್ವಾನ್' ಎಂಬ ಟೀಕೆಗೆ ಗುರಿಯಾಗಬೇಕಾಯಿತು. ನಿಜಲಿಂಗಪ್ಪನವರು ನಾಲ್ಕನೆಯ ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಇದೇ ಕಾಲಕ್ಕೆ ಇಂದಿರಾ ಗಾಂಧಿಯವರೂ ಎರಡನೇ ಬಾರಿಗೆ ಪ್ರಧಾನಿಯಾಗಿ ಆಯ್ಕೆಗೊಂಡರು. ಈಗಾಗಲೇ ಅಧಿಕಾರದ ರುಚಿ ಅನುಭವಿಸಿದ್ದ ಅವರು ಕಾಂಗ್ರೆಸ್ಸಿನ ಹಳೆಯ ಹುಲಿಗಳನ್ನು ತಮ್ಮ

ಹತೋಟಿಯಲ್ಲಿಟ್ಟುಕೊಳ್ಳಲು ಹೊಂಚುಹಾಕಿದರು. ಕಾಮರಾಜ ನಾಡಾರ್ ಅವರ ಎ.ಐ.ಸಿ.ಸಿ. ಅಧ್ಯಕ್ಷ ಪದವಿಯ ಅವಧಿ ಮುಗಿದಾಗ ತನ್ನ ತಂದೆಯಂತೆ ಪ್ರಧಾನಿ ಹುದ್ದೆಯ ಜತೆಗೆ ತಾನೇ ಆ ಪದವಿಯನ್ನು ವಹಿಸಿಕೊಳ್ಳುವ ಹುನ್ನಾರ ಇಂದಿರಾ ಗಾಂಧಿಯವರದಾಗಿತ್ತು. ಆದರೆ, ಲೋಕಸಭೆಯಲ್ಲಿ ಕಾಂಗ್ರೆಸ್ ಬಲ ಕ್ಷೀಣಿಸಿತ್ತು. ಅಲ್ಲದೆ, ಕಾಂಗ್ರೆಸ್‌ನ ಹಳಬರು ಇನ್ನೂ ಸಾಕಷ್ಟು ಪ್ರಭಾವ, ವರ್ಚಸ್ಸು ಉಳಿಸಿಕೊಂಡಿದ್ದರು. ಹೀಗಾಗಿ ತಮ್ಮ ಮಹತ್ವಾಕಾಂಕ್ಷೆ ಈಡೇರಿಸಿಕೊಳ್ಳಲು ನೆಹರೂ ಪುತ್ರಿ ಇಂದಿರಾ 'ಯೋಗ್ಯ' ಸಮಯಕ್ಕಾಗಿ ಕಾಯಲು ನಿರ್ಧರಿಸಿದರು.

## ಎಸ್. ನಿಜಲಿಂಗಪ್ಪ – ನಿಜವಾದ 'ಗಾಂಧೀವಾದಿ'!

ಯಾವುದೇ ಹುದ್ದೆ, ಅಧಿಕಾರ ಬಯಸದ ಗಾಂಧೀಜಿ ಸಕ್ರಿಯ ರಾಜಕಾರಣಿಯಾಗಿರಲಿಲ್ಲ. ಆದರೂ 'ರಾಜಕೀಯ' ಮಾಡುವುದನ್ನು ಅವರು ಬಿಡಲಿಲ್ಲ. 'ಅದನ್ನು ನಾನು ಬಿಡಲಾರೆ' ಎಂದು ಅವರು ಸರೋಜಿನಿ ನಾಯ್ಡುರವರಿಗೆ ಸ್ಪಷ್ಟವಾಗಿ ಹೇಳಿದ್ದರು. ಆದರೆ, 'ಸಕ್ರಿಯ' ರಾಜಕಾರಣಿಯಾಗಿದ್ದ ನಿಜಲಿಂಗಪ್ಪನವರು ನಿಜವಾಗಿಯೂ, 'ಇಂದಿನ ಅರ್ಥದ' ರಾಜಕೀಯ ಎಂದಿಗೂ 'ಮಾಡಲಿಲ್ಲ' – ಅಂಥ ರಾಜಕೀಯ ಮಾಡುವ ಮನೋಭಾವ ಅವರದಾಗಿರಲಿಲ್ಲ!

'ಎಸ್ಸೆನ್' ಮುಖ್ಯಮಂತ್ರಿಯಾಗಿದ್ದಾಗ ಅವರನ್ನು ಖಂಡತುಂಡವಾಗಿ ಟೀಕಿಸುತ್ತಿದ್ದವರಲ್ಲಿ ಪ್ರಮುಖರಾಗಿದ್ದ ಎಸ್.ಶಿವಪ್ಪನವರು ನಿಜಲಿಂಗಪ್ಪನವರ ಬಗೆಗೆ ಅಪಾರ ಗೌರವನ್ನಿಟ್ಟುಕೊಂಡಿದ್ದರು. "ಕೇವಲ ರಾಜಕೀಯಕ್ಕಾಗಿ ಅವರನ್ನು ಟೀಕಿಸುತ್ತಿದ್ದೇನೇ ಹೊರತು – ಅವರು ಚಿನ್ನದಂಥ ಮನುಷ್ಯ" ಎಂದು ಶಿವಪ್ಪ ಅವರನ್ನು ಕೊಂಡಾಡಿದ್ದುಂಟು. 'ಎಸ್ಸೆನ್'ರ ಇನ್ನೊಬ್ಬ ರಾಜಕೀಯ ವಿರೋಧಿಯಾಗಿದ್ದ ಹುಲಕೋಟಿಯ 'ಹುಲಿ' ಕೆ.ಎಚ್.ಪಾಟೀಲರು ಸಹ ನಿಜಲಿಂಗಪ್ಪನವರ ಶೀಲ, ಸಚ್ಚಾರಿತ್ರ್ಯ, ನಿಷ್ಕಳಂಕಿತ ವ್ಯಕ್ತಿತ್ವದ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ನಿಜಲಿಂಗಪ್ಪನವರ ನೆಚ್ಚಿನ ಶಿಷ್ಯ ವೀರೇಂದ್ರ ಪಾಟೀಲರು ಅವರಿಂದ ದೂರ ಸರಿದರೂ ಸಹ ಅವರ ಬಗೆಗೆ ಗೌರವ ಇಟ್ಟುಕೊಂಡಿದ್ದರು.

ನಿಜಲಿಂಗಪ್ಪನವರ ಮತ್ತೊಬ್ಬ ಕಡು ರಾಜಕೀಯ ವಿರೋಧಿ ದೇವರಾಜ ಅರಸರು ಅವರ ಚಾರಿತ್ರ್ಯಶುದ್ಧಿ ಕುರಿತು "ನಿಜಲಿಂಗಪ್ಪನವರ ಬಗೆಗೆ ನಾನು ಏನಾದರೂ ಕೆಟ್ಟದ್ದನ್ನು, ಅಲ್ಲವಾದುದನ್ನು ಹೇಳಿದರೆ ನನ್ನ ಬಾಯಲ್ಲಿ ಹುಳ

ಬೀಳುತ್ತವೆ" ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಇಷ್ಟಾದರೂ, 'ಅಜಾತಶತ್ರು' ಎಂದು ಕರೆಯಲ್ಪಡುವ ನಿಜಲಿಂಗಪ್ಪನವರನ್ನು ದ್ವೇಷಿಸುವ ಜನ ಇದ್ದೇ ಇದ್ದರು. ಅವರಿಂದ ಉಪಕೃತರಾಗಿ ಅವರಿಗೆ ತಿರುಗಿ ಬಿದ್ದ ಕೃತಘ್ನರೂ ಇದ್ದರು. ರಾಜಕೀಯದಲ್ಲಿ ಇದು ಸರ್ವೇಸಾಮಾನ್ಯ. ಸಜ್ಜನರಿಗೆ ಕಾಂಗ್ರೆಸ್‌ನಲ್ಲಿ ಸ್ಥಾನ ಸಿಗುತ್ತಿಲ್ಲ ಎಂಬ ಕೊರಗು ನಿಜಲಿಂಗಪ್ಪನವರಿಗಿತ್ತು. "ನೆಹರೂ ನನಗೆ ತೊಂದರೆ ಕೊಡಲು ತುಂಬ ಪ್ರಯತ್ನಿಸಿದರು, ಆದರೆ ಸಾಧ್ಯವಾಗಲಿಲ್ಲ – ನಾನೆಂದೂ ಅವರ ಸಹಾಯವನ್ನು ಕೇಳಲಿಲ್ಲ" ಎಂದು ಎಸ್ಸೆನ್ ಹೇಳಿದ್ದಾರೆ. ಕಾಂಗ್ರೆಸ್ಸಿನ ಅಧಿವೇಶನವೊಂದರಲ್ಲಿ ನೆಹರೂ ನಿಜಲಿಂಗಪ್ಪನವರ ಭುಜ ಹಿಡಿದು ಅಲುಗಾಡಿಸಿ, "ಈ ಏಕೀಕರಣದ ವ್ಯವಹಾರವನ್ನು ಬಿಡಬಾರದೇಕೆ?" ಎಂದು ಕೇಳಿದಾಗ, "ಜನರಿಗೆ ಬೇಕಾದುದನ್ನು ನಾನು ಬಿಡಲಾರೆ" ಎಂದು ನೇರ ಉತ್ತರ ಕೊಟ್ಟಿದ್ದರು ಎಸ್ಸೆನ್.

## ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಕೊನೆಯ ಅಧ್ಯಕ್ಷ !

೧೯೬೭ರಲ್ಲಿ ಕಾಮರಾಜ ನಾಡಾರ್‌ರು ತಮ್ಮ ಕಾಂಗ್ರೆಸ್ ಅಧ್ಯಕ್ಷ ಪದದ ಅವಧಿ ಮುಗಿಸಿದಾಗ ಅವರ ಉತ್ತರಾಧಿಕಾರಿಯಾಗಿ ನಿಜಲಿಂಗಪ್ಪನವರ ಹೆಸರು ಸೂಚಿತವಾಯಿತು. ಇಂದಿರಾ ಸಹ ಇಂಥ ಸಂಭಾವಿತ ವ್ಯಕ್ತಿಯ ಆಯ್ಕೆಗೆ ಒಪ್ಪಿದರು. ಆದರೆ ರಾಜ್ಯದ ಹಲವು ನಾಯಕರು ಎಚ್ಚರಿಕೆಯ ಧ್ವನಿಯಲ್ಲಿ – "ಕೇಂದ್ರದ ನಾಯಕರು ದಕ್ಷಿಣ ಭಾರತದ ನಾಯಕರು ರಾಷ್ಟ್ರಮಟ್ಟದಲ್ಲಿ ತಲೆ ಎತ್ತದಂತೆ ನೋಡಿಕೊಳ್ಳುತ್ತಾರೆ. ದೆಹಲಿಯ ರಾಜಕೀಯದಲ್ಲಿ ಗೊಂದಲ – ಗಲಿಬಿಲಿ, ಕುಟಿಲತನ, ಕುತಂತ್ರಗಳೇ ಜಾಸ್ತಿ. ನೇರ ನಡೆ-ನುಡಿಯುಳ್ಳವರಿಗೆ ಅಲ್ಲಿಯ ವಾತಾವರಣ ತಕ್ಕುದಲ್ಲ. ನೀವು ಮುಖ್ಯಮಂತ್ರಿಯಾಗಿ ರಾಜ್ಯದಲ್ಲಿರುವುದೇ ವಾಸಿ" – ಎಂದು ಪರಿಪರಿಯಾಗಿ ಬೇಡಿಕೊಂಡರು. ಆದರೆ, ಪ್ರಧಾನಿ ಗೃಹದಿಂದ ಟೆಲಿಫೋನ ಕರೆ ಬಂದಾಗ ಕಪಟವನ್ನರಿಯದ ಎಸ್ಸೆನ್ – "ಆಕೆ ಹೆಣ್ಣುಮಗಳು – ಮೇಲಾಗಿ ನೆಹರೂ ಮಗಳು. ಅವರ ಮಾತು ಮೀರುವುದಾದರೂ ಹೇಗೆ?" – ಎಂದು ಅಸಹಾಯಕತೆ ವ್ಯಕ್ತಪಡಿಸುತ್ತ ಭಿಡೆಗೆ ಒಳಗಾಗಿ ಎ.ಐ.ಸಿ.ಸಿ. ಅಧ್ಯಕ್ಷಪದ ಒಪ್ಪಿಕೊಂಡರು. ೧೯೬೭ರ ಡಿಸೆಂಬರ ಏಳರಂದು, ತಾವಿನ್ನೂ ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾಗಲೇ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ನಿಜಲಿಂಗಪ್ಪನವರು, ೧೯೬೮ರ ಮೇ ತಿಂಗಳ ಕೊನೆಯ ವಾರದಲ್ಲಿ ಮುಖ್ಯಮಂತ್ರಿ ಹುದ್ದೆಯನ್ನು ತ್ಯಜಿಸಿ ತಮ್ಮ ನೆಚ್ಚಿನ ಶಿಷ್ಯರಲ್ಲೊಬ್ಬರಾದ

ವೀರೇಂದ್ರ ಪಾಟೀಲರಿಗೆ ಮುಖ್ಯಮಂತ್ರಿತ್ವದ ಪಟ್ಟ ಕಟ್ಟಿ ತಮಗೆ ಉಡುಗೊರೆಯಾಗಿ ವಿದೇಶೀ ಗಣ್ಯರು ಕೊಟ್ಟಿದ್ದ ಬೆಲೆಬಾಳುವ ಕೈಗಡಿಯಾರವನ್ನೂ ಶಿಷ್ಯನ ಕೈಗೆ ಕಟ್ಟಿ ಹರಸಿದರು.

ನಿಜಲಿಂಗಪ್ಪನವರಿಗೆ ಓದುಗಾರಿಕೆಯಲ್ಲಿ ಗಾಢ ಅಭಿರುಚಿ ಇತ್ತು. ರಾಜಕೀಯದಲ್ಲಿ ದೀರ್ಘಕಾಲ ಮಹತ್ವದ ಹುದ್ದೆಗಳನ್ನಲಂಕರಿಸಿದ್ದರೂ ಅವರು ಸ್ವಂತಕ್ಕಾಗಿ ಹೆಂಡತಿ, ಮಕ್ಕಳಿಗಾಗಿ ಏನನ್ನೂ ಗಳಿಸಿ ಇಡಲಿಲ್ಲ. ಅವರಂತೆ ಮಡದಿ ಮಕ್ಕಳನ್ನು ಮರೆತು, ಆಸೆ, ಆಮಿಷಗಳನ್ನು ತೊರೆದು, ಸ್ವಂತ ಸುಖವನ್ನು ಬದಿಗೊತ್ತಿ, ಎಳ್ಳಷ್ಟೂ ಅಧಿಕಾರ ವ್ಯಾಮೋಹವಿಲ್ಲದೇ, ಏಕನಿಷ್ಠೆಯಿಂದ, ಪ್ರಾಮಾಣಿಕತೆಯಿಂದ, ಶುದ್ಧಹಸ್ತರಾಗಿ ಜನರಿಗೆ ಸೇವೆ ಸಲ್ಲಿಸಿದ ರಾಜಕೀಯ ನಾಯಕರು ಬಹಳ ವಿರಳ. ಬಯಸದೇ ಬಾಗಿಲಿಗೆ ಬಂದಿದ್ದ ರಾಷ್ಟ್ರಪತಿ, ರಾಜ್ಯಪಾಲ ಹುದ್ದೆಗಳನ್ನು ನಿರಾಕರಿಸಿದ ನಿಜವಾದ 'ಭಾರತ ರತ್ನ' ಅವರಾಗಿದ್ದರು.

## ಕರ್ನಾಟಕ ಕಂಡ ದಕ್ಷ ಮುಖ್ಯಮಂತ್ರಿ ವೀರೇಂದ್ರ ಪಾಟೀಲ

ಹೈದರಾಬಾದ ಕರ್ನಾಟಕದ ಸರದಾರ ಪಟೇಲರೆಂದೇ ಖ್ಯಾತರಾಗಿದ್ದ ಚಂದ್ರಶೇಖರ ಪಾಟೀಲರ ಶಿಷ್ಯರಾದ ವೀರೇಂದ್ರ ಪಾಟೀಲರು ೧೯೫೭ ರಲ್ಲಿ ಆಳಂದ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಲು ಅವರ ರಾಜಕೀಯ ಗುರು ಚಂದ್ರಶೇಖರ ಪಾಟೀಲರೇ ಕಾರಣ. ಆಗಿನ ಇನ್ನೊಬ್ಬ ಹಿರಿಯ ನಾಯಕ ಕೋಳೂರು ಮಲ್ಲಪ್ಪನವರು ವೀರೇಂದ್ರರನ್ನು ಪ್ರೋತ್ಸಾಹಿಸಿ ಅವರ ರಾಜಕೀಯ ಬೆಳವಣಿಗೆಗೆ ಕಾರಣಕರ್ತರಾದರು. ಕರ್ತವ್ಯನಿಷ್ಠೆ, ಪ್ರಾಮಾಣಿಕತೆ, ಶಿಸ್ತು, ಸಮಯಪ್ರಜ್ಞೆ, ಅಚ್ಚುಕಟ್ಟುತನಗಳನ್ನು ಮೊದಲಿನಿಂದಲೇ ಮೈಗೂಡಿಸಿಕೊಂಡಿದ್ದ ಪಾಟೀಲರು ೧೯೫೭ರಿಂದ ೧೯೬೮ರ ವರೆಗೆ ಉಪಮಂತ್ರಿಯಾಗಿ, ಮಂತ್ರಿಯಾಗಿ ವಿವಿಧ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿ ಗಟ್ಟಿ ಆಡಳಿತಗಾರರಾಗಿ, ಮುತ್ಸದ್ದಿಯಾಗಿ ಹೊರಹೊಮ್ಮಿ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾದರು. ಮಾತು ಕಡಿಮೆಯಾದರೂ ತರ್ಕಬದ್ಧ, ತೂಕದ ಮಾತುಗಳಿಗೆ ಹೆಸರಾಗಿದ್ದರು. ೧೯೬೮ರಲ್ಲಿ ಇವರು 'ಎಸ್ಸೆನ್' ಎ.ಐ.ಸಿ.ಸಿ. ಅಧ್ಯಕ್ಷರಾಗಿ ಹೋದಮೇಲೆ, ಅವರ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ರಾಮಕೃಷ್ಣ ಹೆಗಡೆಯವರು ಹಣಕಾಸಿನ ಮಂತ್ರಿಯಾದರು. ನಿಜಲಿಂಗಪ್ಪನವರ ಸರ್ಕಾರದಲ್ಲಿ ಈ ಅವಳಿ ನಾಯಕರು 'ಲವ-ಕುಶ'ರೆಂದೇ ಹೆಸರಾಗಿದ್ದರು.

ಹಾಗೆ ನೋಡಿದರೆ, ತಾವು ಅಧಿಕಾರ ತ್ಯಜಿಸಿದ ನಂತರ ರಾಮಕೃಷ್ಣ ಹೆಗಡೆಯವರನ್ನು ಮುಖ್ಯಮಂತ್ರಿ ಮಾಡಬೇಕೆಂದು 'ಎಸ್ಸೆನ್' ಬಯಸಿದ್ದರು. ಆದರೆ ಕರ್ನಾಟಕದಲ್ಲಿನ ರಾಜಕೀಯ ಸ್ವರೂಪದ ಹಿನ್ನೆಲೆಯನ್ನು ಮನಗಂಡ ಹೆಗಡೆಯವರು ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಹುದ್ದೆಯನ್ನು ಸ್ಪಷ್ಟವಾಗಿ ನಿರಾಕರಿಸಿ ವೀರೇಂದ್ರ ಪಾಟೀಲರ ಹಾದಿಯನ್ನು ಸುಗಮಗೊಳಿಸಿದರು.

೧೯೬೯ರಲ್ಲಿ ಕಾಂಗ್ರೆಸ್ ಪಕ್ಷ ಒಡೆದು 'ಇಂಡಿಕೇಟ್' – 'ಸಿಂಡಿಕೇಟ್' ಗಳೆಂಬ ಇಬ್ಬಣಗಳು ಹುಟ್ಟಿಕೊಂಡವು. 'ಇಂಡಿಕೇಟ್ ಅಂದರೆ 'ಇಂದಿರಾ' ಕಾಂಗ್ರೆಸ್ 'ಸಿಂಡಿಕೇಟ್' ಅಂದರೆ 'ನಿಜಲಿಂಗಪ್ಪನವರ' ಸಂಸ್ಥಾ ಕಾಂಗ್ರೆಸ್'. ಅವಿಭಜಿತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಕೊನೆಯ (ಹಾಗೂ ಕರ್ನಾಟಕದಿಂದ ಮೊದಲ ಹಾಗೂ ಕೊನೆಯ) ಅಧ್ಯಕ್ಷರೆಂಬ ಹೆಗ್ಗಳಿಕೆ ನಿಜಲಿಂಗಪ್ಪನವರದು! ೧೯೭೭ರಲ್ಲಿ 'ಸಂಸ್ಥಾಕಾಂಗ್ರೆಸ್' ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಹೊಸದಾಗಿ ಜನ್ಮ ತಾಳಿದ ಜನತಾಪಕ್ಷದಲ್ಲಿ ವಿಲೀನವಾಯಿತು.

ಕಾಂಗ್ರೆಸ್ ಹೋಳಾದಾಗ ವೀರೇಂದ್ರ ಪಾಟೀಲರು ನಿಜಲಿಂಗಪ್ಪನವರ ಪರ ನಿಂತು ಮಹತ್ವದ ಪಾತ್ರವನ್ನಾಡಿದರು. ೧೯೭೮ರಲ್ಲಿ ಚಿಕ್ಕಮಗಳೂರಿನಿಂದ ಲೋಕಸಭೆಗೆ ನಡೆದ ಉಪಚುನಾವಣೆಯಲ್ಲಿ ಜನತಾ ಪಕ್ಷದ ಪರವಾಗಿ ಇಂದಿರಾಗಾಂಧಿಯವರ ವಿರುದ್ಧ ಸ್ಪರ್ಧಿಸಿ ತತ್ವನಿಷ್ಠೆ ಮೆರೆದರು. ಇಂದಿರಾ ವಿರುದ್ಧ ಸೋತರೂ ಆಕೆಯ ಮನಸ್ಸು ಗೆದ್ದರು. ೧೯೭೨ ರಿಂದ ೧೯೭೮ ರವರೆಗೆ ಜನತಾ ಪಕ್ಷದ ರಾಜ್ಯಸಭೆಯ ಸದಸ್ಯರಾಗಿದ್ದರು. ೧೯೭೯ ರಲ್ಲಿ ಕೇಂದ್ರದ ಜನತಾಪಕ್ಷದ ಪತನವಾಗಿ ಪಕ್ಷದಲ್ಲಿ ಒಡಕುಂಟಾಯಿತು. ಪಕ್ಷದ ಒಡಕಿನಿಂದ ಭ್ರಮನಿರಸನಗೊಂಡ ಪಾಟೀಲರನ್ನು ಕಾಂಗ್ರೆಸ್ ಪಕ್ಷ ತನ್ನೆಡೆಗೆ ಸೆಳೆದುಕೊಂಡಿತು. ೧೯೮೦ರಲ್ಲಿ ಇಂದಿರಾ ಕಾಂಗ್ರೆಸ್‌ಪಕ್ಷದ ಟಿಕೆಟ್ಟಿನಿಂದ ವೀರೇಂದ್ರರು ಬಾಗಲಕೋಟೆ ಮತಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾದರು. ಇವರ ಅನುಭವ, ದಕ್ಷತೆ, ಪ್ರಾಮಾಣಿಕತೆಗಳಿಗೆ ಮನ್ನಣೆ ದೊರೆತು ಕೇಂದ್ರ ಮಂತ್ರಿಯಾದರು. ಕೈಗಾರಿಕೆ, ಕಾರ್ಮಿಕ, ಪೆಟ್ರೋಕೆಮಿಕಲ್ಸ್, ರಸಗೊಬ್ಬರ, ಸಾರಿಗೆ, ನೌಕಾ ಇಲಾಖೆ – ಹೀಗೆ ವಿವಿಧ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿದರು.

ಈ ಮಧ್ಯೆ, ಅಂದರೆ ೧೯೮೩ – ೧೯೮೮ರ ಅವಧಿಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಕಳೆಗುಂದಿ ಬಲಹೀನವಾಗಿತ್ತು. ಆ ಪಕ್ಷಕ್ಕೆ ಒಳ್ಳೆಯ ನಾಯಕತ್ವದ ಅಗತ್ಯವಿತ್ತು. ೧೯೮೯ರಲ್ಲಿ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ನಿಯುಕ್ತರಾದ ಪಾಟೀಲರು ಅದೇ ವರ್ಷ ವಿಧಾನಸಭೆಗೆ ನಡೆದ

ಚುನಾವಣೆಗಳಲ್ಲಿ ತಮ್ಮ ವರ್ಚಸ್ಸಿನಿಂದ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ತಂದುಕೊಟ್ಟರು. ಸಹಜವಾಗಿಯೇ ಮತ್ತೆ ಮುಖ್ಯಮಂತ್ರಿಯಾಗಿ ತಮ್ಮ ಎರಡನೇ 'ಇನಿಂಗ್ಸ್' ಆರಂಭಿಸಿದರು.

## 'ಎಕ್ಸಪೋ' ಚಳವಳಿ

೧೯೭೦ರಲ್ಲಿ ನಡೆದ 'ಎಕ್ಸ್‌ಪೋ' ಚಳವಳಿ ವೀರೇಂದ್ರ ಪಾಟೀಲ ನೇತೃತ್ವದ ರಾಜ್ಯಸರಕಾರದ ವಿರುದ್ಧ ವಿದ್ಯಾರ್ಥಿಗಳು ಬಂಡೆದ್ದ ದೊಡ್ಡ ಘಟನೆ ಎನ್ನಬಹುದು. ಈ ಚಳವಳಿಗೆ ರಾಜಕೀಯ ಸೋಂಕೂ ಇತ್ತು – ಸಾರ್ವಜನಿಕರ ಬೆಂಬಲವೂ ಇತ್ತು. ೧೯೭೦ರಲ್ಲಿ ಜಪಾನದಲ್ಲಿ ನಡೆದ ಅಂತರ್ – ವಿಶ್ವವಿದ್ಯಾಲಯ ಮೇಳ – ಈ 'ಎಕ್ಸ್‌ಪೋ – ೭೦'. ಈ ಸಮ್ಮೇಳನದಲ್ಲಿ ಬರಿ ವಿದ್ಯಾರ್ಥಿಗಳು ಮಾತ್ರವಲ್ಲದೇ ಯುವ ಜನರು, ರೈತರು ಸಹ ಭಾಗವಹಿಸಬಹುದಾಗಿತ್ತು. ರಾಜ್ಯ ಸರಕಾರದ ಪರವಾಗಿ ಸಮ್ಮೇಳನದಲ್ಲಿ ಭಾಗವಹಿಸುವವರ ಪಟ್ಟಿಯಲ್ಲಿ ಆಡಳಿತ ಪಕ್ಷದ ರಾಜಕಾರಣಿಗಳ ರಕ್ತ ಸಂಬಂಧಿಗಳು, ವರಿಷ್ಠ ಅಧಿಕಾರಿಗಳ ಆಶೀರ್ವಾದ ಪಡೆದ ಮುಖಂಡರು ಸೇರ್ಪಡೆಯಾಗಿದ್ದರು. ಈ ಪಟ್ಟಿಗೆ ಯಾವುದೇ ಒಂದು ವೈಜ್ಞಾನಿಕ ಮಾನದಂಡ ಇರಲಿಲ್ಲ ಎಂಬ ಆಪಾದನೆಯ ಹಿನ್ನೆಲೆಯಲ್ಲಿ 'ವ್ಯವಸ್ಥೆ'ಯ ವಿರುದ್ಧ ಸಿಡಿದೇಳುವ ಹುಮ್ಮಸ್ಸಿನಲ್ಲಿದ್ದ ವಿದ್ಯಾರ್ಥಿಗಳಿಗೆ ಈ ಸುದ್ದಿ ಒಂದು ಅಸ್ತ್ರದಂತೆ ಕೈಗೆ ಸಿಕ್ಕಿತು. ಇದೇ ಹೊತ್ತಿಗೆ ಬೆಂಗಳೂರು ವಿಶ್ವವಿದ್ಯಾಲಯದ ಆಗಿನ ಕುಲಪತಿ ಪ್ರೊಫೆಸರ್ ವಿ.ಕೃ.ಗೋಕಾಕರ ಬಗೆಗೆ ಅಸಮಾಧಾನವಿದ್ದ ಒಂದು ವರ್ಗ ಕೂಡ ವಿಶ್ವವಿದ್ಯಾಲಯದಲ್ಲಿದ್ದು, ಅವಕಾಶಕ್ಕಾಗಿ ಕಾಯುತ್ತಿತ್ತು. ಎಲ್ಲದರ ಒಟ್ಟು ಉದ್ದೇಶ ಸರಕಾರದ ವಿರುದ್ಧ ತಿರುಗಿಬೀಳುವುದಾಗಿತ್ತು. ಹೀಗೆ ವಿದ್ಯಾರ್ಥಿಗಳ ಒಳಗೆ ಕುದಿಯುತ್ತಿದ್ದ ಪ್ರತಿಭಟನೆಯ ಬೆಂಕಿಗೆ, 'ಎಕ್ಸ್‌ಪೋ' ನಿಯೋಗದಲ್ಲಿದ್ದವರ ಹೆಸರುಗಳು ಪತ್ರಿಕೆಗಳಲ್ಲಿ ಪ್ರಕಟವಾದದ್ದೇ ತಡ, ತುಪ್ಪ ಸುರಿದಂತಾಯಿತು. ವಿದ್ಯಾರ್ಥಿಗಳ ಆಕ್ರೋಶ ಭುಗಿಲೆದ್ದಿತು.

ಆಗ ಇಂದಿರಾ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡಿದ್ದ ದೇವರಾಜ ಅರಸರು ಪ್ರದೇಶ ಕಾಂಗ್ರೆಸ್‌ನ ಸಂಚಾಲಕರಾಗಿದ್ದರು. ಹಾಸ್ಟೆಲ್ ವಿದ್ಯಾರ್ಥಿಗಳ ಮೇಲೆ ನಡೆದ ಪೊಲೀಸ್ ಹಲ್ಲೆಯನ್ನು ವಿರೋಧಿಸಿದ ವಿದ್ಯಾರ್ಥಿ ಮುಖಂಡರು ವಿರೋಧ ಪಕ್ಷದ ನಾಯಕರಾಗಿದ್ದ ದೇವರಾಜ ಅರಸ, ಎಚ್.ಸಿದ್ವೀರಪ್ಪ, ಕೆ.ಎಚ್.ಪಾಟೀಲ, ಎಫ್.ಎಂ.ಖಾನ, ಗುಂಡೂರಾವ್‌ರನ್ನು

ಭೇಟಿಯಾಗಿ ಅವರ ಪರಿಚಯ ಮಾಡಿಕೊಂಡರು. ಅವರ ಪ್ರಭಾವಕ್ಕೂ ಒಳಗಾದರು. ಇಂದಿರಾ ಕಾಂಗ್ರೆಸ್ ಕಡೆಗೆ ಆಕರ್ಷಿತರೂ ಆದರು. ಬೆಂಗಳೂರಿನಲ್ಲಿ ಮೊಳಕೆಯೊಡೆದ ಹೋರಾಟ ಕೆಲದಿನಗಳಲ್ಲಿ ಇಡೀ ರಾಜ್ಯವ್ಯಾಪಿಯಾಗಿ ಹರಡಿ ಒಂದು ಬಗೆಯ ರಾಜಕೀಯ ಧ್ರುವೀಕರಣಕ್ಕೆ ದಾರಿ ಮಾಡಿಕೊಟ್ಟಿತು. ವಿದ್ಯಾರ್ಥಿ ಚಳವಳಿ ಉಗ್ರಸ್ವರೂಪ ತಳೆದಿದ್ದರೂ 'ಎಕ್ಸ್‌ಪೋ' ನಿಯೋಗದಲ್ಲಿದ್ದವರು ಜಪಾನಿಗೆ ಹೋಗುವುದನ್ನು ತಡೆಯಲು ಆಗಲಿಲ್ಲ. ೧೯೭೧ರಲ್ಲಿ ಲೋಕಸಭೆಗೆ ಮಧ್ಯಂತರ ಚುನಾವಣೆಗಳು ನಡೆದವು. ದೇವರಾಜ ಅರಸ್ ನೇತೃತ್ವದ ಇಂದಿರಾ ಕಾಂಗ್ರೆಸ್ ಎಲ್ಲ ೨೭ ಸ್ಥಾನಗಳನ್ನು ಗೆದ್ದು ನಿಜಲಿಂಗಪ್ಪನವರ 'ಸಂಸ್ಥಾಕಾಂಗ್ರೆಸ್' ಸ್ವಂತ ರಾಜ್ಯದಲ್ಲಿ ಶೂನ್ಯ ಸಂಪಾದನೆಗಿಳಿಯಿತು.

ಮುಖಭಂಗಕ್ಕೊಳಗಾದ ಮುಖ್ಯಮಂತ್ರಿ ವೀರೇಂದ್ರ ಪಾಟೀಲ ಸೋಲಿನ ನೈತಿಕ ಹೊಣೆ ಹೊತ್ತು ರಾಜೀನಾಮೆ ಸಲ್ಲಿಸಿದರು. ವಿಧಾನಸಭೆಯ ವಿಸರ್ಜನೆಯಾಗಿ ಮೊಟ್ಟಮೊದಲ ಬಾರಿಗೆ 'ವಿಶಾಲ ಮೈಸೂರು' ರಾಜ್ಯ ರಾಷ್ಟ್ರಪತಿ ಆಡಳಿತಕ್ಕೊಳಗಾಯಿತು. ರಾಜ್ಯಪಾಲರಾಗಿದ್ದ ಧರ್ಮವೀರ ಆಡಳಿತ ವಹಿಸಿಕೊಂಡರು. ಇಲ್ಲಿಗೆ, ರಾಷ್ಟ್ರೀಯ ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ, ಜತ್ತಿ, ಕಂಠಿ, ವೀರೇಂದ್ರ ಪಾಟೀಲರ ಆಡಳಿತದ ಅಧ್ಯಾಯ ಮುಗಿದು ಇಂದಿರಾ ಕಾಂಗ್ರೆಸ್‌ನ ದೇವರಾಜ ಅರಸರ 'ದರ್ಬಾರ' ಶುರುವಾಯಿತು. ೧೯೭೨ರಲ್ಲಿ ಅರಸರು ಮುಖ್ಯಮಂತ್ರಿಯಾದರು.

## ಒಂದು ದಶಕ 'ದೊರೆ'ಯಂತೆ ದರ್ಬಾರ್ ನಡೆಸಿದ ಅರಸ !

ಶೀಘ್ರಗತಿಯ ರಾಜಕೀಯ ಸ್ಥಿತ್ಯಂತರಗಳ ಫಲವಾಗಿ ದೇವರಾಜ ಅರಸರು ರಾಜ್ಯದ ರಾಜಕೀಯ ಕ್ಷಿತಿಜದ ಹೊಸ ನಕ್ಷತ್ರವಾಗಿ ಮಿನುಗತೊಡಗಿದರು. ೧೯೭೧ರ ಲೋಕಸಭಾ ಹಾಗೂ ೧೯೭೨ರ ವಿಧಾನಸಭಾ ಚುನಾವಣೆಯಲ್ಲಿ ಇಂದಿರಾಕಾಂಗ್ರೆಸ್‌ನ ಜಯಭೇರಿಗೆ ಕಾರಣಕರ್ತರಾದ ಅರಸರ ವರ್ಚಸ್ಸು ದಿನೇದಿನೇ ಬೆಳೆಯತೊಡಗಿತು. ಅತ್ಯಂತ ಕಡಿಮೆ ಜನಸಂಖ್ಯೆಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿ ಎರಡು ಅತ್ಯಂತ ಪ್ರಬಲಕೋಮುಗಳ ರಾಜ್ಯವೊಂದರ ನಾಯಕರನ್ನು ಹಿಂದೆ ಸರಿಸಿ ಮುಖ್ಯಮಂತ್ರಿ ಪದವಿಗೇರಿದ್ದು ಪ್ರಜಾತಂತ್ರದ ಸುಂದರ ಕ್ಷಣ.

ಅರಸರು ಒಂದು ದಶಕದ ಕಾಲ ದೊರೆಯಂತೆಯೇ ದರ್ಬಾರ ನಡೆಸಿದರು. ಹಿಂದುಳಿದ ವರ್ಗದವರಿಗೆ 'ನ್ಯಾಯ' ಒದಗಿಸಲು ಬದ್ಧಕಂಕಣರಾಗಿದ್ದ ಅವರು ಆ ವರ್ಗದ ಪ್ರತಿನಿಧಿಗಳಿಗೆ ತಮ್ಮ ಸಂಪುಟದಲ್ಲಿ ಪ್ರಮುಖ ಖಾತೆಗಳನ್ನು ಕೊಟ್ಟರು. ಅವರು ಧ್ವನಿಯಿಲ್ಲದವರಿಗೆ 'ಧ್ವನಿ' ಒದಗಿಸಿಕೊಡುತ್ತಿದ್ದಂತೆಯೇ ಇಲ್ಲಿಯವರೆಗೆ 'ಧಣಿ' ಗಳಂತಿದ್ದವರ 'ಧ್ವನಿ' ಅಡಗತೊಡಗಿತು.

## ಅರಸರ ಸಾಧನೆಗಳಲ್ಲಿ ಮುಖ್ಯವಾದವುಗಳೆಂದರೆ....

ಶಿಕ್ಷಣ ಹಾಗೂ ನೌಕರಿಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಒದಗಿಸಲು ಹಾವನೂರ ಆಯೋಗದ ನೇಮಕ; ಭೂಸುಧಾರಣೆಯ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಭೂನ್ಯಾಯ ಮಂಡಳಿಗಳ ರಚನೆ; ತಲೆ ಮೇಲೆ ಮಲ ಹೊರುವ ಅಮಾನವೀಯ ಪದ್ಧತಿಯ ನಿಷೇಧ, ಸರ್ಕಾರದಲ್ಲಿ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಹಾಗೂ ಮಹತ್ವದ ಖಾತೆಗಳ ನೀಡಿಕೆ; ಎಲ್ಲಕ್ಕೂ ಮಿಗಿಲಾಗಿ ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಿದ್ದು!

ಮೊದಲಿನಿಂದಲೂ ಹೊಸ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರನ್ನು ಇಡಲು ವಿರೋಧಿಯಾಗಿದ್ದ ಅರಸರು ಬಹುಜನರ ಬಹುಮತದ ಒತ್ತಡಕ್ಕೆ ಮಣಿದು ೧೯೭೩ರಲ್ಲಿ 'ಮೈಸೂರು ರಾಜ್ಯ' ದ ಹೆಸರನ್ನು 'ಕರ್ನಾಟಕ ರಾಜ್ಯ' ವೆಂದು ಬದಲಿಸುವ ಗೊತ್ತುವಳಿಯನ್ನು ವಿಧಾನಸಭೆಯಲ್ಲಿ ಮಂಡಿಸಿ ಪಾಸು ಮಾಡಲೇಬೇಕಾಯಿತು.

## ಹಿಂದುಳಿದ ವರ್ಗಗಳ 'ಹರಿಕಾರ' ಹಾವನೂರ್

ಮೂಲತಃ ರಾಜಕಾರಣಿಯಲ್ಲದ ಕಾನೂನು ತಜ್ಞರಾಗಿದ್ದ ಎಲ್. ಜಿ. ಹಾವನೂರರು ಸಾಮಾಜಿಕ ಸಮಾನತೆಯ ಪ್ರತಿಪಾದಕರಾಗಿದ್ದರು. ೧೯೭೨ರಲ್ಲಿ ಅವರನ್ನು ಅರಸರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದ್ದರು. ಅವರು ತಯಾರಿಸಿದ ಐತಿಹಾಸಿಕ ವರದಿಯಿಂದಾಗಿ ಅವರು ಹಿಂದುಳಿದ ವರ್ಗಗಳ 'ಹರಿಕಾರ'ರೆಂದು ಹೆಸರು ಮಾಡಿದರು. ದೇವರಾಜ ಅರಸರ ರಾಜಕೀಯ ಜೀವನಕ್ಕೆ ಸೈದ್ಧಾಂತಿಕ ನೆಲೆ ಒದಗಿಸಿದ ಹಾವನೂರರ ಪಾತ್ರ ಮಹತ್ವದ್ದಾಗಿತ್ತು. ಮುಂದೆ ಅರಸರ ಆಹ್ವಾನದ ಮೇರೆಗೆ ನೇರವಾಗಿ

ಮಂತ್ರಿಯಾಗಿ ರಾಜಕಾರಣ ಪ್ರವೇಶಿಸಿದ ಹಾವನೂರರ ರಾಜಕೀಯ ಜೀವನದಲ್ಲಿ ದೇವರಾಜ ಅರಸರ ಪಾತ್ರವೂ ಮುಖ್ಯವಾಗಿತ್ತು. ಆದರೆ, ಮುಂದೊಂದು ದಿನ ಇದೇ ಹಾವನೂರರು ಅರಸರ ಸಂಗ ತ್ಯಜಿಸಿ ಗುಂಡೂರಾಯರ ಜೊತೆ ಸೇರಿದರು. ಕೆಲಕಾಲದ ನಂತರ 'ಬಿಜೆಪಿ'ಗೆ ಜಿಗಿದರು.

ವ್ಯಾಪಕ ಅಧ್ಯಯನ, ವೈಜ್ಞಾನಿಕ ವಿಶ್ಲೇಷಣೆ, ಸಾಮಾಜಿಕ ಪ್ರಜ್ಞೆಗೆ ಹೆಸರಾಗಿದ್ದ ಲಕ್ಷ್ಮಣ ಹಾವನೂರರನ್ನು ದಕ್ಷಿಣ ಆಫ್ರಿಕಾ ಸರಕಾರವು ತನ್ನ ದೇಶದ ಸಂವಿಧಾನ ರಚನೆಯ ಸಲಹೆಗಾರರನ್ನಾಗಿ ಆಹ್ವಾನಿಸಿದ್ದು ಅವರ ವಿದ್ವತ್ತೆಗೆ ಸಂದ ಗೌರವ. ಕರ್ನಾಟಕಕ್ಕೆ ಹೆಮ್ಮೆ!

## ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ

೧೯೭೫ರಲ್ಲಿ ಜಯಪ್ರಕಾಶ ನಾರಾಯಣರು 'ಸಂಪೂರ್ಣಕ್ರಾಂತಿ'ಗಾಗಿ ಚಳುವಳಿ ತೀವ್ರಗೊಳಿಸಿದ್ದರು. ಇದೇ ಕಾಲಕ್ಕೆ ಅಲಹಾಬಾದ ಹೈಕೋರ್ಟ ಚುನಾವಣೆಯಲ್ಲಿ 'ಅಕ್ರಮ' ಎಸಗಿದ್ದಕ್ಕಾಗಿ ಇಂದಿರಾ ಗಾಂಧಿಯವರ ಲೋಕಸಭೆಯ ಸದಸ್ಯತ್ವವನ್ನು ರದ್ದುಗೊಳಿಸಿತ್ತು. ಎಲ್ಲ ವಿಪತ್ತುಗಳಿಂದ ತಪ್ಪಿಸಿಕೊಂಡು 'ಅಧಿಕಾರ' ಉಳಿಸಿಕೊಳ್ಳಲು ಇಂದಿರಾ ಗಾಂಧಿಯವರು ದೇಶದ ಶಾಂತಿ ಸುಭದ್ರತೆಗೆ ಅಪಾಯ ಒದಗಲಿದೆ ಎಂಬ ಕಾರಣ ಮುಂದೆ ಮಾಡಿ 'ತುರ್ತು ಪರಿಸ್ಥಿತಿ' ಹೇರಿದರು. ಜೆ.ಪಿ.ಯಾದಿಯಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದ ಹಿರಿಯ ನಾಯಕರನ್ನೆಲ್ಲ ಜೈಲಿಗೆ ತಳ್ಳಿದರು. ದಬ್ಬಾಳಿಕೆ, ಅಧಿಕಾರಿಗಳ ಅತಿರೇಕದ ವರ್ತನೆಗಳು ನಿತ್ಯ ಸಂಗತಿಗಳೆನಿಸಿದವು. ಕರ್ನಾಟಕದಲ್ಲಿಯೂ ಕೆಲವೆಡೆ ಅತಿರೇಕಗಳು ನಡೆದದ್ದು ನಿಜವಾದರೂ ದೇವರಾಜ ಅರಸರು ದಬ್ಬಾಳಿಕೆಗೆ ಅವಕಾಶ ಕೊಡಲಿಲ್ಲ. ಇದೇ ಕಾರಣಕ್ಕೆ ೧೯೭೭ರ ಚುನಾವಣೆಯಲ್ಲಿ ಲೋಕಸಭೆಯ ೨೮ ಸ್ಥಾನಗಳಲ್ಲಿ ೨೬ನ್ನು ಇಂದಿರಾ ಕಾಂಗ್ರೆಸ್ಸಿಗೆ ಗೆದ್ದುಕೊಡಲು ಅರಸರಿಗೆ ಸಾಧ್ಯವಾಯಿತು. ಈ ಚುನಾವಣೆಯ ನಂತರ ಅರಸರ ಪ್ರಭಾವ, ವರ್ಚಸ್ಸು ಮತ್ತಷ್ಟು ವೃದ್ಧಿಸಿತು.

ತುರ್ತು ಪರಿಸ್ಥಿತಿ ರದ್ದಾದ ನಂತರದ ೧೯೭೭ರ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಹಾಗೂ ಆಕೆಯ ಪುತ್ರ ಸಂಜಯ ಹೀನಾಯ ಸೋಲು ಅನುಭವಿಸಿದ್ದಲ್ಲದೇ ಉತ್ತರ ಭಾರತದ ಒಂಬತ್ತು ರಾಜ್ಯಗಳಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷ ಧೂಳೀಪಟವಾಗಿ ಹೇಳ ಹೆಸರಿಲ್ಲದಂತೆ ನಿರ್ನಾಮವಾಗಿತ್ತು. ದಕ್ಷಿಣ ಭಾರತದ ಕರ್ನಾಟಕ, ಆಂಧ್ರಪ್ರದೇಶ ಮುಂತಾದ

ಕೆಲವು ರಾಜ್ಯಗಳಲ್ಲಿ ಮಾತ್ರ ಇಂದಿರಾ ಕಾಂಗ್ರೆಸ್ ಜೀವ ಹಿಡಿದುಕೊಂಡು ತನ್ನ ಅಸ್ತಿತ್ವ ಉಳಿಸಿಕೊಂಡಿತ್ತು. ಕೇಂದ್ರದಲ್ಲಿ ಮೊಟ್ಟ ಮೊದಲಬಾರಿಗೆ ಮೊರಾರ್ಜಿ ದೇಸಾಯಿ ನೇತೃತ್ವದ, ಜನತಾಪಕ್ಷದ ಕಾಂಗ್ರೆಸ್ಸೇತರ ಸರಕಾರ ಅಧಿಕಾರಕ್ಕೆ ಬಂತು.

ಈ ವೇಳೆಗೆ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದ ದೇವರಾಜ ಅರಸರು ಮೂಲೆಗುಂಪಾಗಿದ್ದ ಇಂದಿರಾ ಗಾಂಧಿಯವರಿಗೆ ರಾಜಕೀಯ ಪುನರ್ಜನ್ಮ ನೀಡಬಯಸಿದರು. ಚಿಕ್ಕಮಗಳೂರಿನಿಂದ ಲೋಕಸಭೆಗೆ ಚುನಾಯಿತರಾಗಿದ್ದ ಡಿ. ಬಿ. ಚಂದ್ರೇಗೌಡರಿಂದ ರಾಜೀನಾಮೆ ಕೊಡಿಸಿದರು. ತೆರವಾದ ಆ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಇಂದಿರಾಗಾಂಧಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ವೀರೇಂದ್ರ ಪಾಟೀಲ ಅವರ ಪ್ರತಿಸ್ಪರ್ಧಿ! ಇಂದಿರಾ ಗೆದ್ದರು – ಅರಸು ಅವರನ್ನು ಗೆಲ್ಲಿಸಿದರು!

ಚಿಕ್ಕಮಗಳೂರಿನಿಂದ ಚುನಾವಣೆ ಗೆದ್ದ ಇಂದಿರಾರ ಖುಷಿ ಬಹಳ ದಿನ ಉಳಿಯಲಿಲ್ಲ. ಲೋಕಸಭೆಯ ಸದಸ್ಯತ್ವದಿಂದ ಉಚ್ಚಾಟಿತರಾದ ಇಂದಿರಾ ಬಂಧನಕ್ಕೊಳಗಾದರು. ನಂತರದ ದಿನಗಳಲ್ಲಿ ಬರುಬರುತ್ತ ಇಂದಿರಾ ಅರಸ್ ಮೈತ್ರಿ ಕರಗತೊಡಗಿತು. ಪರಸ್ಪರ ಅಪನಂಬಿಕೆ ಹೆಚ್ಚಾಗಿ ಸಂಬಂಧ ಹಳಸತೊಡಗಿತು. ರಾಷ್ಟ್ರಮಟ್ಟದಲ್ಲಿ ಅರಸರ ಪ್ರಭಾವ ಬೆಳೆಯುತ್ತಿದ್ದುದು ತಮ್ಮ 'ಅಸ್ತಿತ್ವಕ್ಕೇ ಅಪಾಯಕಾರಿ' ಎಂದು ಬಗೆದ ಇಂದಿರಾರಲ್ಲಿ ಅರಸರ ಬಗೆಗೆ ಅಸಹನೆ ಬೆಳೆಯುತೊಡಗಿತು. ಈ ಹಿಂದೆ ನಿಜಲಿಂಗಪ್ಪ, ಕೆಂಗಲ್‌ರಿಗಾದ ಗತಿಯೋ ಅರಸರಿಗೂ ಕಾದಿತ್ತು. ಅರಸರಿಗೆ ಪ್ರತಿಸ್ಪರ್ಧಿಯಾಗಿ ತಮಗೆ ಪರಮನಿಷ್ಠರಾಗಿದ್ದ ಆರ್. ಗುಂಡೂರಾಯರನ್ನು ಇಂದಿರಾ ಎತ್ತಿ ಕಟ್ಟತೊಡಗಿದರು.

ಇತ್ತ ಮೊರಾರ್ಜಿ ದೇಸಾಯಿ ನೇತೃತ್ವದ ಕೇಂದ್ರ ಸರಕಾರ ಭ್ರಷ್ಟಾಚಾರದ ಆಪಾದನೆ ಮೇಲೆ ರಾಜ್ಯದ ಅರಸ್ ಸರಕಾರವನ್ನು ವಜಾಗೊಳಿಸಿತು. ಆದರೆ, ೧೯೭೮ರ ವಿಧಾನಸಭಾ ಚುನಾವಣೆಯಲ್ಲಿ ಅರಸ ನೇತೃತ್ವದ ಕಾಂಗ್ರೆಸ್ ಪಕ್ಷ ಅದ್ಭುತ ಜಯಗಳಿಸಿ ಮತ್ತೆ ಅಧಿಕಾರಕ್ಕೆ ಬಂತು. ಇಂದಿರಾರ 'ನೀಲಿಕಣ್ಣಿನ' ಹುಡುಗ ಗುಂಡೂರಾವ್ ಸಹ ಸೋಮವಾರ ಪೇಟೆಯಿಂದ ವಿಧಾನಸಭೆಗೆ ಚುನಾಯಿತರಾದರು. ಆ ವೇಳೆಗಾಗಲೇ 'ಗುಂಡೂರಾವ್'ರಲ್ಲಿ ತಮ್ಮ 'ಪ್ರತಿಸ್ಪರ್ಧಿ'ಯನ್ನು ಗುರುತಿಸಿದ್ದ ಅರಸ ಅರೆಮನಸ್ಸಿನಿಂದ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಂಡರು.

# ಅರಸರ ಅವನತಿಯ ಆರಂಭ

ದಿನಗಳೆದಂತೆ ಅರಸ-ಇಂದಿರಾ ನಡುವಿನ ಅಂತರ ಹೆಚ್ಚುತ್ತಲೇ ಹೋಯಿತು. ೧೯೭೯ರಲ್ಲಿ ಕೇಂದ್ರದಲ್ಲಿ ಮೊರಾರ್ಜಿ ದೇಸಾಯಿ ಸರಕಾರದ ಕಥೆ ಮುಗಿದು, ಚೌಧರಿ ಚರಣಸಿಂಗ್ ಕಾಂಗ್ರೆಸ್ ಬೆಂಬಲದಿಂದ ಪ್ರಧಾನಿಯಾಗಿ ತಮ್ಮ 'ಕೊನೆಯಾಸೆ' ಈಡೇರಿಸಿಕೊಂಡರು. ಕಾಂಗ್ರೆಸ್ ಮತ್ತೊಮ್ಮೆ ಹೋಳಾಯಿತು. ಅರಸರ ಸಹೋದ್ಯೋಗಿಯಾಗಿದ್ದ ಎಸ್. ಬಂಗಾರಪ್ಪ ಇಂದಿರಾ ಕಾಂಗ್ರೆಸ್‌ನ ಪ್ರದೇಶ ಸಮಿತಿ ಅಧ್ಯಕ್ಷರಾಗಿ ನಿಯುಕ್ತರಾದರು. "ತಾನು ಯಾವತ್ತಾದರೂ ಎಲ್ಲಿದ್ದರೂ 'ಎಂಜಿನ್', ಬೋಗಿಯಾಗಬಯಸುವುದಿಲ್ಲ" ಎಂದು ಬಂಗಾರಪ್ಪ ಹೇಳುತ್ತಾರೆ. ಗುಂಡೂರಾವ್ ಸಹ ಅರಸು ಸಂಪುಟದಿಂದ ಹೊರಬಿದ್ದು ವಿಧಾನ ಸಭೆಯಲ್ಲಿ ಇಂದಿರಾ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾದರು. ಆದರೆ, ಅಧಿವೇಶನದ ವೇಳೆಗೆ ಬೆಂಬಲಿಗ ಶಾಸಕರ ಸಂಖ್ಯಾಬಲ ಕಡಿಮೆಯಾಗಿ ಗುಂಡೂರಾಯರು ವಿರೋಧ ಪಕ್ಷದ ನಾಯಕನ ಸ್ಥಾನ ಕಳೆದುಕೊಂಡರು. ಆದರೆ, ಇಂದಿರಾ ಬೆಂಬಲಿಗರನ್ನು ವಿರೋಧ ಪಕ್ಷದಲ್ಲಿ ಕೂರುವಂತೆ ಮಾಡಿದ ಅರಸು ಕಾಂಗ್ರೆಸ್ ಹಾಗೂ ಜನತಾ ಪಕ್ಷಗಳ ಖುಷಿ ಬಹಳ ದಿನ ಉಳಿಯಲಿಲ್ಲ. ಗುಂಡೂರಾವ್ ಮತ್ತೆ ಶಾಸಕಾಂಗ ವಿರೋಧ ಪಕ್ಷದ ನಾಯಕನೆಂದು 'ಮನ್ನಣೆ' ಗಳಿಸಿದ್ದಲ್ಲದೇ ಇಂದಿರಾ ಕಾಂಗ್ರೆಸ್ ಪಕ್ಷದ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಬಡ್ತಿ ಪಡೆದರು. ದೇಶ ತೀವ್ರ ರಾಜಕೀಯ ಸ್ಥಿತ್ಯಂತರಗಳಿಗೆ ಸಾಕ್ಷಿಯಾಗತೊಡಗಿತು.

ಕೇಂದ್ರದಲ್ಲಿ ಒಮ್ಮೆಯೂ ಪಾರ್ಲಿಮೆಂಟನ್ನು ಎದುರಿಸದ ಚರಣಸಿಂಗ್ ಸರ್ಕಾರ ಪತನಗೊಂಡಿತು. ೧೯೮೦ರ ಜನವರಿಯಲ್ಲಿ ಲೋಕಸಭೆಗೆ ಮಧ್ಯಂತರ ಚುನಾವಣೆಗಳು ನಡೆದವು. ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್ ೨೭ ಸ್ಥಾನಗಳಿಸಿ ಜಯಭೇರಿ ಹೊಡೆಯಿತು. ಉಳಿದ ಒಂದು ಸ್ಥಾನ ಜನತಾ ಪಕ್ಷದ ಪಾಲಾಯಿತು. ಘಟಾನುಘಟಿಗಳೆಲ್ಲ ಮಣ್ಣು ಮುಕ್ಕಿ ಅರಸು ಕಾಂಗ್ರೆಸ್ಸಿನ ಅಭ್ಯರ್ಥಿಗಳೆಲ್ಲ ಠೇವಣಿ ಕಳೆದುಕೊಂಡರು. ಆಘಾತದಿಂದ ತತ್ತರಿಸಿದ ಅರಸು ಸಚಿವ ಸಂಪುಟ ರಾಜೀನಾಮೆ ಸಲ್ಲಿಸಿತು. ಅರಸರ ಹಿಂದಿದ್ದ ಕಾಂಗ್ರೆಸ್ (ಐ) ನಿಂದ ಆಯ್ಕೆಯಾಗಿದ್ದ ಶಾಸಕರನೇಕರು ಇಂದಿರಮ್ಮನಿಗೆ 'ಉಘೋ ಉಘೋ' ಎನ್ನುತ್ತ ಅವರತ್ತ ವಲಸೆ ಹೋದರು. ಜನತಾ ಪಕ್ಷದ ಕೆಲವು ಶಾಸಕರೂ ಅವರನ್ನು ಹಿಂಬಾಲಿಸಿದರು.

ಶಾಸಕಾಂಗ ವಿರೋಧಪಕ್ಷದ ನಾಯಕರಾಗಿದ್ದ ಗುಂಡೂರಾಯರ ಅದೃಷ್ಟದ ಬಾಗಿಲು ತೆರೆಯಿತು. ರಾಜ್ಯಪಾಲರು ಸಂವಿಧಾನ ಬದ್ಧವಾಗಿ ನಡೆದುಕೊಂಡರು. "ನೀವು ಸರಕಾರ ರಚಿಸುತ್ತೀರಾ?" ಎಂದು ಗುಂಡೂರಾಯರನ್ನು ಕೇಳಿ ಗಡುವು ಕೊಟ್ಟರು. ಆಗ "ಮುಂದಿನ ಮುಖ್ಯಮಂತ್ರಿ ಯಾರು – ಗುಂಡೂರಾವ್? ಅಥವಾ ಬಂಗಾರಪ್ಪ?" ಎಂಬ ಊಹಾಪೋಹ, ಕುತೂಹಲಕ್ಕೆಡೆಯುಂಟಾಯಿತು. ಕೊನೆಗೂ ಇಂದಿರಾರ ಕೃಪಾಶೀರ್ವಾದ ದೊರೆತದ್ದು ಅವರ ನೆಚ್ಚಿನ ಬಂಟ ಗುಂಡೂರಾಯರಿಗೇ! ತಮ್ಮ ಸರಕಾರ, "ಇಂದಿರಾಗಾಂಧಿ ಕೃಪಾ ಪೋಷಿತ ನಾಟಕ ಮಂಡಳಿ" ಎಂದು ಸ್ವತಃ ಗುಂಡೂರಾವ್ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ದೇವರಾಜ ಅರಸರ ದುರಂತವೆಂದರೆ – ಇಂದಿರಾ ಗಾಂಧಿ ಮೊದಲ್ಗೊಂಡು ಅರಸರಿಂದ ರಾಜಕೀಯ ಮರುಜನ್ಮ, ಅಧಿಕಾರ, ಅಂತಸ್ತು, ಅಸ್ತಿತ್ವ ಪಡೆದವರೇ ಅವರಿಗೆ ತಿರುಗಿಬಿದ್ದರು – ಬೆನ್ನಲ್ಲಿ ಚೂರಿ ಹಾಕಿದರು.

## ಆರ್. ಗುಂಡೂರಾವ್ – ಆಗ ಖಾಸಗಿ ಬಸ್ಸಿನ 'ಏಜಂಟಗಿರಿ' ಈಗ ಸರಕಾರದ 'ಸೂತ್ರಧಾರಿ' !

ಪ್ರಾಥಮಿಕ ಶಾಲಾ ಶಿಕ್ಷಕರ ಮಗನಾಗಿ ಹುಟ್ಟಿದ ಗುಂಡೂರಾವ್ ಖಾಸಗಿ ಬಸ್ಸಿನ ಏಜಂಟರಾಗಿ ಜೀವನ ಪ್ರಾರಂಭಿಸಿದರು. ದಕ್ಷ ಆಡಳಿತಗಾರ, ಚಿಂತಕ, ರಸಿಕ, ಹಿಂದುಳಿದ ಜನಾಂಗಗಳ ಹಿತಚಿಂತಕ ದೇವರಾಜ ಅರಸರಿಗೂ – ಅಬ್ಬರ, ಅಟಾಟೋಪಕ್ಕೆ ಹೆಸರಾದ ಧಾಡಸೀ ಸ್ವಭಾವದ, ಧಾಂಡಿಗ ವ್ಯಕ್ತಿ ಗುಂಡೂರಾಯರಿಗೂ ಅಜಗಜಾಂತರ.

"ನಾನು ಗಾಂಧೀವಾದಿಯಲ್ಲ – ಇಂದಿರಾ ಗಾಂಧೀವಾದಿ – ನಾನು ತೊಡುವುದು ಪೊಲಿಯಸ್ಟರ್ ಖಾದಿ" "ನಾನು ತಿಳಿ ಸಾರು ಬ್ರಾಹ್ಮಣ ಅಲ್ಲ – ಕುರಿ ಕೋಳಿ ತಿನ್ನುವ ಬ್ರಾಹ್ಮಣ" ಎಂದು ಎಗ್ಗಿಲ್ಲದೇ ಉಗ್ಗಡಿಸುತ್ತಿದ್ದ ಅವರ ಪ್ರಾಮಾಣಿಕತೆಯನ್ನು ಮೆಚ್ಚಲೇಬೇಕು. ಸಮಯ ಪ್ರಜ್ಞೆ, ಸ್ಪಷ್ಟ ಮಾತು ರಾಯರ ಹೆಗ್ಗಳಿಕೆ. ಅವರು ಆಷಾಢಭೂತಿಯಾಗಿರಲಿಲ್ಲ. ಅವರ ಇಂದಿರಾನಿಷ್ಠೆ ಅಚಲವಾಗಿತ್ತು.

ಕರ್ನಾಟಕದಲ್ಲಿ 'ಕನ್ನಡ' ವಿಜೃಂಭಿಸಬೇಕು – ಕಲಿಕೆಯಲ್ಲಿ, ಆಡಳಿತದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ದೊರಕಬೇಕೆಂಬ ಬೇಡಿಕೆ ಮುಂದಿಟ್ಟು ಚಾಲೂ ಆದ ಐತಿಹಾಸಿಕ 'ಗೋಕಾಕ ಚಳವಳಿ' – ಗುಂಡೂರಾವ್ ಸರ್ಕಾರ ಎದುರಿಸಿದ

ದೊಡ್ಡ ಸವಾಲು. ವರನಟ ಡಾ॥ ರಾಜಕುಮಾರ್ ಈ ಚಳವಳಿಯಲ್ಲಿ ಧುಮುಕಿದಾಗ ಇಡೀ ರಾಜ್ಯಾದ್ಯಂತ ಸಂಚಲನ ಉಂಟಾಯಿತು. "ಹೆಸರಾಯಿತು ಕರ್ನಾಟಕ – ಉಸಿರಾಗಲಿ ಕನ್ನಡ" ಎಂಬ ಕವಿವಾಣಿ ಎಲ್ಲೆಡೆ ಅನುರಣಿಸತೊಡಗಿತು. ಗುಂಡೂರಾವ್ ಸರ್ಕಾರ ಚಳವಳಿ ನಿರತರ ಬೇಡಿಕೆಗೆ ಮಣಿಯಲೇ ಬೇಕಾಯಿತು.

ಕರ್ನಾಟಕದಲ್ಲಿ ಅರಸು ಆಡಳಿತ ಆರಂಭವಾದಾಗ ಎಫ್. ಎಂ. ಖಾನ್, ಗುಂಡೂರಾವ್ ಎಂಬ ಈ ಅವಳಿ ಯುವ ರಾಜಕಾರಣಿಗಳು ಆಗ ತಾನೇ ರಾಜಕೀಯರಂಗ ಪ್ರವೇಶ ಮಾಡಿದ್ದರು. ಕೊಡಗಿನ ಜೇನುತುಪ್ಪ, ಏಲಕ್ಕಿ ಕಾಣಿಕೆ ಮೂಲಕ ಗುಂಡೂರಾವ್ ಇಂದಿರಾರ ಪರಿಚಯ ಮಾಡಿಕೊಂಡು ಅವರ ಪ್ರೀತಿ, ವಿಶ್ವಾಸ ಗಳಿಸುತ್ತ ಅವರ ಕೃಪಾಕಟಾಕ್ಷಕ್ಕೊಳಗಾದರು. ಗುಂಡೂರಾಯರ ದೃಷ್ಟಿಯಲ್ಲಿ 'ಇಂದಿರಾ ಗಾಂಧಿ'ಯವರು 'ವಿಶ್ವನಾಯಕಿ' ಯಾಗಿದ್ದರು! ಇಂದಿರಾ ಒಲಿದೊಡೆ ಕೊರಡು ಕೊನರತೊಡಗಿತು. ೧೯೭೨ರ ವಿಧಾನಸಭಾ ಚುನಾವಣೆಯಲ್ಲಿ ಕೊಡಗಿನ ಸೋಮವಾರಪೇಟೆ ಕ್ಷೇತ್ರದಿಂದ ಸ್ಪರ್ಧಿಸಲು ಗುಂಡೂರಾಯರಿಗೆ ಟಿಕೆಟ್ ಸಿಕ್ಕಿತು – ಆರಿಸಿಯೂ ಬಂದರು. ಗರಡಿಯ ಗುರು ಅರಸರೊಂದಿಗೆ ಅಚಲವಾಗಿ ನಿಂತರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿಯಾದರು. ಮುಂದೆ ಒಂದೇ ವರ್ಷದಲ್ಲಿ ವಾರ್ತೆ, ಕ್ರೀಡಾ, ಯುವಜನ ಮಂತ್ರಿಯಾದರು.

ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿತವಾದಾಗ ರಾಯರ ಪ್ರಭಾವ ವಿಸ್ತರಿಸಿತು. ಸಂಜಯ ಗಾಂಧಿ ಸ್ನೇಹದ ಮೂಲಕ ಇಂದಿರಾ ಗಾಂಧಿಯವರಿಗೆ ಇನ್ನೂ ಹತ್ತಿರವಾಗಿ ಅವರ 'ಆಪ್ತ ವರ್ಗ' ಸೇರಿದರು. ಅಲ್ಪಾವಧಿಯಲ್ಲಿಯೇ ಗುಂಡೂರಾವ್ ತಮ್ಮ ಗರಡಿಯ ಗುರು ದೇವರಾಜ ಅರಸರಿಗೇ ಸಡ್ಡು ಹೊಡೆದು ಪ್ರಬಲ ಪೈಪೋಟಿ ಕೊಡುವಷ್ಟು ಬೆಳೆಯತೊಡಗಿದರು. ಆದರೆ, ೧೯೭೭ರ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ನೆಲಕಚ್ಚಿ ಇಂದಿರಾ–ಸಂಜಯ ಇಬ್ಬರೂ ಸೋತರು. ಕರ್ನಾಟಕದಲ್ಲಿ ಮಾತ್ರ ಅರಸ್‌ರು ಇಂದಿರಾ ಕಾಂಗ್ರೆಸ್‌ಗೆ ೨೬ ಸ್ಥಾನ ಗೆದ್ದು ಕೊಟ್ಟು ಅದರ ಮಾನ ಉಳಿಯುವಂತೆ ಮಾಡಿದರು. ೧೯೭೮ರಲ್ಲಿ ಭ್ರಷ್ಟಾಚಾರದ ಆಪಾದನೆ ಮೇಲೆ ಅರಸು ಸರಕಾರ ವಜಾಗೊಂಡ ನಂತರ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪುನಃ ಜಯಭೇರಿ ಬಾರಿಸಿ ಅರಸು ಅಧಿಕಾರಕ್ಕೆ ಬಂದರು. ಗುಂಡೂರಾವ್ ಸಹ ಮತ್ತೆ ಸೋಮವಾರಪೇಟೆಯಿಂದ ಆರಿಸಿ ಬಂದರು. ಅರಸು ಪ್ರಭಾವ ತಗ್ಗಿಸಲು ಗುಂಡೂರಾಯರಿಗೆ ಹವಾ ಹಾಕತೊಡಗಿದ್ದ ಇಂದಿರಾ–ಸಂಜಯರ 'ವಸೀಲಿ'ಯಿಂದ ಗುಂಡೂರಾವ್ ಮತ್ತೆ ಅರಸು ಸಂಪುಟ ಸೇರಿದರು. ಇಂದಿರಾರ 'ಟ್ರೋಜನ್ ಹಾರ್ಸ್' ಗುಂಡೂರಾವ್

ತಮ್ಮ ಪ್ರತಿಸ್ಪರ್ಧಿ ಎಂದು ಅರಸರಿಗೆ ಅರಿವಾಗಿತ್ತು. ಅರಸು ತಮ್ಮ 'ಪ್ರತಿಸ್ಪರ್ಧಿ' ಎಂಬ ಭಯ ಇಂದಿರಾರನ್ನು ಆವರಿಸಿತ್ತು. ಅಂತೂ ಕೊನೆಗೊಮ್ಮೆ ಇಂದಿರಾ - ಅರಸ್ ನಡುವಿನ ವಿರಸ ತಾರಕಕ್ಕೇರಿ ಕಾಂಗ್ರೆಸ್ ಮತ್ತೊಮ್ಮೆ ಹೋಳಾಯಿತು. ಅರಸು ತಮ್ಮ ಬಣಕ್ಕೆ 'ಕರ್ನಾಟಕ-ಕಾಂಗ್ರೆಸ್' ಎಂದು ಹೆಸರಿಟ್ಟರು.

೧೯೭೯ರಲ್ಲಿ ಇಂದಿರಾ ಕಾಂಗ್ರೆಸ್‌ನಿಂದ ಉಚ್ಚಾಟಿತರಾದ ಅರಸ್ ತಮ್ಮ ಜೊತೆಗಿದ್ದ ೧೫೫ ಶಾಸಕರ ಪೈಕಿ ಬಹುಸಂಖ್ಯೆಯ ಸದಸ್ಯರು ತಮ್ಮ ಬೆಂಬಲಕ್ಕಿದ್ದ ಕಾರಣದಿಂದ ಮುಖ್ಯಮಂತ್ರಿಯಾಗಿ ಮುಂದುವರಿದರು. ಗುಂಡೂರಾವ್, ಬಂಗಾರಪ್ಪ, ಮೊಯ್ಲಿ ದೇವರಾಜ ಅರಸರ ಪಾಳೆಯ ತ್ಯಜಿಸಿ ಇಂದಿರಾ ಬಣ ಸೇರಿದರು. ಕೇಂದ್ರ ಮಟ್ಟದಲ್ಲಿ ಇಂದಿರಾ ಕಾಂಗ್ರೆಸನಿಂದ ಹೊರನಡೆದಿದ್ದ 'ಬ್ರಹ್ಮಾನಂದ ರೆಡ್ಡಿ - ಸ್ವರಣಸಿಂಗ್' ಗುಂಪಿನ ಕಾಂಗ್ರೆಸ್ ಜೊತೆ ಅರಸ್‌ರು ('ಕರ್ನಾಟಕ ಕಾಂಗ್ರೆಸ್') ಕೈಜೋಡಿಸಿದರು. ಮುಂದೆ ಕೆಲದಿನಗಳಲ್ಲಿ ಜನತಾ ಪಕ್ಷದ 'ಅವಿಶ್ವಾಸ ಸೂಚನೆ'ಗೆ ಇಂದಿರಾ ಕಾಂಗ್ರೆಸ್ ಹಾಗೂ ಇತರ ಪಕ್ಷಗಳ ಶಾಸಕರು ಬೆಂಬಲ ನೀಡಿದ್ದರಿಂದ ಅರಸು ಅಧಿಕಾರ ಕಳೆದುಕೊಂಡು ಗುಂಡೂರಾಯರು ಮುಖ್ಯಮಂತ್ರಿಯಾದರು.

೧೯೮೦ರ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ೨೮ರಲ್ಲಿ ೨೭ ಸ್ಥಾನ ಗೆದ್ದಿತು. ಅರಸರ ಕಾಂಗ್ರೆಸ್ (ಯು) ಪಕ್ಷದ ವತಿಯಿಂದ ಸ್ಪರ್ಧಿಸಿದ್ದ ಹಲವಾರು ಘಟಾನುಘಟಿಗಳು ಠೇವಣಿ ಕಳೆದುಕೊಂಡರು. ಧೃತಿಗೆಡದ ಅರಸು 'ಕ್ರಾಂತಿರಂಗ' ಎಂಬ ಹೊಸ ಪಕ್ಷ ಹುಟ್ಟು ಹಾಕಿದರು. ಹದಗೆಡುತ್ತಿದ್ದ ಆರೋಗ್ಯ, ಮಗಳ ಸಾವು - ಹೀಗೆ ಒಂದರ ಮೇಲೊಂದರಂತೆ ಬಂದೆರಗಿದ ಆಘಾತಗಳು ಅರಸರನ್ನು ಅಲ್ಲಾಡಿಸಿದರೂ ಅವರ ರಾಜಕೀಯ ಹುಮ್ಮಸ್ಸು ಕಡಿಮೆಯಾಗಲಿಲ್ಲ.

ಅರಸರ ನಂತರ ಹೊಸ ಹುರುಪಿನಿಂದ ತಮ್ಮ ಆಡಳಿತ ಆರಂಭಿಸಿದ ಗುಂಡೂರಾಯರು, "ಕಳ್ಳ ಸಂಗ್ರಹ, ಕಳ್ಳಸಂತೆಯಲ್ಲಿ ತೊಡಗಿದ ವರ್ತಕರನ್ನು ಮಟ್ಟ ಹಾಕುವುದಾಗಿಯೂ ಅಂಥವರ ಫೋಟೋಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದಾಗಿಯೂ" ಗುಡುಗಿದರು. ಕೆಲವರ ಬಂಧನವೂ ಆಯಿತು. ಆದರೆ, ಮೊದಲ ನೂರು ದಿನಗಳಲ್ಲಿ ಗುಂಡೂರಾವ್ ಮಾಡಿದ್ದೆಂದರೆ : "ಅಬ್ಬರದ ಸನ್ಮಾನ ಮಾಡಿಸಿಕೊಂಡದ್ದು; ಹೆಲಿಕ್ಯಾಪ್ಟರ್‌ನಲ್ಲಿ ಹಾರಾಡಿದ್ದು; ಕತ್ತಿ-ಗುರಾಣಿ, ಗದೆಗಳನ್ನು ಸ್ವೀಕರಿಸಿದ್ದು; ರೋಷಾವೇಶದ ಭಾಷಣ ಬಿಗಿದದ್ದು - ಪತ್ರಿಕೆಗಳಲ್ಲಿ ಕಳ್ಳ ಕದೀಮರ 'ಫೋಟೊ' ಬದಲು ತಮ್ಮ ಫೋಟೋಗಳೇ ಬರುವಂತೆ ನೋಡಿಕೊಂಡದ್ದು!" - ಇದು ಗುಂಡೂರಾವ್ ಆಡಳಿತ ಕುರಿತು ವಿರೋಧಿನಾಯಕರ ಟೀಕೆಯ ಸಾರಾಂಶ!

ಗುಂಡೂರಾವ್ ಸಂಪುಟಕ್ಕೆ ಒಂದು ವರ್ಷ ತುಂಬುವ ಮೊದಲೇ "ಚಿರಂತನ ಭಿನ್ನಮತೀಯ" – ಬಂಗಾರಪ್ಪ ಸರ್ಕಾರ ತ್ಯಜಿಸಿ ಹೊರಬಂದರು. ಕಾಂಗ್ರೆಸ್ಸಿನಿಂದಲೂ ದೂರ ಸರಿದು ತಮ್ಮದೇ ಆದ 'ಕ್ರಾಂತಿರಂಗ' ಎಂಬ ಹೊಸಪಕ್ಷ ಕಟ್ಟಿಕೊಂಡರು. ಇತ್ತ ಅರಸು ಪಾಳೆಯ ತ್ಯಜಿಸಿ ಗುಂಡೂರಾಯರಿಗೆ ಬೆಂಬಲ ಕೊಟ್ಟಿದ್ದ ಶಾಸಕರಿಗೂ ಈ ಮೊದಲೇ ಇಂದಿರಾ ಪಕ್ಷದಲ್ಲಿದ್ದ ಶಾಸಕರಿಗೂ ಒಳಗೊಳಗೇ ತಿಕ್ಕಾಟ ಇದ್ದೇ ಇತ್ತು. "ನಿಷ್ಠಾವಂತರು" – "ಪಕ್ಷಾಂತರಿಗಳು" ಎಂಬ ಜಗಳ ಈಗಿನಂತೆಯೇ ಆಗಲೂ ನಿರಂತರವಾಗಿ ಸಾಗಿಯೇ ಇತ್ತು. ಇದೇ ಸಮಯಕ್ಕೆ ಸಚಿವರುಗಳಾಗಿದ್ದ ಸಿ.ಎಂ.ಇಬ್ರಾಹಿಂ, ರೇಣುಕಾ ರಾಜೇಂದ್ರನ್ ಹಗರಣಗಳು ಪ್ರತಿಪಕ್ಷದ ಪ್ರಭಾವಿ ನಾಯಕರಾಗಿದ್ದ ಎ.ಕೆ.ಸುಬ್ಬಯ್ಯನವರಿಂದ ಬಹಿರಂಗಗೊಂಡವು.

ಇದರ ಜೊತೆಗೆ ಗುಂಡೂರಾಯರ ಹಗರಣಗಳು, ಎಫ್.ಎಂ.ಖಾನರ ಸ್ವೇಚ್ಛಾಚಾರ ಪ್ರಸಂಗಗಳೂ ಹೆಚ್ಚಾದವು. "ಚಾಕು-ಚೂರಿ ಸಂಸ್ಕೃತಿ ಹಬ್ಬಿದೆ; ಪೋಲೀಸರ ನೈತಿಕ ಸ್ಥೈರ್ಯ ಕುಗ್ಗಿದೆ; ರೈತರ ಮೇಲೆ ದಬ್ಬಾಳಿಕೆ ನಡೆದಿದೆ – ಗೋಳೀಬಾರ್ ಆಗಿದೆ." ಎಂಬ ಟೀಕೆಗಳು ಎದುರಾದವು. ಪತ್ರಿಕೆಗಳು, ಪತ್ರಕರ್ತರ ಮೇಲೆ ಗುಂಡೂರಾಯರ ಅಟಾಟೋಪ ಹೆಚ್ಚಾಗಿ, "ಪತ್ರಕರ್ತರನ್ನು ಅರಬ್ಬೀ ಸಮುದ್ರಕ್ಕೆ ಎಸೆಯಬೇಕೆಂದು" ಕೂಗಾಡಿದರು. ಪತ್ರಿಕೆಗಳನ್ನು ಎದುರು ಹಾಕಿಕೊಳ್ಳಲು 'ನೆಪೋಲಿಯನ್'ನಂಥ ಮಹಾಯೋಧನೇ ಹಿಂಜರಿಯುತ್ತಿದ್ದ. ಆದರೆ, ಗುಂಡೂರಾವ್ ತಾನು ನೆಪೋಲಿಯನ್‌ಗಿಂತ ದೊಡ್ಡವನೆಂದು ಭಾವಿಸಿದ್ದಿರಬೇಕು. ಗುಂಡೂರಾವ್ ಪತ್ರಕರ್ತರನ್ನು ಬೊಗಳುವ ನಾಯಿ ಎಂದು ಜರಿದರು. ಯುವ ಕಾಂಗ್ರೆಸ್ಸಿನ ಅವರ ಪುಂಡರ ಪಡೆ ಪತ್ರಿಕೆಗಳ ಕಚೇರಿಗಳಿಗೆ ಲಗ್ಗೆ ಇಟ್ಟು ಜಪ್ತಿ ಮಾಡಿತು. ನಂತರ, 'ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ' ಗುಂಡೂರಾವ್ ಸರ್ಕಾರಕ್ಕೆ ಛೀಮಾರಿ ಹಾಕಿದ್ದೂ ಆಯಿತು. ೧೯೮೨ರಲ್ಲಿ ದೇವರಾಜ ಅರಸ್ ತೀರಿಹೋದರು.

ಗುಂಡೂರಾಯರ ಆಡಳಿತ ಒಂದು ಸಾವಿರ ದಿನಕ್ಕಿಂತಲೂ ಸ್ವಲ್ಪ ಹೆಚ್ಚು ಕಾಲ ನಡೆಯಿತು. ಆಡಳಿತ ಭಾಷೆಯಾಗಿ ಕನ್ನಡ, ಗಡಿ ಸಮಸ್ಯೆ ಹಾಗೂ ಕನ್ನಡಿಗರಿಗೆ ಉದ್ಯೋಗಾವಕಾಶಗಳ ವಿಚಾರ ಕುರಿತು ಗುಂಡೂರಾಯರು ಖಚಿತ ನಿಲುವು ತಾಳಿದ್ದಂತೂ ನಿಜ. ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ದೊರಕಬೇಕೆಂಬ ಗೋಕಾಕ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಿದುದರ ಸಂಪೂರ್ಣ ಶ್ರೇಯಸ್ಸು ಇವರಿಗೆ ಸಲ್ಲಲೇ ಬೇಕು. 'ಶೀಘ್ರ ನಿರ್ಣಯ' ಅವರ ಮತ್ತೊಂದು ಗುಣವಿಶೇಷ! ಅವರೊಬ್ಬ ವರ್ಣರಂಜಿತ ವ್ಯಕ್ತಿ!

## ಕರ್ನಾಟಕದ ಮೊಟ್ಟಮೊದಲ 'ಕಾಂಗ್ರೆಸ್ಸೇತರ' ಮೈತ್ರಿ ಸರಕಾರ

ಜನವರಿ ೧೯೮೩ರಲ್ಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕರ್ನಾಟಕ ಏಕೀಕರಣದ ನಂತರ ಮೊಟ್ಟಮೊದಲ ಬಾರಿಗೆ ಕಾಂಗ್ರೆಸ್ ಪಕ್ಷ ಪರಾಭವಗೊಂಡಿತು. ಕೊಡಗಿನ ಕುಶಾಲನಗರದಲ್ಲಿ ಗುಂಡೂರಾಯರ ಹಳೆಯ ಸ್ಪರ್ಧಿ ಬಿ. ಎ. ಜೀವಿಜಯ ಗುಂಡೂರಾಯರ ವಿರುದ್ಧ ಜಯಗಳಿಸಿ 'ದೈತ್ಯ ಸಂಹಾರಕ' ಎಂದು ಸುದ್ದಿ ಮಾಡಿದರು.

ಹತ್ತು ವರ್ಷಗಳ ಬಳಿಕ ಈ ಸೋಲಿನ ಕುರಿತು ಗುಂಡೂರಾವ್‌ರನ್ನು ಪ್ರಶ್ನಿಸಿದಾಗ ತಮ್ಮ ವಿಶಿಷ್ಟ ಶೈಲಿಯಲ್ಲಿ, "ಇಟ್ ವಾಸ್ ಬ್ಲಂಡರ್ ಕಮಿಟೆಡ್ ಬೈ ಮೈ ವೋಟರ್ಸ್" ಎಂದು ಉತ್ತರಿಸಿದ ಅವರು "ತಮ್ಮ ಸೋಲು ತಮ್ಮ ಮತದಾರರು ಎಸಗಿದ ಪ್ರಮಾದ" ಎಂದು ವ್ಯಾಖ್ಯಾನಿಸಿದ್ದರು. ಎಂಥಾ ಮಾತು!

ಗುಂಡೂರಾವ್ ಸರಕಾರ ಅಧಿಕಾರ ಕಳೆದುಕೊಂಡ ನಂತರ ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ 'ಜನತಾಪಕ್ಷ – ಕ್ರಾಂತಿರಂಗ'ದ ಕಾಂಗ್ರೆಸ್ಸೇತರ 'ಮೈತ್ರಿ ಸರಕಾರ' ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂತು. ಹೆಗಡೆಯವರ ಹನ್ನೆರಡು ವರ್ಷಗಳ ರಾಜಕೀಯ ವನವಾಸ ಮುಗಿದಿತ್ತು. ಮುಖ್ಯಮಂತ್ರಿಯಾಗುವ ಮಹತ್ವಾಕಾಂಕ್ಷೆ ಹೊಂದಿದ್ದ – ಹೆಗಡೆಯವರ ಸರಕಾರದ ಪಾಲುದರ ಪಕ್ಷ – ಕ್ರಾಂತಿರಂಗದ ನಾಯಕ ಬಂಗಾರಪ್ಪನವರು ಹೆಗಡೆ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಕೂಡಲೇ ವ್ಯಕ್ತಪಡಿಸಿದ ಪ್ರತಿಕ್ರಿಯೆ ಇದು: 'ಒಬ್ಬ ಬ್ರಾಹ್ಮಣ ಹೋಗಿ ಮತ್ತೊಬ್ಬ ಬ್ರಾಹ್ಮಣ ಬಂದ!"

## ಸಮ್ಮೋಹಕ ವ್ಯಕ್ತಿತ್ವದ ಚಾಣಾಕ್ಷ ರಾಜಕಾರಣಿ : ರಾಮಕೃಷ್ಣ ಹೆಗಡೆ

ರಾಷ್ಟ್ರಮಟ್ಟಕ್ಕೇರಿದ ಕರ್ನಾಟಕದ ರಾಜಕಾರಣಿಗಳ ಪೈಕಿ ರಾಮಕೃಷ್ಣ ಹೆಗಡೆಯವರೂ ಒಬ್ಬರು. ಹೆಚ್ಚು ಓದಿದ ಸೂಕ್ಷ್ಮಮತಿಯಾದ ಗುಣಗ್ರಾಹಿ ನಾಯಕ ಅವರಾಗಿದ್ದರು. ರಾಜ್ಯದ ಸಮಗ್ರ ಅಭಿವೃದ್ಧಿಯ ದೃಷ್ಟಿಯನ್ನಿಟ್ಟುಕೊಂಡು ಆಡಳಿತ ನಡೆಸಿದ ಅವರು ಒಳ್ಳೆಯ ಸಂಸದೀಯ ಪಟು ಆಗಿದ್ದರು. ಹೆಗಡೆಯವರು ನಿಜಲಿಂಗಪ್ಪನವರ ಕೈಯಲ್ಲಿನ 'ಸುದರ್ಶನಚಕ್ರ' ಎಂದು ಬಣ್ಣಿಸಿದವರಿದ್ದರು. ಸಿದ್ದಾಪುರದ ದೊಡ್ಡಮನೆಯ ಅವರ ಹಿನ್ನೆಲೆ ದೊಡ್ಡದು. ಮೌಲ್ಯಾಧಾರಿತ ರಾಜಕಾರಣ ಮಾಡುವ ಬಯಕೆ ಅವರದಾಗಿತ್ತು.

೧೯೭೧ರಲ್ಲಿ ಲೋಕಸಭೆಗೆ ಮಧ್ಯಾವಧಿ ಚುನಾವಣೆ ನಡೆದಾಗ ಇಂದಿರಾ ಕಾಂಗ್ರೆಸ್ ಜಯಭೇರಿ ಬಾರಿಸಿತು. ೧೯೬೯ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲ ಹಾಗೂ ಅವರ ಸಂಪುಟದಲ್ಲಿದ್ದ ಹೆಗಡೆ ನಿಜಲಿಂಗಪ್ಪನವರ ಸಂಸ್ಥಾ ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದರು. ಆದರೆ 'ಗೆದ್ದ ಎತ್ತಿನ ಬಾಲ' ಹಿಡಿಯುವ ತವಕದಲ್ಲಿದ್ದ ಇವರ ಹಿಂಬಾಲಕರು – ಆಳುವ ಪಕ್ಷದ ಸಂಸ್ಥಾಕಾಂಗ್ರೆಸ್ ಶಾಸಕರು – ಇಂದಿರಾಗೆ ಜೈಕಾರ ಹಾಕುತ್ತ ನಿಷ್ಠೆ ಬದಲಿಸಿ ಪಕ್ಷಾಂತರ ಮಾಡಿದರು. ವೀರೇಂದ್ರ ಪಾಟೀಲ ರಾಜೀನಾಮೆ ಕೊಟ್ಟರು. ಹೆಗಡೆ ನೇಪಥ್ಯಕ್ಕೆ ಸರಿದರು. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಆರಂಭವಾಗಿ ರಾಜ್ಯಪಾಲ ಧರ್ಮವೀರ ಒಂದು ವರ್ಷ ಆಡಳಿತ ನಡೆಸಿದರು.

೧೯೭೧ರಲ್ಲಿ ಸಂಸ್ಥಾಕಾಂಗ್ರೆಸ್, ಜನಸಂಘ, ಸ್ವತಂತ್ರ ಪಕ್ಷಗಳ ಒಕ್ಕೂಟ ಕೇಂದ್ರದಲ್ಲಿ ವಿಘಟನೆಗೊಂಡನಂತರ, ೧೯೭೨ರಲ್ಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಬಹುಮತಗಳಿಸಿ ದೇವರಾಜ ಅರಸ ಮುಖ್ಯಮಂತ್ರಿಯಾದರು. ಸಂಸ್ಥಾಕಾಂಗ್ರೆಸ್ ಪಕ್ಷಕ್ಕೆ ಪ್ರತಿಪಕ್ಷವಾಗಿ 'ಮಾನ್ಯತೆ' ದೊರಕುವ ಮಟ್ಟಿಗೆ ಮಾತ್ರ ವಿಧಾನಸಭೆಯಲ್ಲಿ ಸ್ಥಾನಗಳು ದೊರೆತಿದ್ದವು. ಆದರೂ ಹೆಗಡೆಯವರು ತಮ್ಮ ಪಕ್ಷದ ಸಂಖ್ಯಾಬಲವನ್ನು ಮೀರಿ ಮತ ಪಡೆದು ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಗೊಂಡರು. ಅಲ್ಲಿ ತಮ್ಮ ಕಾರ್ಯವೈಖರಿ ಮತ್ತು ಮೊನಚು ಮಾತುಗಳಿಂದ ಬೇಗನೇ ಹೆಸರು ಮಾಡಿ ಸರ್ವರ ಪ್ರಶಂಸೆಗೆ ಪಾತ್ರರಾದರು.

ಎರಡು – ಮೂರು ವರ್ಷ ಕಳೆಯುವಷ್ಟರಲ್ಲಿ 'ಪಾಟೀಲ – ಹೆಗಡೆ – ದೇವೇಗೌಡರ' ತ್ರಿಕೋಣ ನಾಯಕತ್ವ ಪ್ರತಿಪಕ್ಷದ ಬೇರು ಗಟ್ಟಿಗೊಳಿಸಿತು. ೧೯೭೫ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಯಿತು. ಸಮಗ್ರ ಕ್ರಾಂತಿಯ ನೇತಾರ ಜಯಪ್ರಕಾಶ ನಾರಾಯಣರಾದಿಯಾಗಿ ದೇಶಾದ್ಯಂತ ಹಲವಾರು ಮುಖಂಡರ ಬಂಧನವಾಗಿ ಇಡೀ ರಾಷ್ಟ್ರವೇ ಒಂದು ಕಾರಾಗೃಹ ವಾದಂತಾಯಿತು. ಹೆಗಡೆ – ದೇವೇಗೌಡರೂ ಬಂಧನಕ್ಕೊಳಗಾದರು.

೧೯೭೭ರಲ್ಲಿ ತುರ್ತು ಪರಿಸ್ಥಿತಿ ರದ್ದಾದ ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾರವಾರ ಕ್ಷೇತ್ರದಿಂದ ಸ್ಪರ್ಧಿಸಿದ ಹೆಗಡೆ ಸೋಲುಣ್ಣಬೇಕಾಯಿತು. ೧೯೭೮ರಲ್ಲಿ ರಾಜ್ಯಸಭೆಗೆ ಚುನಾಯಿತರಾದ ಹೆಗಡೆ ಕೇಂದ್ರದಲ್ಲಿನ ಆಡಳಿತ ಜನತಾಪಕ್ಷದ ಪ್ರಧಾನಕಾರ್ಯದರ್ಶಿಯಾಗಿ ನೇಮಕಗೊಂಡರು.

## ಜನತಾಪಕ್ಷದಲ್ಲಿ ಒಡಕು – ಅರಸ್ ಉಚ್ಚಾಟನೆ
## ಅಸೆಂಬ್ಲಿ ಚುನಾವಣೆ – ಕಾಂಗ್ರೆಸ್ಸೇತರ ಸರ್ಕಾರ

೧೯೭೯ರಲ್ಲಿ ಜನತಾಪಕ್ಷದಲ್ಲಿ ಒಡಕುಂಟಾಗಿ ಕೇಂದ್ರದ ಜನತಾಪಕ್ಷದ ಸರಕಾರ ಪತನವಾಯಿತು. ೧೯೮೦ರಲ್ಲಿ ಇಂದಿರಾ ಕಾಂಗ್ರೆಸ್ಸಿನಿಂದ ಉಚ್ಚಾಟಿತರಾದ ದೇವರಾಜ ಅರಸ್ ಸ್ಥಾನದಲ್ಲಿ ಗುಂಡೂರಾವ್ ಮುಖ್ಯಮಂತ್ರಿಯಾದರು. ಹೆಗಡೆಯವರು ರಾಜ್ಯ ಮಟ್ಟದಲ್ಲಿ ಗುಂಡೂರಾಯರ ಸರಕಾರದ ವಿರುದ್ಧ ಪರ್ಯಾಯ ಸಂಘಟನೆಯ ಸಿದ್ಧತೆಯಲ್ಲಿ ತೊಡಗಿದರು.

೧೯೮೩ರಲ್ಲಿ ಅಸೆಂಬ್ಲಿ ಚುನಾವಣೆಗಳು ನಡೆದವು. ಈ ಚುನಾವಣೆ ಕಾಂಗ್ರೆಸ್ ಪಾಲಿಗೆ 'ವಾಟರ್ಲೂ' ಆಗಿ ಪರಿಣಮಿಸಿ, ಕಾಂಗ್ರೆಸ್ ಮೊಟ್ಟಮೊದಲ ಬಾರಿಗೆ ಬಹುಮತ ಕಳೆದುಕೊಂಡಿತು. ಜನತಾಪಕ್ಷ – ಕ್ರಾಂತಿರಂಗ – ಬಿಜೆಪಿ ಹಾಗೂ ಹತ್ತಾರು ಪಕ್ಷೇತರರ ಬೆಂಬಲದಿಂದ ರಾಮಕೃಷ್ಣ ಹೆಗಡೆಯವರು ಮೊಟ್ಟಮೊದಲ ಕಾಂಗ್ರೆಸ್ಸೇತರ ಸಮ್ಮಿಶ್ರಸರಕಾರದ ಮುಖ್ಯಮಂತ್ರಿಯಾಗಿ ಒಮ್ಮತದಿಂದ ಆಯ್ಕೆಯಾದರು. ಒಂದು ಕಡೆ ಸಾಕಷ್ಟು ಸ್ವಂತ ಬಲವಿಲ್ಲದ ಅತಂತ್ರಸ್ಥಿತಿ – ಮತ್ತೊಂದೆಡೆ ಅಧಿಕಾರ ಕಳೆದುಕೊಂಡು ಭುಸುಗುಟ್ಟುವ ಕಾಂಗ್ರೆಸ್ ಪಕ್ಷ. ಸಮ್ಮಿಶ್ರ ಸರಕಾರವನ್ನು ಸಂಭಾಳಿಸಿಕೊಂಡು ಹೋಗುವುದು ಮಿಣಿಯ ಮೇಲಿನ ನಡಿಗೆಯಂತೆ ಬಲುಕಷ್ಟದ ಕೆಲಸ. ಯಥಾಪ್ರಕಾರ ಬಂಗಾರಪ್ಪ ಹೆಗಡೆ ಸರಕಾರಕ್ಕೆ ಬೆಂಬಲ ಕೊಟ್ಟಿದ್ದ ತಮ್ಮ ಕ್ರಾಂತಿರಂಗ ತ್ಯಜಿಸಿ ಕಾಂಗ್ರೆಸ್ ಸೇರಿದರು. ಹೆಗಡೆ ಕೊಡಮಾಡಿದ್ದ ಉಪಮುಖ್ಯಮಂತ್ರಿ ಸ್ಥಾನವೂ ಅವರಿಗೆ ಬೇಕಿರಲಿಲ್ಲ. ಆದರೆ ಮುಖ್ಯಮಂತ್ರಿಯೇ ಆಗಬೇಕೆನ್ನುವ ಛಲ ಅವರದು. 'ನೀರಿನ ಸಾಬ' ರೆಂದೇ ಹೆಸರಾಗಿದ್ದ 'ಕ್ರಾಂತಿರಂಗದ' ಅಬ್ದುಲ್‌ನಜೀರ್ ಸಾಬ್ ಸಮಾಜವಾದಿ ಹಿನ್ನೆಲೆಯುಳ್ಳವರಾಗಿದ್ದರು. ಅವರು ಹೆಗಡೆಯವರ ಜೊತೆಗೇ ಉಳಿದು ಅವರ 'ಬಲಗೈ' ಎನಿಸಿದರು.

೧೯೮೫ರಲ್ಲಿ ವಿಧಾನಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ತಮ್ಮ ಜನಪ್ರಿಯತೆಯನ್ನು ಒರೆಗೆ ಹಚ್ಚಿ ಸೆಣಸಿದ ಹೆಗಡೆಯವರು ಜನತಾಪಕ್ಷಕ್ಕೆ ಸ್ಪಷ್ಟ ಬಹುಮತ ತಂದು ಕೊಟ್ಟು, ಸ್ವಂತ ಬಲದ ಮೇಲೆ ಮತ್ತೆ ಮುಖ್ಯಮಂತ್ರಿಯಾದರು. ಅವರ ಐದು ವರ್ಷಗಳ ಅಧಿಕಾರಾವಧಿಯ ಪ್ರಮುಖ ಸಾಧನೆಗಳ ಪೈಕಿ – ಲೋಕಾಯುಕ್ತ ಸಂಸ್ಥೆಯ ರಚನೆ; ಅಧಿಕಾರದ ವಿಕೇಂದ್ರೀಕರಣದ ಮೂಲಕ ಜನರ ಕೈಗೆ ಅಧಿಕಾರ; ಪಕ್ಷಾಂತರದ ವಿರುದ್ಧ ಕ್ರಮ; ಹಿಂದೆಂದೋ ಒಮ್ಮೆ ನಡೆದ ಸ್ಥಳೀಯ ಸಂಸ್ಥೆಗಳಿಗೆ ಮತ್ತೆ ಚುನಾವಣೆ; ಕ್ಯಾಪಿಟೇಶನ್ ಶುಲ್ಕ ರದ್ದತಿ ಯತ್ನ; ಕೊಳವೆ ಬಾವಿನಿರ್ಮಾಣ; ಹಸಿರುಗೊಳಿಸುವ ಕಾರ್ಯಕ್ರಮ; ಪರಿಸರ ಸಂರಕ್ಷಣೆಗೆ ಒತ್ತು; ಸಾಹಿತ್ಯದತ್ತ ಜನರ ಗಮನ ಹರಿಸುವ ಪ್ರಯತ್ನ – ಇವುಗಳನ್ನು ಹೆಸರಿಸಬಹುದು.

ರಾಮಕೃಷ್ಣ ಹೆಗಡೆಯವರು ಕೈಗೊಂಡ ಮತ್ತೊಂದು ಮಹತ್ವದ ನಿರ್ಣಯವೆಂದರೆ–ನಾಡೋಜ ಪಾಟೀಲ ಪುಟ್ಟಪ್ಪನವರನ್ನು ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿಯು ಅಧ್ಯಕ್ಷರನ್ನಾಗಿ ನೇಮಿಸಿದ್ದು. ಕನ್ನಡ, ಕನ್ನಡಿಗ, ಕರ್ನಾಟಕದ ಹಿತರಕ್ಷಣೆಗಾಗಿ ಮೊದಲಿನಿಂದಲೂ ಹೋರಾಡುತ್ತಾ ಬಂದಿರುವ 'ಪಾಪು' ಅವರು ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿಯ ಅಧ್ಯಕ್ಷರಾಗಿ ಮಾಡಿದ ಕೆಲಸ ಕುರಿತು ಹೆಗಡೆಯವರು ವ್ಯಕ್ತಪಡಿಸಿದ ಪ್ರಶಂಸೆಯ ನುಡಿಗಳು ಇಂತಿವೆ;

"ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿಯು ಅಧ್ಯಕ್ಷರಾಗಿ 'ಪಾಪು' ಅವರು ಮಾಡಿದ ಕೆಲಸ ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುವುದು, ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಪ್ರಥಮ ಸ್ಥಾನ ನೀಡುವುದರ ಬಗೆಗೆ ಅವರು ಮಾಡಿದ ಹೋರಾಟವನ್ನು ಯಾರೊಬ್ಬರೂ ಮರೆಯಲು ಸಾಧ್ಯವಿಲ್ಲ. ನಾನು ಅವರು ಸಿಟ್ಟಿಗೇಳುವದನ್ನು ನೋಡಿದ್ದು, ಕೇವಲ ಕನ್ನಡ ನುಡಿ, ಕರ್ನಾಟಕದ ಗಡಿ ಈ ವಿಚಾರಗಳ ಚರ್ಚೆಯ ಕಾಲದಲ್ಲಿ ಮಾತ್ರ ............."

"ಕನ್ನಡದ ವಿಚಾರದಲ್ಲಿ ಅವರು ಬರೆದ ಪತ್ರಗಳಿಗೆ ಉತ್ತರ ಕೊಡದೇ ಇದ್ದ ಅನೇಕ ಮಂತ್ರಿಗಳು ಹಾಗು ಮುಖ್ಯಮಂತ್ರಿಗಳು ಪುಟ್ಟಪ್ಪನವರ ಖಾರವಾದ ಪ್ರತಿಕ್ರಿಯೆಗೆ ಒಳಗಾಗಿದ್ದಾರೆ. ಅವರಲ್ಲಿ ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಕೂಡ ಒಬ್ಬರು..........."

"ಇಂದು 'ಕರ್ನಾಟಕದ ಆತ್ಮ ಗೌರವ ಎಂದರೆ ಪಾಟೀಲ ಪುಟ್ಟಪ್ಪ–ಪಾಟೀಲ ಪುಟ್ಟಪ್ಪ ಅಂದರೆ ಕರ್ನಾಟಕದ ಆತ್ಮ ಗೌರವ'. ಇವರೆಡನ್ನು ಬೇರ್ಪಡಿಸಿ ಹೇಳುವುದು ಅಸಾಧ್ಯದ ಮಾತು".

ಪಾಟೀಲ ಪುಟ್ಟಪ್ಪನವರ ನಂತರ ಅನೇಕರು 'ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿ'ಯ ಅಧ್ಯಕ್ಷರಾಗಿ ಕುರ್ಚಿ ಅಲಂಕರಿಸಿದ್ದಾರೆ. ಆದರೆ ಅವರಾರೂ ತಮ್ಮ ಅಸ್ತಿತ್ವ ಹಾಗೂ ಗುರುತನ್ನು ತೋರಿಸಿಕೊಡುವ ಕೆಲಸ ಮಾಡಲಿಲ್ಲ. ಕಾವಲುಗಾರನೇ ಮಲಗಿ ನಿದ್ರಿಸುತ್ತಿದ್ದರೆ 'ಗಡಿ–ನುಡಿ' ರಕ್ಷಿಸುವವರಾರು?

ಹಾಗೆ ನೋಡಿದರೆ, ಕರ್ನಾಟಕದಲ್ಲಿ ಕನ್ನಡದ 'ರಕ್ಷಣೆ'ಗೆ ಕಾವಲು ಸಮಿತಿ ರಚಿಸಬೇಕಾದಂಥ ದುರ್ಗತಿ ಉಂಟಾಗಿರುವುದು ನಿಜಕ್ಕೂ ಚೋದ್ಯದ ಸಂಗತಿ!

## ಕುಟುಂಬ ರಾಜಕೀಯ ಮಾಡಲಿಲ್ಲ

'ಹೆಗಡೆಯವರು ತಮ್ಮ ಅನುಯಾಯಿಗಳ ಮುಖಂಡತ್ವ ಬೆಳೆಸಲಿಲ್ಲ – ಚಿವುಟಿ ಹಾಕಿದರು' ಎಂಬ ಟೀಕೆಗಳಿವೆ. ಆದರೆ ಹೆಗಡೆಯವರು ಕುಟುಂಬ ರಾಜಕೀಯ ಮಾಡಲಿಲ್ಲ. ಪಕ್ಷ ತಮ್ಮ ಆಸ್ತಿ ಎಂದು, ಸರ್ಕಾರ ತಮ್ಮ 'ಜಹಗೀರು' ಎಂದು ಬಗೆಯಲಿಲ್ಲ. ಸಮಯ ಸಾಧಕ ರಾಜಕಾರಣಿ ಅವರಾಗಿರಲಿಲ್ಲ. ಅಧಿಕಾರದಾಸೆಯಿಂದ ಪಕ್ಷಾಂತರ ಮಾಡದೇ ತಾವು ನಂಬಿದ ತತ್ವಗಳಿಗೆ ದೃಢವಾಗಿ ಅಂಟಿಕೊಂಡರು. ತಾವು ಏರಿದ ಏಣಿಯನ್ನು ದೂಡಿ ದೂರ ಮಾಡಲಿಲ್ಲ. ಅವರು ಸಮ್ಮೋಹಕ ವ್ಯಕ್ತಿತ್ವದ ಸಮೂಹ ನಾಯಕರಾಗಿದ್ದರು. ಉತ್ತರ ಕರ್ನಾಟಕದ ಜನ ಅವರನ್ನು ತಮ್ಮ ನಂಬಿಗೆಯ ನಾಯಕನೆಂದು ತಿಳಿದಿದ್ದರು.

## ಇಳಿಮುಖಗೊಂಡ ಹೆಗಡೆ ಪ್ರಭಾವ

ಹೆಗಡೆಯವರ ಮುಖ್ಯಮಂತ್ರಿತ್ವದ ಎರಡನೆಯ ಅವಧಿಯಲ್ಲಿ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಚಂದ್ರಶೇಖರ ಹಾಗೂ ರಾಜ್ಯದ ಪ್ರಮುಖ ಒಕ್ಕಲಿಗ ನಾಯಕ ದೇವೇಗೌಡ ಇವರಿಗೆ ವಿರುದ್ಧವಾದರು. ಇದೇ ವೇಳೆಗೆ ಸಾರಾಯಿ ಬಾಟ್ಲಿಂಗ್ ಗುತ್ತಿಗೆ ವಿಚಾರದಲ್ಲಿ ಹೈಕೋರ್ಟ್ ತೀರ್ಪು ಬಂದದ್ದೇ ತಡ – 'ಮೌಲ್ಯಾಧಾರಿತ ರಾಜಕೀಯ'ದ ಮಾತನಾಡುತ್ತಿದ್ದ ಹೆಗಡೆಯವರು ಮರುವಿಚಾರ ಮಾಡದೇ ಯಾರಿಗೂ ಹೇಳದೇ ಕೇಳದೇ ರಾಜೀನಾಮೆ ಕೊಟ್ಟುಬಿಟ್ಟರು ! ಆಘಾತ, ಆವೇಶಕ್ಕೊಳಗಾದ ಇವರ ಬೆಂಬಲಿಗ ಶಾಸಕರು ಹೆಗಡೆಯವರನ್ನು ಅಡ್ಡಗಟ್ಟಿ, ಅವರೆದುರು 'ಧರಣಿ' ಹೂಡಿ ರಾಜೀನಾಮೆ ವಾಪಸ್ ಪಡೆಯುವಂತೆ ಅಂಗಲಾಚಿ ಬೇಡಿಕೊಂಡರು. ಯಲಬುರ್ಗಾ ಕ್ಷೇತ್ರದ ಒಬ್ಬ ಶಾಸಕರಂತೂ ಹೆಗಡೆಯವರ ಮೆಟ್ಟನ್ನೇ ಕಿತ್ತುಕೊಂಡು ತನ್ನ ಶರ್ಟಿನ ಕಿಸೆಯಲ್ಲಿಟ್ಟುಕೊಂಡು ಅವರು ರಾಜೀನಾಮೆ ನೀಡದಂತೆ ಅಡ್ಡಿಪಡಿಸಿದರು. ಇಂಥ ಅಭೂತಪೂರ್ವ ಒತ್ತಾಯಕ್ಕೆ ಮಣಿದ ಹೆಗಡೆ ರಾಜೀನಾಮೆ ವಾಪಸ್ ಪಡೆದರು.

ಆದರೆ, ದಿನಗಳೆದಂತೆ ಹೆಗಡೆಯವರ ಪ್ರಭಾವ ಇಳಿಮುಖ ವಾಗತೊಡಗಿತು. ಅಜಿತಸಿಂಗ್ – ದೇವೇಗೌಡರ ನಡುವಿನ ಟೆಲಿಫೋನ್ ಸಂಭಾಷಣೆಯ ಕದ್ದಾಲಿಕೆಯ ನೇರ ಆರೋಪವನ್ನು ಇವರು

ಎದುರಿಸಬೇಕಾಯಿತು. ಹೆಗಡೆಯವರು ಪ್ರತಿಪಾದಿಸುತ್ತಿದ್ದ 'ಮೌಲ್ಯಾಧಾರಿತ' ರಾಜಕೀಯಕ್ಕೆ ಸಿಡಿಲು ಬಡಿದಂತಾಯಿತು. ನೊಂದ ಹೆಗಡೆ ಅಧಿಕಾರದಿಂದ ಕೆಳಗಿಳಿದರು.

ಅಲ್ಪಕಾಲಾವಧಿಗೆ ರಾಷ್ಟ್ರೀಯ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದು ನಂತರ ಕೇಂದ್ರದಲ್ಲಿ ವಾಣಿಜ್ಯ ಮಂತ್ರಿಯಾಗಿದ್ದ ಹೆಗಡೆ ದೇಶದ ಪ್ರಧಾನಿಯಾಗುವ ಕನಸು ಕಂಡಿದ್ದರು. ಆದರೆ ಅರ್ಹತೆಯ ಜೊತೆಗೆ ಅದೃಷ್ಟವೂ ಇರಬೇಕಲ್ಲ! ಅದೃಷ್ಟವಂತ ದೇವೇಗೌಡರು ಅನಿರೀಕ್ಷಿತವಾಗಿ ದೇಶದ ಪ್ರಧಾನಿಯಾದಾಗ ಅಸಹನೆಗೊಂಡ ಹೆಗಡೆ ದೇವೇಗೌಡರನ್ನು ಅಭಿನಂದಿಸುವ ಬದಲು ಅವಹೇಳನ ಮಾಡಿದರು. ಮುಂದೊಂದು ದಿನ ದೇವೇಗೌಡರು ಹೆಗಡೆಯವರನ್ನು ಜನತಾಪಕ್ಷದಿಂದ ಉಚ್ಚಾಟಿಸಿ ಸೇಡು ತೀರಿಸಿಕೊಂಡರು. ಹೆಗಡೆಯವರ ರಾಜಕೀಯ ಭವಿಷ್ಯಕ್ಕೆ 'ಗ್ರಹಣ' ಹಿಡಿಯಿತು!

## 'ರಾಯಿಸ್ಟ್' ಬೊಮ್ಮಾಯಿಯವರ ಅಲ್ಪಾಯುಷಿ ಸರಕಾರ

೧೯೮೮ರ ಆಗಸ್ಟ್ ಹೊತ್ತಿಗೆ ರಾಹುಗ್ರಸ್ತವಾಗಿದ್ದ ರಾಮಕೃಷ್ಣ ಹೆಗಡೆಯವರ ಸರ್ಕಾರ ಅನೇಕ ಆಪಾದನೆಗಳ ಹೊರೆ ಹೊತ್ತು ನಿರ್ಗಮಿಸಿದ ನಂತರ ಅವರ ಸಂಪುಟದ ಹಿರಿಯ ಸಹೋದ್ಯೋಗಿ – 'ರಾಯಿಸ್ಟ್' – ಸೋಮಪ್ಪ ರಾಯಪ್ಪ ಬೊಮ್ಮಾಯಿ ಮುಖ್ಯಮಂತ್ರಿಯಾದರು. ಆದರೆ, ಪಕ್ಷದೊಳಗಿನ ಒಳಜಗಳದಿಂದಾಗಿ ಬಾಲಗ್ರಹಪೀಡಿತವಾಗಿದ್ದ ಬೊಮ್ಮಾಯಿ ಸರಕಾರ ಬಹುದಿನ ಮುಂದುವರಿಯುವುದು ದುಸ್ಸಾಧ್ಯವಾಗಿತ್ತು. ಹೆಗಡೆ – ದೇವೇಗೌಡರ ನಡುವಿನ ವ್ಯತ್ಯಾಸ ಹೆಚ್ಚುತ್ತ ಹೋಗಿ ಮನಸ್ತಾಪ ಬೆಳೆದು ಶಾಸಕಾಂಗ ಪಕ್ಷ ವಿಭಜನೆಗೊಂಡಿತು. ಜನತಾಪಕ್ಷ – ಇಬ್ಭಾಗಗೊಂಡು 'ಜನತಾದಳ' ಜನ್ಮ ತಾಳಿತು. ವ್ಹಿ. ಪಿ. ಸಿಂಗ್ ಕೇಂದ್ರ ಜನತಾದಳದ ಅಧ್ಯಕ್ಷರಾಗಿ ಆಯ್ಕೆಯಾದರು.

ದೇವೇಗೌಡ ಹಾಗೂ ಅವರ ಕೆಲವು ಸಂಗಾತಿಗಳು ಹಳೇ ಜನತಾಪಕ್ಷದಲ್ಲೇ ಉಳಿದರು. ಬೊಮ್ಮಾಯಿಯವರನ್ನು ಬೆಂಬಲಿಸುವ ಶಾಸಕರ ಸಂಖ್ಯೆ ಹೆಚ್ಚಾಗಲೇ ಇಲ್ಲ. ಇದೇ ವೇಳೆಗೆ ದೇವೇಗೌಡರು ಬೊಮ್ಮಾಯಿ ಸರಕಾರದಿಂದ ತಮ್ಮ ಬೆಂಬಲವನ್ನು ಹಿಂತೆಗೆದುಕೊಂಡರು. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಕೇಂದ್ರದ ಕಾಂಗ್ರೆಸ್ ಸರಕಾರದ ಇಚ್ಛೆ ಪೂರೈಸಲು ರಾಜ್ಯಪಾಲ ವೆಂಕಟಸುಬ್ಬಯ್ಯನವರು ಸಿದ್ಧರಿದ್ದರು. ತಮ್ಮ ಬಹುಮತವನ್ನು ವಿಧಾನ ಸಭೆಯಲ್ಲಿ ಸಾಬೀತು ಪಡಿಸಲು ಮುಖ್ಯಮಂತ್ರಿ ಬೊಮ್ಮಾಯಿಯವರಿಗೆ ಅವಕಾಶವನ್ನೇ ಕೊಡದೆ ರಾಜ್ಯಪಾಲರು ಸರ್ಕಾರವನ್ನು ವಜಾ ಮಾಡಿದರು. ಈ ಕ್ರಮವನ್ನು ಬೊಮ್ಮಾಯಿಯವರು ಸುಪ್ರೀಂಕೋರ್ಟಿನಲ್ಲಿ ಪ್ರಶ್ನಿಸಿದರು.

ತೀರ್ಪೇನೊ ಬೊಮ್ಮಾಯಿಯವರ ಪರವಾಗಿ ಬಂತು. ಆದರೆ, ಬಹಳ ತಡವಾಗಿ ಬಂತು. ಈ ತೀರ್ಪಿನಲ್ಲಿ ರಾಜ್ಯಪಾಲರ ಕ್ರಮವನ್ನು ಖಂಡಿಸಲಾಗಿತ್ತು! ಈ 'ತೀರ್ಪು' "ಬೊಮ್ಮಾಯಿ ಪ್ರಕರಣ"ವೆಂದು ಪ್ರಸಿದ್ಧಿ ಪಡೆದಿದೆ.

## ಬೊಮ್ಮಾಯಿಯವರ ಪೂರ್ವಾಪರ

ನ್ಯಾಯವಾದಿಯಾಗಿ ತಮ್ಮ ಜೀವನ ಆರಂಭಿಸಿದ ಬೊಮ್ಮಾಯಿಯವರು ವಕೀಲಿ ವೃತ್ತಿಯಲ್ಲಿ ಸಾಕಷ್ಟು ಹೆಸರು ಮಾಡಿದ ನಂತರ ೧೯೬೭ರಲ್ಲಿ ಲೋಕಸೇವಕ ಸಂಘದ ವತಿಯಿಂದ ಕುಂದಗೋಳ ಕ್ಷೇತ್ರದಿಂದ ಸ್ಪರ್ಧಿಸಿ ಜಯ ಗಳಿಸಿದರು. ಎಂ. ಎನ್. ರಾಯ್‌ರ 'ರ್‍ಯಾಡಿಕಲ್ ಹ್ಯೂಮನಿಸ್ಟ್' - ನವಮಾನವತಾವಾದ - ಪಾರ್ಟಿಯತ್ತ ಮೊದಲಿನಿಂದಲೂ ಆಕರ್ಷಿತರಾಗಿದ್ದ ಬೊಮ್ಮಾಯಿಯವರು ದೀರ್ಘಕಾಲದ ವರೆಗೆ ಅದರ ಸದಸ್ಯರಾಗಿದ್ದುಕೊಂಡು ಸೇವೆ ಸಲ್ಲಿಸಿದ್ದರು. ಕುಂದಗೋಳ ಕ್ಷೇತ್ರದ ಜಯ ಅವರ ರಾಜಕೀಯ ಪ್ರವೇಶಕ್ಕೆ ನಾಂದಿಯಾಯಿತು. ೧೯೬೯ರಲ್ಲಿ ಕಾಂಗ್ರೆಸ್ ಸೇರಿದರು. ೧೯೭೨ರಲ್ಲಿ ಪಂಚಾಯತಿ ಮತಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಗೊಂಡರು. ೧೯೭೬-೭೭ ರ ಅವಧಿಯಲ್ಲಿ ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು. ೧೯೭೭ರಲ್ಲಿ 'ಜನತಾಪಕ್ಷ'ದ ಉದಯವಾದಾಗ ಆ ಪಕ್ಷದ ಕರ್ನಾಟಕ ಘಟಕದ ಅಧ್ಯಕ್ಷರಾದರು. ೧೯೭೮ರಲ್ಲಿ ವಿಧಾನ ಸಭೆಗೆ ಚುನಾಯಿತರಾಗಿ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದರು.

೧೯೮೩-೮೮ರ ಅವಧಿಯಲ್ಲಿ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ಹಣಕಾಸು, ಕೃಷಿ, ಕಂದಾಯ ಸಚಿವರಾಗಿ ಯಶಸ್ಸನ್ನು ಸಾಧಿಸಿದರು.

## ಬೊಮ್ಮಾಯಿಯವರ ಉಚ್ಛ್ರಾಯ ಕಾಲ

ಬೊಮ್ಮಾಯಿಯವರು ಕರ್ನಾಟಕದಲ್ಲಿ ಮುಖ್ಯಮಂತ್ರಿತ್ವವನ್ನು ಕಳೆದುಕೊಂಡರೇನೋ ನಿಜ. ಆದರೆ, ಅವರ ಭಾಗ್ಯದ ಬಾಗಿಲು ತೆರೆದಿತ್ತು. ಕೇಂದ್ರದಲ್ಲಿ ನಡೆದ ತೀವ್ರತರ ರಾಜಕೀಯ ಸ್ಥಿತ್ಯಂತರಗಳ ಪರಿಣಾಮವಾಗಿ ಜನತಾದಳದ ಅಧ್ಯಕ್ಷರಾಗಿದ್ದ ವ್ಹಿ.ಪಿ.ಸಿಂಗ್‌ರು ಪ್ರಧಾನಿ ಪಟ್ಟಕ್ಕೇರಿದರು. ಆಗ

ರಾಷ್ಟ್ರೀಯ ಜನತಾದಳದ ಉಪಾಧ್ಯಕ್ಷರಾಗಿದ್ದ ಬೊಮ್ಮಾಯಿಯವರು ಅದರ ರಾಷ್ಟ್ರೀಯ ಅಧ್ಯಕ್ಷರಾಗಿ ನೇಮಕಗೊಂಡರು.

೧೯೮೯ರ ವಿಧಾನಸಭಾ ಚುನಾವಣೆಯಲ್ಲಿ ಬೊಮ್ಮಾಯಿಯವರ 'ಜನತಾದಳ' ಹಾಗೂ ದೇವೇಗೌಡರ 'ಜನತಾಪಕ್ಷ' ಶೋಚನೀಯ ಸೋಲು ಕಂಡವು. ಸ್ವತಃ ಬೊಮ್ಮಾಯಿಯವರು ಮೊದಲ ಸಲ ಸೋಲಿನ ಕಹಿ ಉಂಡರು.

ಪರಾಭವದಿಂದ ಪಾಠ ಕಲಿತ ಈ ನಾಯಕದ್ವಯರು ಒಂದಾಗಲು ನಿರ್ಧರಿಸಿದರು. ಸಮಾಜವಾದಿ ಜನತಾಪಕ್ಷದ ದೇವೇಗೌಡ ಹಾಗೂ ಜನತಾದಳದ ಬೊಮ್ಮಾಯಿ ಒಟ್ಟಾಗಿ 'ಸಂಘಟಿತ ಜನತಾದಳ' ಹುಟ್ಟುಹಾಕಿದರು. ಈ ಹೊಸ ಸಂಘಟನೆಯೊಂದಿಗೆ ರಾಷ್ಟ್ರಮಟ್ಟದ ಅಜಿತ್‌ಸಿಂಗ್ ನೇತೃತ್ವದ ಜನತಾದಳ ಸಹ ವಿಧ್ಯುಕ್ತವಾಗಿ ವಿಲೀನವಾಯ್ತು. ಬೊಮ್ಮಾಯಿಯವರೇ ಈ ಹೊಸಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಗೊಂಡರು. ದೇವೇಗೌಡರು ರಾಜ್ಯಘಟಕದ ಅಧ್ಯಕ್ಷರಾಗಿ ಆಯ್ಕೆಯಾದರು.

ಕೇಂದ್ರಮಟ್ಟದ ರಾಜಕೀಯದಲ್ಲಿ ವ್ಯಸ್ತರಾಗಿದ್ದ ಬೊಮ್ಮಾಯಿಯವರು ಓರಿಸಾ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಲು ಅಲ್ಲಿನ ಸರಕಾರ ಅನುವು ಮಾಡಿಕೊಟ್ಟಿತು. ೧೯೯೬ರಲ್ಲಿ ದೇವೇಗೌಡರು ಪ್ರಧಾನಿಯಾದರು. ಬೊಮ್ಮಾಯಿಯವರು ಅವರ ಸಂಪುಟ ಸೇರಿ 'ಮಾನವ ಸಂಪನ್ಮೂಲ ಅಭಿವೃದ್ಧಿ' ಇಲಾಖೆಯ ಮಂತ್ರಿಯಾದರು.

## ೧೯೮೯-೯೪ ಐದು ವರ್ಷದಲ್ಲಿ ಮೂವರು ಮುಖ್ಯಮಂತ್ರಿಗಳು ! ವೀರೇಂದ್ರ ಪಾಟೀಲರ 'ಸೆಕೆಂಡ್ ಇನಿಂಗ್ಸ್'!

ಆರು ವರ್ಷಗಳ ಕಾಲ ಅಧಿಕಾರ ಕಳೆದುಕೊಂಡು ಚಡಪಡಿಸುತ್ತಿದ್ದ ಕಾಂಗ್ರೆಸ್ ಮರಳಿ ಅಧಿಕಾರ ಪಡೆಯಲು ಹಾತೊರೆಯುತ್ತಿತ್ತು. ಸಮರ್ಥ ನಾಯಕನೊಬ್ಬನ ಅಗತ್ಯ ಅದಕ್ಕಿತ್ತು. ಪಕ್ಷವನ್ನು ವಿಜಯದ ಹಾದಿಯಲ್ಲಿ ಕೊಂಡೊಯ್ಯಬಲ್ಲ ಸಮರ್ಥ ನಾಯಕನ 'ಹುಡುಕಾಟ'ದಲ್ಲಿದ್ದ 'ಹೈಕಮಾಂಡ್‌ಗೆ' ವೀರೇಂದ್ರ ಪಾಟೀಲರ ಮೇಲೆ ದೃಷ್ಟಿಬಿತ್ತು. ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ನಿಯುಕ್ತರಾದ ವೀರೇಂದ್ರ ಪಾಟೀಲರು ಸತ್ತಂತಿದ್ದ ಸಂಘಟನೆಗೆ

ಜೀವ ತುಂಬಿದರು. ರಾಜ್ಯಾದ್ಯಂತ ಬಿರುಸಿನ ಪ್ರವಾಸ – ಪ್ರಚಾರ ಕೈಗೊಂಡು ಮತದಾರರು ಮತ್ತೆ ಕಾಂಗ್ರೆಸ್ ಕಡೆಗೆ ಕಣ್ಣು ಹಾಯಿಸುವಂತೆ ಮಾಡಿದರು. ವೀರೇಂದ್ರರ 'ವಿಶ್ವಾಸಾರ್ಹತೆ' ಕೆಲಸ ಮಾಡಿತು. ೧೯೮೯ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಬಹುಮತ ಪಡೆಯಿತು. ಕಾಂಗ್ರೆಸ್ ಪಕ್ಷದ ಅದ್ಭುತ ವಿಜಯದ ರೂವಾರಿ ವೀರೇಂದ್ರ ಪಾಟೀಲರೇ ಮುಖ್ಯಮಂತ್ರಿತ್ವದ 'ಕಿರೀಟ' ಧರಿಸಿ ಮತ್ತೊಮ್ಮೆ ಕರ್ನಾಟಕದ ಮುಖ್ಯಮಂತ್ರಿಯಾದರು. ತಮ್ಮಲ್ಲಿ ವಿಶ್ವಾಸವಿಟ್ಟು ಪುನಃ ಅಧಿಕಾರ ದೊರಕಿಸಿಕೊಟ್ಟ ರಾಜ್ಯದ ಜನತೆಯ 'ಋಣ' ತೀರಿಸಲು ಅವರ ನಿರೀಕ್ಷೆಯ ಎತ್ತರಕ್ಕೆ ಏರಿ ಕೆಲಸ ಮಾಡುವ ದೃಢ ಸಂಕಲ್ಪದಿಂದ ವೀರೇಂದ್ರರ ಸಂಪುಟ ಆಡಳಿತವನ್ನು ಆರಂಭಿಸಿತು.

ಆದರೇನು? ವಿಧಿಯ ಅಣಕ. ೧೯೯೦ರಲ್ಲಿ ವೀರೇಂದ್ರ ಪಾಟೀಲರು ಅಲ್ಪ ಅನಾರೋಗ್ಯಕ್ಕೊಳಗಾದರು. ಆದರೆ ಕಾರ್ಯ ಮಾಡದಂಥ ಸ್ಥಿತಿಯೇನಿರಲಿಲ್ಲ. ಹಾಗೆ ನೋಡಿದರೆ, ವರ್ಷಾನುಗಟ್ಟಲೆ ಆಸ್ಪತ್ರೆಯ ಹಾಸುಗೆಯ ಮೇಲಿದ್ದುಕೊಂಡೇ ಆಡಳಿತ ನಡೆಸಿದ ಮಂತ್ರಿ, ಮುಖ್ಯಮಂತ್ರಿ, ಕೇಂದ್ರ ಮಂತ್ರಿಗಳಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಪುನಶ್ಚೇತನಗೊಳಿಸಿ ಅದನ್ನು ಅಧಿಕಾರಕ್ಕೆ ತಂದ ವೀರೇಂದ್ರ ಪಾಟೀಲರ 'ಅಲ್ಪ ಅನಾರೋಗ್ಯವನ್ನೇ' ನೆಪ ಮಾಡಿಕೊಂಡು ಅವರನ್ನು ಅಧಿಕಾರದಿಂದ 'ಕದಲಿಸುವ' ಹೊಂಚು ಹಾಕಿ ಕೂತಿದ್ದ ಕಾಂಗ್ರೆಸ್ ಅಧ್ಯಕ್ಷ ರಾಜೀವಗಾಂಧಿ 'ತಾಯಿಗೆ ತಕ್ಕ' ಮಗನಂತೆ ವರ್ತಿಸಿ, ವೀರೇಂದ್ರ ಪಾಟೀಲರು ಅತ್ಯಂತ ಅನಾದರಕರ ರೀತಿಯಲ್ಲಿ ಅಧಿಕಾರದಿಂದ ನಿರ್ಗಮಿಸುವಂತೆ ಮಾಡಿದರು. ಕೃತಘ್ನ ಕಾಂಗ್ರೆಸ್ ಅಸ್ವಸ್ಥರಾಗಿದ್ದ ತಮ್ಮ ಪಕ್ಷದ ಅಗ್ರಪಂಕ್ತಿಯ ನಾಯಕನೊಬ್ಬನಿಗೆ ಬೆಂಬಲ ಆಶ್ವಾಸನೆಕೊಟ್ಟು ಸಂತೈಸುವ ಬದಲು ಆಘಾತ ನೀಡಿ ಅಧಿಕಾರದಿಂದ ಕೆಳಗಿಳಿಸಿತು. ಗಾಯದ ಮೇಲೆ ಬರೆ ಕೊಡುವ ಕಾಂಗ್ರೆಸ್ ಸಂಸ್ಕೃತಿ ಇದು!

## 'ಬೋಗಿ'ಯಲ್ಲ, ಯಾವಾಗಲೂ 'ಎಂಜಿನ್' ಆಗಬಯಸುವ ಬಂಗಾರಪ್ಪ !

ಸಮಾಜವಾದಿ ಹಿನ್ನೆಲೆಯು ಸಾರೆಕೊಪ್ಪದ ಬಂಗಾರಪ್ಪ 'ಚಿರಂತನ ಭಿನ್ನಮತೀಯ ನಾಯಕ' ಎಂದು ಹೆಸರಾಗಿದ್ದಾರೆ. "ನನ್ನದು ಬೋಗಿಯ ಸ್ಥಾನವಲ್ಲ – ಯಾವಾಗಲೂ ಎಂಜಿನ್ ಸ್ಥಾನ" ಎಂದು ಅವರೇ ಹೇಳಿಕೊಳ್ಳುತ್ತಾರೆ. ಡಾ॥ ರಾಮಮನೋಹರ ಲೋಹಿಯಾ ಹಾಗೂ ಶಾಂತವೇರಿ ಗೋಪಾಲಗೌಡರ ಪ್ರಭಾವಕ್ಕೊಳಗಾಗಿ ರಾಜಕೀಯ ಪ್ರವೇಶ

ಮಾಡಿದ ಬಂಗಾರಪ್ಪ ನೀರು ಕುಡಿದಷ್ಟೇ ಸುಲಭವಾಗಿ ಪಕ್ಷಗಳನ್ನು ಬದಲಿಸಿದ್ದಾರೆ, ಪಕ್ಷಗಳನ್ನು ಕಟ್ಟಿದ್ದಾರೆ. ಎಂದೂ ಕುರ್ಚಿಗೆ ಆಸೆಪಡದ ಡಾ॥ಲೋಹಿಯಾ ಹಾಗೂ ಎಸ್. ಗೋಪಾಲಗೌಡರ 'ಶಿಷ್ಯ'ರೆಂದು ಹೇಳಿಕೊಳ್ಳುವ ಬಂಗಾರಪ್ಪನವರಿಗೆ ಯಾವಾಗಲೂ 'ದೊಡ್ಡ' ಕುರ್ಚಿಯೇ ಬೇಕು! ಕಾಂಗ್ರೆಸ್‌ಗೆ 'ಕೈ'ಕೊಟ್ಟು 'ಭಾಜಪ'ದ ಕಮಲ ಹಿಡಿದ ಅವರು ಈಗ ಮುಲಾಯಂಸಿಂಗ್‌ರ 'ಸೈಕಲ್' ಹತ್ತಿದ್ದಾರೆ!

೧೯೬೭ರ ವಿಧಾನಸಭಾ ಚುನಾವಣೆಯಲ್ಲಿ ಬಂಗಾರಪ್ಪನವರು ಮೊದಲ ಸಲ "ಪ್ರಜಾಸೋಷಿಯಲಿಸ್ಟ್ ಪಕ್ಷ'ದ ಪರವಾಗಿ ಸೊರಬ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದರು. ಶಾಸಕರಾದ ನಂತರ ಅವರು ನಿರುದ್ಯೋಗಿ ಭೂರಹಿತ ರೈತರಿಗೆ ಭೂಮಿ ಕೊಡಿಸುವಲ್ಲಿ, ಸಾಹುಕಾರರ ಹಿಡಿತದಿಂದ ಗೇಣಿದಾರರನ್ನು ಪಾರು ಮಾಡುವಲ್ಲಿ, ಹಿಂದುಳಿದವರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ, ಹಳ್ಳಿಗಾಡಿನಲ್ಲಿ ರಸ್ತೆ, ಬಾವಿ, ಶಾಲೆಗಳ ಸೌಲಭ್ಯ ಕಲ್ಪಿಸುವಲ್ಲಿ, ಜೀತ ಮುಕ್ತರಿಗೆ ಪುನರ್ವಸತಿ ಕಲ್ಪಿಸುವಲ್ಲಿ ಶ್ರಮವಹಿಸಿ ಕೆಲಸ ಮಾಡಿದರು. ಈ ಕಾರಣದಿಂದಲೇ ಅವರು 'ಬಡವರ ಬಂಧು' ಎನಿಸಿದ್ದಾರೆ.

'ಸೋಲರಿಯದ ಸರದಾರ' ಎಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದ ಇವರಿಗೂ 'ಮತದಾರರು' ಒಮ್ಮೆ ಸೋಲಿನ ಕಹಿ ಉಣಿಸಿದ್ದಾರೆ. ಬಂಗಾರಪ್ಪ ರಾಜಕಾರಣಿಯಾದರೂ ಕಲಾಭಿಮಾನಿ, ಸಾಹಿತ್ಯ ಪ್ರೇಮಿ, ಸಂಗೀತಪ್ರಿಯ, ಕ್ರೀಡಾಭಿಮಾನಿ ಹಾಗೂ ಕ್ರೀಡಾಪಟು. ಎಲ್ಲ ಬಗೆಯ ಎಲ್ಲ ವಯಸ್ಸಿನ ಜನ ಯಾವಾಗಲೂ ಅವರನ್ನು ಸುತ್ತುವರಿದಿರುತ್ತಾರೆ. ಜನರೊಂದಿಗೆ ಅವರು ಸರಳವಾಗಿ, ಸಹಜವಾಗಿ ಬೆರೆಯುತ್ತಾರೆ. ಅವರ ಸುಖ-ದುಃಖದಲ್ಲಿ ಭಾಗಿಯಾಗುತ್ತಾರೆ. ಇದೇ ಅವರ ಟ್ರಂಪ್ ಕಾರ್ಡ್.

ದೇವರಾಜ ಅರಸ್ ಸಂಪುಟದಲ್ಲಿ ಮೊದಲಬಾರಿಗೆ ಸಚಿವರಾಗಿ ಗೃಹ, ಲೋಕೋಪಯೋಗಿ ಖಾತೆಗಳನ್ನು ನಿರ್ವಹಿಸಿದ ಮಾಜಿ ಸಮಾಜವಾದಿ ಬಂಗಾರಪ್ಪನವರು ದುರ್ಬಲರಿಗೆ ರಕ್ಷಣೆಯನ್ನೊದಗಿಸುವದರ ಜತೆಗೆ ಸಣ್ಣ ಹಾಗೂ ದೊಡ್ಡ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಿದರು. ೧೯೭೯ರಲ್ಲಿ ಇಂದಿರಾಗಾಂಧಿ - ದೇವರಾಜ ಅರಸರ ಸಂಬಂಧ ಕೆಟ್ಟಾಗ ಇಂದಿರಾ ಗಾಂಧಿಯವರು ದೊಡ್ಡ ಕುರ್ಚಿಗೆ ಹಾತೊರೆಯುವ ಬಂಗಾರಪ್ಪನವರನ್ನು ಅರಸರಿಂದ ಬೇರ್ಪಡಿಸಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಗದ್ದುಗೆಗೆ ಏರಿಸಿದರು. ಆದರೆ, ಮಂತ್ರಿಪದದ ಆಕರ್ಷಣೆಯೇ ಬೇರೆ. ಮುಂದೆ,

ಗುಂಡೂರಾವ್ ಮುಖ್ಯಮಂತ್ರಿಯಾದಾಗ ಮುಖ್ಯಮಂತ್ರಿಪದದ ಆಕಾಂಕ್ಷಿಯಾಗಿದ್ದ ಬಂಗಾರಪ್ಪ, ಕೃಷಿ ಹಾಗೂ ಕಂದಾಯ ಖಾತೆಯ ಮಂತ್ರಿಯಾಗಿ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಆದರೆ, 'ಅತೃಪ್ತಿ'ಯನ್ನು ಸದಾ ಬೆನ್ನಿಗಂಟಿಸಿಕೊಂಡೇ ಇರುವ ಬಂಗಾರಪ್ಪನವರು ಕೆಲಕಾಲದ ನಂತರ ಗುಂಡೂರಾವ್ ಸಂಪುಟದಿಂದಲೂ ಹೊರಬಿದ್ದರು.

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಲು ಅವರಿಗೆ ಬಂಗಾರಪ್ಪನವರ ಕ್ರಾಂತಿರಂಗವೂ ಬೆಂಬಲಕೊಟ್ಟಿತ್ತು. ಮುಖ್ಯಮಂತ್ರಿ ಪದವಿಯ ಮೇಲೆ ಕಣ್ಣಿರಿಸಿದ್ದ ಅವರು ಉಪಮುಖ್ಯಮಂತ್ರಿಯಾಗಲು ಒಪ್ಪಲಿಲ್ಲ. ೧೯೮೯ರಲ್ಲಿ ವೀರೇಂದ್ರ ಪಾಟೀಲರು ಎರಡನೆಯ ಸಲ ಮುಖ್ಯಮಂತ್ರಿಯಾಗುವ ಕಾಲಕ್ಕೆ ಕಾಂಗ್ರೆಸ್‌ದಲ್ಲಿ ತಳವೂರಿದ್ದ ಬಂಗಾರಪ್ಪ ವೀರೇಂದ್ರ ಪಾಟೀಲರ ಸಂಪುಟ ಸೇರಿ ಕೃಷಿ ಹಾಗೂ ತೋಟಗಾರಿಕೆ ಮಂತ್ರಿಯಾದರು. ೧೯೯೦ರಲ್ಲಿ ವೀರೇಂದ್ರ ಪಾಟೀಲರು ಅನಿರೀಕ್ಷಿತವಾಗಿ ಅಧಿಕಾರ ತ್ಯಜಿಸಬೇಕಾಗಿ ಬಂದಾಗ ಅವರ ಸಂಪುಟದಲ್ಲಿ ಮಂತ್ರಿಯಾಗಿದ್ದ ಬಂಗಾರಪ್ಪನವರ ಬಹುದಿನದ ಕನಸು ನನಸಾಗಿ ಅವರು ಮುಖ್ಯಮಂತ್ರಿಯಾಗುವ ಯೋಗ ಕೂಡಿ ಬಂದಿತು.

ಬಂಗಾರಪ್ಪನವರ ಮುಖ್ಯಮಂತ್ರಿತ್ವವೂ ಅಲ್ಪಕಾಲಿಕವಾದದ್ದೇ. ಭಾರತದ ಪ್ರಧಾನಿ ಹಾಗೂ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನರಸಿಂಹರಾವ್ ಹಾಗೂ ಬಂಗಾರಪ್ಪನವರಿಗೆ ಆಗಿಬರಲಿಲ್ಲ. ಭ್ರಷ್ಟಾಚಾರದ ಆರೋಪ ಹೊತ್ತಿದ್ದ ಬಂಗಾರಪ್ಪನವರನ್ನು ಸ್ವತಃ ಭ್ರಷ್ಟರಾಗಿದ್ದ ಪಿ.ವಿ.ನರಸಿಂಹರಾವ್ ಅಧಿಕಾರದಿಂದ ಕೆಳಗಿಳಿಸಿದರು. ಬಂಗಾರಪ್ಪನವರ ಸರ್ಕಾರದಲ್ಲಿ ಶಿಕ್ಷಣ ಮಂತ್ರಿಯಾಗಿದ್ದು ಈ ಮೊದಲೇ ರಾಜೀನಾಮೆ ಕೊಟ್ಟು ಹೊರಬಂದಿದ್ದ ವೀರಪ್ಪ ಮೊಯ್ಲಿಯವರ ಅದೃಷ್ಟ ಖುಲಾಯಿಸಿ, ೧೯೯೨ರಲ್ಲಿ ಅವರು ಮುಖ್ಯಮಂತ್ರಿ ಗಾದಿ ಏರಿದರು.

ಬಂಗಾರಪ್ಪ ಯಥಾಪ್ರಕಾರ ಕಾಂಗ್ರೆಸ್ ಪಕ್ಷ ತೊರೆದು ತಮ್ಮದೇ ಆದ 'ಕರ್ನಾಟಕ ಕಾಂಗ್ರೆಸ್' ಪಕ್ಷ ಕಟ್ಟಿದರು. ೧೯೯೪ರ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ನಾಲ್ಕೈದು ತಿಂಗಳ ಎಳೆಯ ಪಕ್ಷ ಹತ್ತು ಸ್ಥಾನಗಳನ್ನು ಗೆಲ್ಲುವ ಪವಾಡ ಸೃಷ್ಟಿಸಿದರು. ಕರ್ನಾಟಕದಲ್ಲಿ ನರಸಿಂಹರಾಯರ ಕಾಂಗ್ರೆಸ್ ಪಕ್ಷ ಮಣ್ಣು ಮುಕ್ಕುವಂತೆ ಮಾಡಿದರು. ಆದರೆ, ಇವರ ಪಕ್ಷದ ಐವರು ಶಾಸಕರು ಆಮಿಷಕ್ಕೊಳಗಾಗಿ ಪಕ್ಷಾಂತರ ಮಾಡಿದರು. ಧೃತಿಗೆಡದ ಬಂಗಾರಪ್ಪ ೧೯೯೬ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಲೋಕಸಭೆ

ಪ್ರವೇಶಿಸಿದರು. ಅದೇ ವರ್ಷ ಅವರು ಹೊಸ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿಯವರ ಹಿರಿತನದಲ್ಲಿ ಬೆಂಗಳೂರಿನ ಅರಮನೆಯಲ್ಲಿ ನಡೆದ ಅದ್ದೂರಿ 'ವಿಲಯನ ಸಮಾರಂಭ'ದಲ್ಲಿ ತಮ್ಮ 'ಕರ್ನಾಟಕ ಕಾಂಗ್ರೆಸ್' ಪಕ್ಷವನ್ನು 'ಮಾತೃಪಕ್ಷ' ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಿದರು.

ಕಾಲಕಳೆದಂತೆ ಬಂಗಾರಪ್ಪನವರಿಗೆ ಕಾಂಗ್ರೆಸ್ ಸಖ್ಯದಲ್ಲಿ ಮತ್ತೆ ಭ್ರಮನಿರಸನವಾಗತೊಡಗಿತು. ಕಾಂಗ್ರೆಸ್‌ದಲ್ಲಿ ತಮ್ಮ ಯೋಗ್ಯತೆಗೆ ತಕ್ಕ 'ಸ್ಥಾನಮಾನ' ದೊರಕುತ್ತಿಲ್ಲವೆಂಬ ಅಳಲು ಅವರದಾಗಿತ್ತು. ಅವರಲ್ಲಿ ಅತೃಪ್ತಿಯ ಹೊಗೆಯಾಡತೊಡಗಿತು. ಇದೇ ಹೊತ್ತಿಗೆ ಕೇಂದ್ರದಲ್ಲಿ ಆರು ವರ್ಷ ಅಧಿಕಾರ ಚಲಾಯಿಸಿದ 'ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರ 'ಭಾರತವು ಪ್ರಕಾಶಿಸುತ್ತಿದೆ' ಎಂಬ ತನ್ನ 'ಸಾಧನೆ'ಯ ಘೋಷಣಾವಾಕ್ಯದೊಂದಿಗೆ ಮರಳಿ ಅಧಿಕಾರಕ್ಕೆ ಬರುವ ನಿರೀಕ್ಷೆಯಲ್ಲಿ ೨೦೦೪ರ ಲೋಕಸಭಾ ಚುನಾವಣೆಗೆ ಸಜ್ಜಾಗತೊಡಗಿತ್ತು. ರಾಜಕೀಯ ಭವಿಷ್ಯಕಾರರು, ಸಮೂಹ ಮಾಧ್ಯಮದವರು 'ಬಿಜೆಪಿ'ಯನ್ನು ಗೆಲ್ಲುವ ಕುದುರೆಯನ್ನಾಗಿ ಚಿತ್ರಿಸತೊಡಗಿದ್ದರು. ಇಂಥ ಸಮಯಕ್ಕಾಗಿಯೇ ಕಾಯುತ್ತಿದ್ದ ಬಂಗಾರಪ್ಪ 'ಗೆಲ್ಲುವ ಕುದುರೆ' ಬಿಜೆಪಿ ಮೇಲೆ ಪಣ ಕಟ್ಟಿ ಆ ಪಕ್ಷಕ್ಕೆ ಜಿಗಿದರು.

೨೦೦೪ರ ಲೋಕಸಭಾ ಚುನಾವಣೆಯಲ್ಲಿ 'ಬಿಜೆಪಿ' ಟಿಕೆಟ್ ಮೇಲೆ ಬಂಗಾರಪ್ಪನವರು ಗೆದ್ದರೇನೊ ನಿಜ. ಆದರೆ, ದುರದೃಷ್ಟ ಅವರ ಬೆನ್ನು ಬಿಡಲಿಲ್ಲ. ಎಲ್ಲರ ಲೆಕ್ಕಾಚಾರ ತಲೆಕೆಳಗಾಗಿ 'ಬಿಜೆಪಿ' ನೇತೃತ್ವದ ಎನ್.ಡಿ.ಎ. ಕೇಂದ್ರದಲ್ಲಿ ಅಧಿಕಾರ ಪಡೆಯುವಷ್ಟು ಬಹುಮತ ಪಡೆಯಲಿಲ್ಲ. ಹೀಗಾಗಿ, ಬಂಗಾರಪ್ಪ ಬಿಜೆಪಿ ತೊರೆಯುವ ತಯಾರಿಯಲ್ಲಿ 'ಸಮುಹೂರ್ತ'ಕ್ಕಾಗಿ ಕಾಯತೊಡಗಿದರು. 'ದೊಡ್ಡ' ಕುರ್ಚಿಯ ಶೋಧನೆಯಲ್ಲಿದ್ದ ಅವರಿಗೆ ಮುಲಾಯಂ ಸಿಂಗ್‌ರ ಸಮಾಜವಾದಿ ಪಕ್ಷದ 'ಸೈಕಲ್' ಹತ್ತಬೇಕೆನ್ನಿಸಿತು. ಆ ಪಕ್ಷ ಸೇರಿ ಅದರ ರಾಜ್ಯಘಟಕದ ಅಧ್ಯಕ್ಷರೂ ಆದರು. ಲೋಕಸಭೆಗೆ 'ಬಿಜೆಪಿ' ವತಿಯಿಂದ ಚುನಾಯಿತರಾಗಿದ್ದರಲ್ಲ – ಆ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೆ ಸಮಾಜವಾದಿ ಪಕ್ಷದ ವತಿಯಿಂದ ಟಿಕೆಟ್ ಪಡೆದು ಲೋಕಸಭೆಗೆ ಚುನಾಯಿತರಾದರು. ಬಂಗಾರಪ್ಪನವರ ಅನೇಕ ರಾಜಕೀಯ 'ಅವತಾರ'ಗಳನ್ನು ಕಂಡಿರುವ ಕರ್ನಾಟಕ ಅವರ ಮುಂದಿನ 'ಅವತಾರ'ಕ್ಕಾಗಿ ಕಾಯುತ್ತಿದೆ.

# ಮೂರಕ್ಕೆ ಇಳಿಯದ ಆರಕ್ಕೆ ಏರದ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ !

ವೀರಪ್ಪ ಮೊಯ್ಲಿ ಒಬ್ಬ 'ಜಂಟಲ್‌ಮನ್' ಎಂಬ ಪ್ರತೀತಿ ಇದೆ. ದೇವರಾಜ ಅರಸರ ಮಂತ್ರಿಮಂಡಲದಲ್ಲಿ ಸಣ್ಣ ಕೈಗಾರಿಕೆಗಳ ಸಚಿವರಾಗಿದ್ದಾಗಲೇ ತಮ್ಮ ದಕ್ಷತೆ, ಪ್ರಾಮಾಣಿಕತೆ ಹಾಗೂ ಕಾರ್ಯಶೈಲಿಯಿಂದ ದೊಡ್ಡ ಹೆಸರು ಮಾಡಿದ್ದರು. ಇವರೊಬ್ಬ ನಿಗರ್ವಿ ಮನುಷ್ಯ. ಸಾಹಿತಿ ಹಾಗೂ ಶಿಕ್ಷಣ ಪ್ರೇಮಿ. ಮೂರಕ್ಕೆ ಇಳಿಯದ ಆರಕ್ಕೆ ಏರದ ಸಮತೋಲನ ಹೊಂದಿದ ವ್ಯಕ್ತಿ. ಇವರು ಹುಟ್ಟಿ ಬೆಳೆದದ್ದು ತೀರಾ ಬಡ ಕುಟುಂಬದಲ್ಲಿ. ಬಡತನ, ನೋವು, ನರಳಿಕೆ, ಶೋಷಣೆಯ ಅಗ್ನಿದಿವ್ಯದಿಂದ ಹಾದು ಬಂದವರಿವರು.

ಗುಂಡೂರಾಯರ ಸಂಪುಟದಲ್ಲಿ ಅರ್ಥ ಸಚಿವರಾಗಿ, ವೀರೇಂದ್ರ ಪಾಟೀಲರು ಎರಡನೆಯ ಸಾರೆ ಮುಖ್ಯಮಂತ್ರಿಯಾದಾಗ ಅವರ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದ ಮೊಯ್ಲಿಯವರು 'ಲೋಕ ಅದಾಲತ್'ಗಳ ಸ್ಥಾಪನೆಗೆ ಕಾರಣಕರ್ತರಾದರು. ಎರಡೇ ತಿಂಗಳಲ್ಲಿ ಒಂದು ಲಕ್ಷ ಎಂಬತ್ನಾಲ್ಕು ಸಾವಿರ ಪ್ರಕರಣಗಳು ಇತ್ಯರ್ಥವಾಗುವಂತೆ ನೋಡಿಕೊಂಡರು. 'ನ್ಯಾಯನೀಡುವುದು ತಡವಾದರೆ ಅದು ನ್ಯಾಯ ನಿರಾಕರಿಸಿದಂತೆ' – ಎಂಬ ದೃಢನಂಬಿಕೆ ಅವರದಾಗಿತ್ತು. ಸಾಕ್ಷರತಾ ಆಂದೋಲನಕ್ಕೆ ಒತ್ತುಕೊಟ್ಟ ಮೊಯ್ಲಿಯವರು ಒಂದೂ ಅಪಸ್ವರ ಕೇಳಿ ಬರದ ರೀತಿಯಲ್ಲಿ ನಾಲ್ವತ್ತು ಸಾವಿರಕ್ಕೂ ಹೆಚ್ಚು ಮಂದಿ ವಿವಿಧ ವರ್ಗಗಳ ಶಿಕ್ಷಕರನ್ನು ನೇಮಿಸಿ ದಾಖಲೆ ಸ್ಥಾಪಿಸಿದರು. ಕನ್ನಡ ಭಾಷೆ ಹಾಗೂ ಸಂಸ್ಕೃತಿ ಅಭಿವೃದ್ಧಿಗೆ ಇವರು ತಮ್ಮ ಕೊಡುಗೆ ನೀಡಿದರು.

ಜನತಾಪಕ್ಷ ಅಧಿಕಾರಕ್ಕೆ ಬಂದಾಗ ವಿರೋಧ ಪಕ್ಷದ ನಾಯಕರಾಗಿದ್ದ ಮೊಯ್ಲಿಯವರು ಶ್ರೀ ಭೈರೇಗೌಡರ ಪಕ್ಷಾಂತರಕ್ಕೆ ಪ್ರಚೋದಿಸಿದರೆಂಬ ಬಗ್ಗೆ ಸಾಕಷ್ಟು ಗೊಂದಲ ಸೃಷ್ಟಿ ಮಾಡಿದ 'ಟೇಪ್' ಹಗರಣದಲ್ಲಿ ಸಿಕ್ಕಿಬಿದ್ದರೂ 'ನಿರ್ದೋಷಿ'ಗಳೆಂದು ಸಾಬೀತಾಯಿತು. ಚಾರಿತ್ರ್ಯಶುದ್ಧಿಯುಳ್ಳ ಮೊಯ್ಲಿಯವರು ಒಬ್ಬ ನಿಷ್ಠಾವಂತ ರಾಜಕಾರಣಿ. ಬಂಗಾರಪ್ಪನವರು ಅಧಿಕಾರದಿಂದ ಕೆಳಗಿಳಿದಾಗ ಇವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಯಾದರು. ಬಂಗಾರಪ್ಪನವರೇ ಇವರ ಹೆಸರನ್ನು ಸೂಚಿಸಬೇಕಾಯಿತು. ಎಸ್. ಎಂ. ಕೃಷ್ಣ ಉಪ ಮುಖ್ಯಮಂತ್ರಿಯಾದರು.

ಮುಖ್ಯಮಂತ್ರಿ ಮೊಯ್ಲಿಯವರ ಅಧಿಕಾರಾವಧಿಯುದ್ದಕ್ಕೂ ಭಿನ್ನಮತೀಯರ ಕಾಟ ಇವರ ಬೆನ್ನು ಬಿಡಲಿಲ್ಲ. ಆದರೂ ಉತ್ತಮ ಆಡಳಿತ ನೀಡಿದ ಸಾಧನೆ ಇವರದಾಗಿದೆ. 'ಎಂ.ಸಿ.ಎ.' ಎಂಬ ಖಾಸಗಿ ಮಾರ್ಕೆಟಿಂಗ್

ರೀಸರ್ಚ್ ಸಂಸ್ಥೆ ನಡೆಸಿದ ಸಮೀಕ್ಷೆ ಪ್ರಕಾರ: "ಕರ್ನಾಟಕದಲ್ಲಿ ವೀರಪ್ಪ ಮೊಯ್ಲಿ ಅವರ ಸರಕಾರದ ಒಟ್ಟಾರೆ ಸಾಧನೆ ಅವರ ಹಿಂದಿನ ಸರ್ಕಾರದ ಸಾಧನೆಗಳಿಗಿಂತ ಉತ್ತಮವಾಗಿತ್ತು."

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಆರ್ಥಿಕ ನೆರವು ಒದಗಿಸಿದ ಮೊಯ್ಲಿಯವರು ಕಲೆ, ಸಂಗೀತ ಮತ್ತು ಪತ್ರಿಕೋದ್ಯಮದಲ್ಲಿ ವಿಶಿಷ್ಟ ಸಾಧನೆಗೈದವರಿಗೆ ಪುರಸ್ಕಾರ ನೀಡಲು ಹೊಸ 'ಪ್ರಶಸ್ತಿ'ಗಳನ್ನು ಸ್ಥಾಪಿಸಿದರು. ಇವರ ಅಧಿಕಾರಾವಧಿಯಲ್ಲಿ ಪಿಟೀಲು ಚೌಡಯ್ಯ, ಡಾ|| ರಾಜಕುಮಾರ, ಪ್ರಜಾವಾಣಿ ಪತ್ರಿಕೆಯ ಮಾಜಿ ಸಂಪಾದಕ 'ಟಿ. ಎಸ್. ರಾಮಚಂದ್ರರಾವ್' ಹೆಸರಿನಲ್ಲಿ ಪ್ರಶಸ್ತಿ ನೀಡಲು ನಿರ್ಧರಿಸಲಾಯಿತು.

ಮೊಯ್ಲಿಯವರು ತಮ್ಮ ಅಧಿಕಾರಾವಧಿಯಲ್ಲಿ ಒಂದೆರಡು ವಿವಾದಾತ್ಮಕ ನಿರ್ಣಯಗಳನ್ನು ಕೈಗೊಂಡು ಟೀಕೆಗೊಳಗಾದರು. ಅವುಗಳಲ್ಲಿ ಮೊದಲನೆಯದು–ಜಾನಪದ ಅಕಾಡೆಮಿಯನ್ನು ಸ್ಥಾಪಿಸಿ ಅದನ್ನು 'ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ' ಎಂದು ಹೆಸರಿಸಿದ್ದು. ಎರಡನೆಯದು– 'ಕೊಂಕಣಿ ಸಾಹಿತ್ಯ ಅಕಾಡೆಮಿ'ಯನ್ನು ಸ್ಥಾಪಿಸಿದ್ದು. ಕೊಂಕಣಿ ಈಗಾಗಲೇ ಗೋವಾ ರಾಜ್ಯದ ಅಧಿಕೃತ ಭಾಷೆಯಾಗಿರುವುದರಿಂದ ಇದರ ಅಗತ್ಯವಿರಲಿಲ್ಲ.

## 'ಮಣ್ಣಿನ ಮಗ' : ಎಚ್. ಡಿ. ದೇವೇಗೌಡ ಮುಖ್ಯಮಂತ್ರಿ

೧೯೮೩ರಲ್ಲಿ ಕರ್ನಾಟಕ ಪ್ರಪ್ರಥಮ ಕಾಂಗ್ರೆಸ್ಸೇತರ ಸಮ್ಮಿಶ್ರ ಸರಕಾರವನ್ನು ಕಂಡಿತು. ೧೯೮೯ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಐದು ವರ್ಷಗಳ ಅವಧಿಯಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಅಧಿಕಾರಕ್ಕೇರಿಸಿತು. ೧೯೯೪ರ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಮತ್ತೆ ಕಾಂಗ್ರೆಸ್ಸಿನ ಕೈ ತಪ್ಪಿತು. ಜನತಾದಳ ಅಪಾರ ಬಹುಮತ ಗಳಿಸಿತು. 'ಮಣ್ಣಿನ ಮಗ' ದೇವೇಗೌಡರು ಮುಖ್ಯಮಂತ್ರಿಯಾದರು. ಜೆ. ಎಚ್. ಪಟೇಲ ಉಪ ಮುಖ್ಯಮಂತ್ರಿಯಾದರು.

ರಾಜಕೀಯವ್ಯೂಹ ರಚನೆಯಲ್ಲಿ ನಿಸ್ಸೀಮರಾದ ದೇವೇಗೌಡರು ಒಂದು ಬಿಳಿ ಅಂಗಿ, ಲುಂಗಿ ಧರಿಸಿ ರಾಗಿ ಮುದ್ದೆ ಸೊಪ್ಪಿನ ಸಾರು ಪ್ರೀತಿಸುವ ಸರಳ ಜೀವನ ಶೈಲಿಯ ಮನುಷ್ಯ. ಎಲ್ಲ ಗ್ರಾಮೀಣ ಮಕ್ಕಳಂತೆಯೇ ದೇವೇಗೌಡರು ತಮ್ಮ ಹುಟ್ಟೂರು – ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ

ಹರದನ ಹಳ್ಳಿಯ ಶಾಲೆಯಲ್ಲಿ ಕಲಿಯುತ್ತ, ಹೊಲದಲ್ಲಿ ದುಡಿಯುತ್ತ ತಮ್ಮ ಪ್ರಾಥಮಿಕ ಶಿಕ್ಷಣ ಮುಂದುವರಿಸಿದರು. ಮುಂದಿನ ಶಿಕ್ಷಣ ಹಳೇಕೋಡಿ ಹಾಗೂ ಹಾಸನದಲ್ಲಿ ಮುಂದುವರಿಯಿತು.

## ಶಿಕ್ಷಕ – ಕಂಟ್ರಾಕ್ಟರ್ – ಶಾಸಕ

ಎಸ್.ಎಸ್.ಎಲ್.ಸಿ. ಆದನಂತರ ಕೆಲಕಾಲ ಶಿಕ್ಷಕರಾಗಿ ಕೆಲಸ ಮಾಡಿದ ಗೌಡರು ಮುಂದೆ 'ಸಿವಿಲ್ ಡಿಪ್ಲೋಮಾ' ಮಾಡಿ ಕಂಟ್ರಾಕ್ಟರ್ ಆಗಿ ಸರಕಾರೀ ಗುತ್ತಿಗೆ ಕೆಲಸಗಳನ್ನು ಮಾಡುತ್ತ ತಮ್ಮ ಜೀವನ ಪ್ರಾರಂಭಿಸಿದರು. ಇವರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿ ತಮ್ಮ ರಾಜಕೀಯ ಜೀವನ ಆರಂಭಿಸಲಿಲ್ಲ. ಟಿ.ಡಿ.ಬಿ. ಸದಸ್ಯರಾಗಿ ರಾಜಕೀಯ ಜೀವನಕ್ಕೆ ಕಾಲಿಟ್ಟ ಗೌಡರು ೧೯೬೨ರಲ್ಲಿ ವಿಧಾನಸಭೆಗೆ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಕಾಂಗ್ರೆಸ್ ಟಿಕೆಟ್ ಸಿಗದ್ದರಿಂದ ಇವರ ಅಭಿಮಾನಿ ಬೆಂಬಲಿಗರು 'ಸ್ವತಂತ್ರ' ಅಭ್ಯರ್ಥಿಯಾಗಿ ಇವರನ್ನು ಕಣಕ್ಕಿಳಿಸಿದರು. ಆಗ ಕೇವಲ ೨೯ ವರ್ಷ ವಯಸ್ಸಿನ ಈ ಯುವಕ ಹೊಳೆನರಸೀಪುರ ಕ್ಷೇತ್ರದಿಂದ ಕಾಂಗ್ರೆಸ್ ವಿರುದ್ಧ ಸ್ಪರ್ಧಿಸಿ ಗೆದ್ದೇ ಬಿಟ್ಟರು!

ಅಲ್ಲಿಂದ ಇಲ್ಲೀವರೆಗೆ ನಾಲ್ವತ್ತಾರು ಸಂವತ್ಸರಗಳನ್ನು ದಾಟಿರುವ ದೇವೇಗೌಡರು ಹಿಂತಿರುಗಿ ನೋಡಿಲ್ಲ. ಗೆಲವು – ಸೋಲು, ಅದೃಷ್ಟ – ದುರಾದೃಷ್ಟ ಅವರ ಸಂಗಾತಿಯಾಗಿವೆ. ರೈತರ ಬಗೆಗೆ ಮೊದಲಿನಿಂದಲೂ ಮೊಸಳೆ ಕಣ್ಣೀರು ಸುರಿಸುವ ಇವರು ಬಹುಬೇಗ ಜನಪ್ರಿಯ ನಾಯಕರೆನಿಸಿದರು. ವಿಧಾನಸಭೆಯಲ್ಲಿ ತಮ್ಮ ನೇರ ಮತ್ತು ಬಿಚ್ಚು ಮಾತಿನಿಂದ ಗಮನ ಸೆಳೆದರು.

೧೯೬೨ರಲ್ಲಿ ಅಶಿಸ್ತಿನ ಕಾರಣದಿಂದ ಕಾಂಗ್ರೆಸ್‌ನಿಂದ ಉಚ್ಚಾಟಿತರಾಗಿದ್ದ ದೇವೇಗೌಡರನ್ನು ೧೯೮೬ರಲ್ಲಿ ಕಾಂಗ್ರೆಸ್ ಮತ್ತೆ ಸ್ವಾಗತಿಸಿತು. ಇದು ಗೆದ್ದ ಎತ್ತಿನ ಬಾಲಹಿಡಿಯುವ ಕಾಂಗ್ರೆಸ್‌ನ ಹಳೆಯ ಚಾಳಿ.

೧೯೬೯ ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ದೇವೇಗೌಡರು ನಿಜಲಿಂಗಪ್ಪನವರ "ಸಂಸ್ಥಾ ಕಾಂಗ್ರೆಸ್"ನಲ್ಲೇ ಉಳಿದರು. ಇಂದಿರಾ ಗಾಂಧಿಯವರ ರಾಜನೀತಿಯನ್ನು ಖಂಡ ತುಂಡವಾಗಿ ಖಂಡಿಸಿದರು. ಅರಸರು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದ ನಾಯಕರಾಗಿ ಒಳ್ಳೆಯ ಹೆಸರನ್ನು ಮಾಡಿದರು. ಮುಖ್ಯಮಂತ್ರಿ ಸ್ಥಾನಕ್ಕಿಂತ ವಿರೋಧಪಕ್ಷದ ನಾಯಕನ ಸ್ಥಾನವೇ ತಮಗೆ ಹೆಚ್ಚಿನ ತೃಪ್ತಿ ನೀಡಿತ್ತೆಂದು ಅವರು ಹೇಳಿದ್ದುಂಟು.

ದೇಶದಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ಗೌಡರು ಹತ್ತು ತಿಂಗಳು ಸೆರೆಮನೆವಾಸ ಅನುಭವಿಸಿದ್ದಾರೆ. ೧೯೭೭ ರಲ್ಲಿ "ಸಂಸ್ಥಾ ಕಾಂಗ್ರೆಸ್" ಹೊಸದಾಗಿ ಹುಟ್ಟಿದ "ಜನತಾಪಕ್ಷ"ದಲ್ಲಿ ಐಕ್ಯಗೊಂಡಿತು. ಮರುವರ್ಷ ಗೌಡರು ರಾಜ್ಯ ಜನತಾಪಕ್ಷದ ಅಧ್ಯಕ್ಷರಾದರು. ೧೯೮೩ ರಲ್ಲಿ ಜನತಾಪಕ್ಷ ಅಸೆಂಬ್ಲಿ ಚುನಾವಣೆಯಲ್ಲಿ ಜಯಭೇರಿ ಬಾರಿಸಿದಾಗ ಪಕ್ಷದ ಗೆಲುವಿಗಾಗಿ ಸಾಕಷ್ಟು ಶ್ರಮಿಸಿದ್ದ ದೇವೇಗೌಡರು ಮುಖ್ಯಮಂತ್ರಿ ಸ್ಥಾನಕ್ಕಾಗಿ ಹಂಬಲಿಸಿದ್ದರು. ಆದರೆ, ಆಸೆ ಕೈಗೂಡದಾಗ, ನೋವನ್ನು ನುಂಗಿಕೊಂಡು ಹೆಗಡೆ ಸಂಪುಟ ಸೇರಿ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರಾದರು.

೧೯೮೮ ರಲ್ಲಿ ಹೆಗಡೆಯವರು ರಾಜೀನಾಮೆಕೊಡುವ ಪ್ರಸಂಗ ಬಂದಾಗಲೂ ಮುಖ್ಯಮಂತ್ರಿ ಪದವಿ ಇವರ ಕೈತಪ್ಪಿ ಬೊಮ್ಮಾಯಿಯವರ ಪಾಲಾಯಿತು. ನಿರಾಶೆಗೊಂಡರೂ, ಗೌಡರು ಅಲ್ಪಕಾಲಾವಧಿಯ ಬೊಮ್ಮಾಯಿ ಸರ್ಕಾರದಲ್ಲಿ ನೀರಾವರಿ ಮಂತ್ರಿಯಾಗಿ ಸಹಕರಿಸಿದರು.

೧೯೮೯ರ ಅಸೆಂಬ್ಲಿ ಚುನವಣೆಯಲ್ಲಿ ಪ್ರಥಮ ಬಾರಿಗೆ ಸೋಲನ್ನನುಭವಿಸಿದ ಗೌಡರು ಎರಡು ವರ್ಷ ಕಾಲ ಅತಂತ್ರ ರಾಜಕೀಯ ಜೀವನದ ಸ್ಥಿತಿಯಲ್ಲಿದ್ದರು. ತಮ್ಮ ಬೆಂಬಲಿಗರೊಂದಿಗೆ ಜನತಾಪಕ್ಷದಿಂದ ಹೊರಬಂದ ಗೌಡರು, "ಕರ್ನಾಟಕ ವಿಕಾಸ ವೇದಿಕೆ" ಎಂಬ ಸಂಘಟನೆಯನ್ನು ಹುಟ್ಟು ಹಾಕಿ, ಹೋರಾಟ ಮುಂದುವರಿಸಿದರು. ೧೯೯೧ರಲ್ಲಿ ಹೊಸ ಹುರುಪಿನಿಂದ, ಹಾಸನದಿಂದ ಲೋಕಸಭೆಗೆ ಸ್ಪರ್ಧಿಸಿ ಗೆದ್ದರು. ಲೋಕಸಭೆಯಲ್ಲಿ ಸಕ್ರಿಯ ಸದಸ್ಯರಾಗಿ, 'ಹೋಮ್‌ವರ್ಕ್' ಚೆನ್ನಾಗಿ ಮಾಡಿಕೊಂಡು ಕಲಾಪಗಳಲ್ಲಿ ಭಾಗವಹಿಸಿ ತಮ್ಮ ಗುರುತನ್ನು ಮೂಡಿಸಿದರು.

ಈ ಮಧ್ಯೆ ಗೌಡರ 'ಜನತಾಪಕ್ಷ' 'ಸಮಾಜವಾದಿ ಜನತಾದಳ'ವಾಗಿ ರೂಪುಗೊಂಡಿತ್ತು. ರಾಜ್ಯದ ಹಿತದೃಷ್ಟಿಯಿಂದ, ಎರಡು ಧ್ರುವಗಳಾಗಿದ್ದ ಹೆಗಡೆ–ದೇವೇಗೌಡರನ್ನು ಒಗ್ಗೂಡಿಸುವ ಪ್ರಯತ್ನಗಳು ನಡೆದೇ ಇದ್ದವು. ೧೯೯೩ರಲ್ಲಿ ಈ ಪ್ರಯತ್ನಕ್ಕೆ ಫಲ ಸಿಕ್ಕಿತು. ಇಬ್ಬರೂ ನಾಯಕರು 'ಮನಸ್ತಾಪ'– 'ಭಿನ್ನಾಭಿಪ್ರಾಯ'ಗಳನ್ನು ಮರೆತು ಮುಂದೆ ಎಂದೂ ಯಾವುದೇ ವಿಷಯಕ್ಕೂ ಜಗಳ ಮಾಡುವುದಿಲ್ಲ' ಎಂದು ಪಣತೊಟ್ಟರು.

ದೇವೇಗೌಡರ 'ಸಮಾಜವಾದಿ ಜನತಾದಳ' ಹೆಗಡೆಯವರ 'ಜನತಾಪಕ್ಷ'ದಲ್ಲಿ ವಿಲೀನಗೊಂಡಿತು. ದೇವೇಗೌಡರು ರಾಜ್ಯ 'ಜನತಾದಳ'ದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಪಕ್ಷದ ಬಲ ಸಂವರ್ಧನೆಗಾಗಿ ಸತತವಾಗಿ ಶ್ರಮಿಸಿದರು. ತತ್ಫಲವಾಗಿ ೧೯೯೪ರ ವಿಧಾನಸಭೆಯ ಚುನಾವಣೆಯಲ್ಲಿ 'ಜನತಾದಳ' ಬಹುಮತ ಪಡೆದು ಅಧಿಕಾರಕ್ಕೆ ಬಂತು.

ದೇವೇಗೌಡರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ವಿಜಯೋತ್ಸವ ಆಚರಿಸುವ ಕಾಲಕ್ಕೆ ಇವರ ಬೆಂಬಲಿಗರು ಹೆಗಡೆಯವರ ಮೇಲೆ ಚಪ್ಪಲಿ ತೂರಾಡಿದ್ದು ಒಂದು ಅಹಿತಕರ ಘಟನೆ.

## ಹದಿನೆಂಟು ತಿಂಗಳ ಮುಖ್ಯಮಂತ್ರಿತ್ವದ ನಂಟು !

ತಮ್ಮ ಹದಿನೆಂಟು ತಿಂಗಳ ಮುಖ್ಯಮಂತ್ರಿತ್ವದ ಅಧಿಕಾರಾವಧಿಯಲ್ಲಿ ದೇವೇಗೌಡರು ಹಗರಣ ರಹಿತ, ಶುದ್ಧ, ಸಮರ್ಥ ಆಡಳಿತ ನೀಡಿ ಜನಮನ್ನಣೆ ಗಳಿಸಿದರು. ನೀರಾವರಿ ಯೋಜನೆಗಳಿಗೆ ಪುನಶ್ಚೇತನ ನೀಡಿ ರೈತರ ಮೆಚ್ಚುಗೆಗೆ ಪಾತ್ರರಾದರು. ಅನೇಕ ವರ್ಷಗಳಿಂದ ಕಗ್ಗಂಟಾಗಿದ್ದ ಹುಬ್ಬಳ್ಳಿ 'ಈದಗಾ ಮೈದಾನ' ಸಮಸ್ಯೆಯನ್ನು ಬಗೆಹರಿಸಿದರು. ದೇವೇಗೌಡರು ಒಬ್ಬ 'ಸೋಗಲಾಡಿ ಸೆಕ್ಯುಲರ್‌ವಾದಿ' ಎಂದು ಟೀಕಿಸುವವರಿದ್ದಾರೆ. ಪ್ರಸಿದ್ಧ ಅರ್ಥಶಾಸ್ತ್ರಜ್ಞರಾಗಿದ್ದ ದಿವಂಗತ ಪ್ರೊಫೆಸರ್ ವೆಂಕಟಗಿರಿಗೌಡರು ದೇವೇಗೌಡರ ಭ್ರಷ್ಟಾಚಾರ ಕುರಿತು; "ಭ್ರಷ್ಟಾಚಾರದ ದೊರೆ – ಬಿಳಿಬಟ್ಟೆಯಲ್ಲಿರುವ ಮನುಷ್ಯನ ಕಪ್ಪು ಕೃತ್ಯಗಳು" – ಎಂಬ ಶೀರ್ಷಿಕೆಯ ಪುಸ್ತಕವನ್ನೇ ಬರೆದು ಪ್ರಕಟಿಸಿದರು. ಮುಸ್ಲಿಂರ ಬಗೆಗೆ ತಮ್ಮ ಕಳಕಳಿ ಕಾಳಜಿ ವ್ಯಕ್ತಪಡಿಸುತ್ತ ದೇವೇಗೌಡರು ಚುನಾವಣಾ ಸಭೆಯೊಂದರಲ್ಲಿ, "ಮುಂದಿನ ಜನ್ಮವೊಂದಿದ್ದರೆ ನಾನು 'ಮುಸ್ಲಿಂ'ನಾಗಿ ಹುಟ್ಟಬಯಸುತ್ತೇನೆ" ಎಂದು ಹೇಳಿ ಚಪ್ಪಾಳೆ ಗಿಟ್ಟಿಸಿದ್ದರು. ಮುಸ್ಲಿಂರು ಪುನರ್ಜನ್ಮವನ್ನು ನಂಬುವದಿಲ್ಲ. ಹಾಗಾಗಿ, "ಮುಂದಿನ ಜನ್ಮದ ವರೆಗೆ ಕಾಯುವುದೇಕೆ, ಈಗಲೇ ಮತಾಂತರಗೊಂಡು ಮುಸ್ಲಿಂ ಆಗಬಹುದಲ್ಲ" – ಎಂದು ಇವರ ರಾಜಕೀಯ ವಿರೋಧಿಯೊಬ್ಬರು ಆಗ ವ್ಯಂಗ್ಯವಾಡಿದ್ದರು. 'ದೇವೇಗೌಡರ ನಡೆ ನುಡಿ ಕುರಿತು ಅವರು ಯಾವಾಗ ಹೇಗೆ ನಡೆಯುತ್ತಾರೆ, ಹೇಗೆ ನುಡಿಯುತ್ತಾರೆ' ಎಂದು ಊಹಿಸುವುದು ಕಷ್ಟ ಎಂಬ ಮಾತು ರೂಢಿಯಲ್ಲಿದೆ. ಈ ಮಾತನ್ನು ನಾಡೋಜ ಪಾಟೀಲ ಪುಟ್ಟಪ್ಪನವರು ದೇವೇಗೌಡರನ್ನು ಕುರಿತು ಇತ್ತೀಚೆಗೆ ಹೊರಡಿಸಿದ ಈ ಉದ್ಗಾರ ಸ್ಪಷ್ಟಪಡಿಸುತ್ತದೆ: "ದೇವರ ಆಟ ಯಾರಿಗೂ ತಿಳಿಯುವುದಿಲ್ಲ, ದೇವೇಗೌಡರ ಆಟ ದೇವರಿಗೂ ತಿಳಿಯುವುದಿಲ್ಲ"!

೧೯೯೬ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷಕ್ಕೆ ಸರ್ಕಾರ ರಚಿಸುವಷ್ಟು ಬಹುಮತ ಲಭಿಸಲಿಲ್ಲ. ಬಿಜೆಪಿ, ಕಾಂಗ್ರೆಸ್ಸೇತರ ಪಕ್ಷಗಳ 'ತೃತೀಯರಂಗ' ರಚನೆಯಾಗಿ ಕೇಂದ್ರದಲ್ಲಿ ಅಧಿಕಾರ ಹಿಡಿಯುವ ಯೋಜನೆ ರೂಪಿತವಾಯ್ತು. ಈ ರಂಗಕ್ಕೆ ಕಾಂಗ್ರೆಸ್‌ನ ಬೆಂಬಲವಿತ್ತಾದರೂ ಅದು ಸರಕಾರದಲ್ಲಿ ಭಾಗವಹಿಸಲು ಇಚ್ಛಿಸಲಿಲ್ಲ.

'ತೃತೀಯ ರಂಗ'ದ ಪ್ರಧಾನಿ ಹುದ್ದೆಯ ಅಭ್ಯರ್ಥಿಯಾಗಿ ಪಶ್ಚಿಮ ಬಂಗಾಲದ ಸಿ.ಪಿ.ಎಂ. ಮುಖ್ಯಮಂತ್ರಿ 'ಜ್ಯೋತಿ ಬಸು' ಅವರ ಹೆಸರನ್ನು ಸೂಚಿಸಲಾಯಿತು. ಆದರೆ, ಸಿ.ಪಿ.ಎಂ. 'ಪಾಲಿಟ್‌ಬ್ಯೂರೊ' ಅವರು ಪ್ರಧಾನಮಂತ್ರಿಯಾಗಲು ಒಪ್ಪಿಗೆ ಕೊಡಲಿಲ್ಲ. ಹೀಗೆ ಸಹಜವಾಗಿ ಕೈಗೆ ಬಂದ ಅವಕಾಶ ತಪ್ಪಿಸಿಕೊಂಡದ್ದನ್ನು – "ಅದೊಂದು ಹಿಸ್ಟಾರಿಕಲ್ ಬ್ಲಂಡರ್" ('ಐತಿಹಾಸಿಕ ಪ್ರಮಾದ') ಎಂದು ಜ್ಯೋತಿ ಬಸು ಮುಂದೊಂದು ದಿನ ಪರಿತಪಿಸಿ ಪಶ್ಚಾತ್ತಾಪ ಪಟ್ಟದ್ದುಂಟು. ಏಕೆಂದರೆ ಸ್ವಂತ ಬಲದಿಂದ 'ಸಿ.ಪಿ.ಎಂ.' ಎಂದೂ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲಾರದು!

ಜ್ಯೋತಿ ಬಸು ನಿರಾಕರಿಸಿದ ಪ್ರಧಾನಿ ಪಟ್ಟ ಯಾರಿಗೆ ಕಟ್ಟಬೇಕೆಂಬ 'ಬಿಲಿಯನ್ ಡಾಲರ್' ಪ್ರಶ್ನೆ ತೃತೀಯ ರಂಗದ ನಾಯಕರಿಗೆ ಎದುರಾಯಿತು. ಕರ್ನಾಟಕದಲ್ಲಿ ದೇವೇಗೌಡರು ತಮ್ಮ 'ಜನತಾದಳ' ಪಕ್ಷದಿಂದ ೧೬ ಅಭ್ಯರ್ಥಿಗಳನ್ನು ಗೆಲ್ಲಿಸಿ ದಿಲ್ಲಿಯ ಗಮನ ಸೆಳೆದಿದ್ದರು! 'ಪುರುಷಸ್ಯ ಭಾಗ್ಯಂ.....' ಅನ್ನುತ್ತಾರಲ್ಲ ಹಾಗಾಯಿತು ...... ದೇವೇಗೌಡರು 'ಆಕಸ್ಮಿಕ' ಪ್ರಧಾನಿಯಾಗಿ, ಅನಿರೀಕ್ಷಿತವಾಗಿ ದಿಲ್ಲಿ ಸಿಂಹಾಸನ ಏರಿದರು.

## ಮೊದಲ ಕನ್ನಡ ಪ್ರಧಾನಿ ದೇವೇಗೌಡರ ಹಳ್ಳಿಯಿಂದ 'ದಿಳ್ಳಿ'ವರೆಗಿನ ಸುದೀರ್ಘ ಪಯಣ !

ದೇವೇಗೌಡರು ಕನಸು ಮನಸಿನಲ್ಲೆಂದೂ ಬಯಸದ 'ಪ್ರಧಾನಿ' ಹುದ್ದೆ ಅವರಿಗಾಗಿ ಕಾದಿತ್ತು! ಅದೃಷ್ಟವೆಂದರೆ ಇದೇ ! ತೃತೀಯ ರಂಗದ ಒಮ್ಮತದ ಅಭ್ಯರ್ಥಿಯಾಗಿ ಕನ್ನಡಿಗ ದೇವೇಗೌಡರು ೧೯೯೬ರಲ್ಲಿ ದೇಶದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿ 'ದಿಲ್ಲಿ ಸಿಂಹಾಸನ' ಏರಿದರು. ಆದರೆ, ಕಾಂಗ್ರೆಸ್ ಪಕ್ಷ ತನ್ನ ಬೆಂಬಲವನ್ನು ಧಿಡೀರ್ ಆಗಿ ಹಿಂತೆಗೆದುಕೊಂಡಿದ್ದರಿಂದ ಹತ್ತು ತಿಂಗಳ ನಂತರ ದೇವೇಗೌಡರು ಅಧಿಕಾರ ತ್ಯಜಿಸಬೇಕಾಗಿ ಬಂತು.

೧೯೯೮ರಲ್ಲಿ ದೇವೇಗೌಡರು ಹಾಸನದಿಂದ ಲೋಕಸಭೆಗೆ ಪುನರಾಯ್ಕೆಗೊಂಡರು. ೧೯೯೯ರಲ್ಲಿ 'ಜನತಾದಳ' ಮತ್ತೆ ಹೋಳಾಯಿತು. ಗೌಡರು ಜನತಾದಳ (ಎಸ್)ದ ರಾಜ್ಯ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದರು. ನಂತರ ಇದೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ನೇಮಕಗೊಂಡರು. ಈಗ ಜನತಾದಳ(ಎಸ್) ರಾಷ್ಟ್ರಮಟ್ಟದಲ್ಲಿ ಮತ್ತೆ ಇಬ್ಭಾಗವಾಗಿದೆ.

ಏನೇ ಆಗಲಿ, 'ಮಾಜಿ ಪ್ರಧಾನಿ' ಎಂಬ ಪೂರ್ವಪ್ರತ್ಯಯವನ್ನು ದೇವೇಗೌಡರಿಂದ ಕಸಿಮುಕೊಳ್ಳಲು ಯಾರಿಗೂ ಸಾಧ್ಯವಿಲ್ಲ ಎಂಬುದು ಮಾತ್ರ ಸತ್ಯ ಸಂಗತಿ!

# ಲೋಹಿಯಾ ಸಮಾಜವಾದಿಯ ಕೈಗೆ ರಾಜ್ಯದ 'ಪಟೇಲ್'ಗಿರಿ !

ದೇವೇಗೌಡರು ಪ್ರಧಾನಿಯಾಗಿ ದಿಲ್ಲಿಗೆ ಹೋದನಂತರ ಉಪ ಮುಖ್ಯಮಂತ್ರಿಯಾಗಿದ್ದ ಜಯದೇವ ಹಾಲಪ್ಪ ಪಟೇಲರು ಮುಖ್ಯಮಂತ್ರಿಯಾದರು. ಅವರದು ಒಂದು ವಿಶಿಷ್ಟ ವ್ಯಕ್ತಿತ್ವ. ರಾಜಕೀಯ ಸಿದ್ಧಾಂತ, ಸಂಗೀತ, ಸಾಹಿತ್ಯದತ್ತ ಒಲವು ಇರಿಸಿಕೊಂಡಿದ್ದ ಪಟೇಲರು ರಾಜಕೀಯದಲ್ಲಿದ್ದೂ ರಾಜಕೀಯ ನಿರ್ಲಿಪ್ತತೆ ಬೆಳಿಸಿಕೊಂಡಿದ್ದರು. ಅವರೆಂದೂ ಆದರ್ಶವಾದಿಯ ಸೋಗು ಹಾಕಲಿಲ್ಲ. ದೈವ ಸೃಷ್ಟಿಯಲ್ಲಿರುವ ಸಕಲ ಐಹಿಕ ಸುಖ-ಸಂತೋಷಗಳನ್ನು ಸವಿಯುವ ಹಂಬಲ ಅವರಿಗಿತ್ತು. ತನ್ನ ದೌರ್ಬಲ್ಯಗಳನ್ನು ತೆರೆದ ಪುಸ್ತಕದಂತೆ ಸಮಾಜದ ಮುಂದಿರಿಸಿದ ಅಪರೂಪದ ರಾಜಕಾರಣಿ ಅವರಾಗಿದ್ದರು.

ಯಾವುದೇ ಆಪಾದನೆ, ಹಗರಣಗಳಿಗೆ ಸಿಲುಕದೇ ತಮ್ಮ ರಾಜಕೀಯ ಜೀವನ ಸಾಗಿಸಿದ ಮನುಷ್ಯ ಪಟೇಲರು. ಅವರು ನೇರನುಡಿ, ಹೃದಯವಂತಿಕೆ, ಚತುರೋಕ್ತಿ, ಹಾಸ್ಯಚಟಾಕಿಗಳಿಗೆ ಹೆಸರಾಗಿದ್ದರು. ಪಟೇಲರದು ರಾಜಕೀಯ ಕ್ಷೇತ್ರದಲ್ಲಿ ದುಡಿದ ಮನೆತನ. ಇತ್ತೀಚೆಗೆ ಅವರ ಮಗ ಮಹಿಮಾ ಪಟೇಲ ಸಹ ಹಣ, ಹೆಂಡ, ಜಾತಿಯ ಆಮಿಷ ಒಡ್ಡದೇ ಚನ್ನಗಿರಿ ಕ್ಷೇತ್ರದಿಂದ ವಿಧಾನಸಭೆಗೆ ಆರಿಸಿ ಬಂದಿದ್ದಾರೆ.

ಜೆ. ಎಚ್. ಪಟೇಲರ ದೃಷ್ಟಿಯಲ್ಲಿ ರಾಜಕೀಯವೆಂದರೆ – ಮನಸ್ಸುಗಳನ್ನು ಬದಲಾಯಿಸುವ ಒಂದು ಆಂದೋಲನ. ಅದು ಅಧಿಕಾರದ ಗದ್ದುಗೆ ಏರಿ ಮೆರೆಯುವ ಏಣಿಯಲ್ಲ. ಅವರು ಸಾಮಾಜಿಕ ಪರಿವರ್ತನೆಯ ಹರಿಕಾರರಾಗಿ ಜನಪರ ಚಳವಳಿಯಾದ ಐತಿಹಾಸಿಕ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆವಾಸವನ್ನು ಅನುಭವಿಸಿದರು.

೧೯೬೭ರಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾದ ಪಟೇಲರು ಲೋಕಸಭೆಯಲ್ಲಿ ಮೊಟ್ಟಮೊದಲ ಬಾರಿಗೆ ಕನ್ನಡದಲ್ಲಿ ಮಾತನಾಡಿ ಇತಿಹಾಸ ನಿರ್ಮಿಸಿದರು – ಕನ್ನಡದ ಜನತೆಯನ್ನು ರೋಮಾಂಚನಗೊಳಿಸಿದರು. ಇವರು ೧೯೪೭ರ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜೈಲುವಾಸ ಅನುಭವಿಸಿದ್ದರೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಖಂಡ ಮೂವತ್ತು ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವನ್ನು ಸೇರುವ ಮನಸ್ಸು ಮಾಡಲಿಲ್ಲ. ಇದು ಅವರ ಸ್ವಭಾವಕ್ಕೆ ಹಿಡಿದ ಕನ್ನಡಿ. ಅಧಿಕಾರದ ಆಸೆಗಿಂತ ಸಿದ್ಧಾಂತಬದ್ಧತೆ ಅವರಿಗೆ ಮುಖ್ಯವಾಗಿತ್ತು.

ಲೋಹಿಯಾ ವಿಚಾರಧಾರೆಗೆ ಮಾರು ಹೋಗಿದ್ದ ಪಟೇಲರು 'ಸಮಾಜವಾದ' ಜಪಿಸುತ್ತ 'ಸಮಾಜವ್ಯಾಧಿ'ಯಾಗಿರುವವರ ಸಾಲಿಗೆ ಎಂದೂ ಸೇರಲಿಲ್ಲ. ಅವರು 'ಆರಾಮ ಕುರ್ಚಿ'ಯ ಅವಕಾಶವಾದಿ ಸಮಾಜವಾದಿಯಾಗಿರಲಿಲ್ಲ. ಇಂದಿರಾ ಗಾಂಧಿಯವರು ದೇಶದ ಮೇಲೆ ಹೇರಿದ ತುರ್ತು ಪರಿಸ್ಥಿತಿಯಲ್ಲಿ ಕಾರಾಗೃಹವನ್ನು ಕಂಡು ಬಂದ ನಾಯಕರಲ್ಲಿ ಇವರೂ ಒಬ್ಬರು.

೧೯೭೮, ೧೯೮೩, ೧೯೮೫ – ಹೀಗೆ ಸತತವಾಗಿ ಮೂರು ಸಲ ಚನ್ನಗಿರಿ ಕ್ಷೇತ್ರದಿಂದ ವಿಧಾನಸಭೆಗೆ ಆರಿಸಿಹೋದ ಪಟೇಲರು ಹೆಗಡೆ ಮಂತ್ರಿಮಂಡಲದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದರು. ೧೯೮೯ರಲ್ಲಿ ಜನತಾದಳ ಪಕ್ಷ ಸ್ಥಾಪಿಸಿ ಅದನ್ನು ಬಲ ಪಡಿಸಿ ಅಧಿಕಾರಕ್ಕೆ ತರಲು ಹೆಗಡೆ – ಬೊಮ್ಮಾಯಿ – ದೇವೇಗೌಡರ ಜೊತೆಗೂಡಿ ಬಹುವಾಗಿ ಶ್ರಮಿಸಿದರು. ಕೆಲಕಾಲದ ನಂತರ ಜನತಾದಳ ಪಕ್ಷದ ರಾಜ್ಯಘಟಕದ ಅಧ್ಯಕ್ಷರೂ ಆದರು.

## ದೇವೇಗೌಡ ಪ್ರಧಾನ ಮಂತ್ರಿ! – ಜೆ. ಎಚ್. ಪಟೇಲ್ ಮುಖ್ಯಮಂತ್ರಿ!

೧೯೯೬ರ ದಿಲ್ಲಿಯ ದಿಢೀರ್ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ದೇವೇಗೌಡರು ಪ್ರಧಾನಿಯಾಗಿ ಹೋದನಂತರ ತೆರವಾದ ಮುಖ್ಯಮಂತ್ರಿಸ್ಥಾನ ತುಂಬಲು ಜೆ.ಎಚ್.ಪಟೇಲ್ ಸಿದ್ಧರಾಗಿದ್ದರು. ಪಟೇಲರು ಕರ್ನಾಟಕದ ಮುಖ್ಯಮಂತ್ರಿಯಾದ ಕೆಲವೇ ದಿನಗಳಲ್ಲಿ ಹೆಗಡೆ – ದೇವೇಗೌಡರ ನಡುವಿನ ವಿರಸ ಉಲ್ಬಣಗೊಂಡಿತು. ಇಬ್ಬರೂ ತಿರುಗಿ ಬಾರದ ಹಾದಿ ಹಿಡಿದಿದ್ದರು. ಜನತಾದಳದ ದೇವೇಗೌಡ, ಸಿ.ಎಂ.ಇಬ್ರಾಹಿಂ ಆ್ಯಂಡ್ ಕಂಪನಿ ಒಂದಾಗಿ ರಾಮಕೃಷ್ಣ ಹೆಗಡೆಯವರನ್ನು ಜನತಾದಳದಿಂದ ಉಚ್ಚಾಟಿಸುವಷ್ಟು ದೂರ ಹೋದರು. ಅದೇ ಇಬ್ರಾಹಿಂ ಈಗ ದೇವೇಗೌಡರ ಪಾಳೆಯ ತ್ಯಜಿಸಿ ಕಾಂಗ್ರೆಸ್ ವೇದಿಕೆ ಹಂಚಿಕೊಳ್ಳುತ್ತಿದ್ದಾರೆ. ರಾಜಕೀಯ ಪ್ರವೇಶಿಸಿದಾಗಿನಿಂದಲೂ ಕಾಂಗ್ರೆಸ್ ವಿರೋಧಿಯಾಗಿದ್ದ ಸಿದ್ಧರಾಮಯ್ಯ ಇದೀಗ ಕಾಂಗ್ರೆಸ್‌ನಿಂದಲೇ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಯಾವಾಗಲೂ ಎಲ್ಲ ಕಡೆ ಸಲ್ಲುವ ಎಂ. ಪಿ. ಪ್ರಕಾಶ ಮಾತ್ರ ತಮ್ಮ ಉಪಮುಖ್ಯಮಂತ್ರಿ ಸ್ಥಾನವನ್ನು ಅತ್ಯಂತ ಅವಮಾನಕಾರಕ ರೀತಿಯಲ್ಲಿ ತಮ್ಮಿಂದ ಕಿತ್ತುಕೊಂಡ ಎಚ್. ಡಿ. ಕುಮಾರಸ್ವಾಮಿ ನೇತೃತ್ವದ ಸಂಪುಟದಲ್ಲಿ 'ಗೃಹಮಂತ್ರಿ' ಯಾಗಿ ಅಧಿಕಾರದ 'ಆನಂದ' ಅನುಭವಿಸುತ್ತಿದ್ದಾರೆ.

ದೇವೇಗೌಡ – ಹೆಗಡೆ ಜಟಾಪಟಿ ಸಮಯದಲ್ಲಿ ಹಾಗೂ ನಂತರ ಪಟೇಲರು ಅತ್ಯಂತ ಸಂಯಮದಿಂದ ವರ್ತಿಸಿದರು. 'ದೇವೇಗೌಡನಿಷ್ಠೆ' ಅನ್ನುವದಕ್ಕಿಂತ 'ಪಕ್ಷ ನಿಷ್ಠೆ'ಯನ್ನು ಮುಂದುವರಿಸಿಕೊಂಡು ಹೋದರು. ಆದರೆ ಅಧಿಕಾರ ಸಿಗದ, ಅಡ್ಡಗೋಡೆಯ ಮೇಲಿನ ಅತೃಪ್ತ ಶಾಸಕರು, ಕೆಲವು ಮಂತ್ರಿಗಳು ಪಟೇಲರ ಕೈಬಿಟ್ಟು ಹೆಗಡೆಯವರು ಹೊಸದಾಗಿ ಸ್ಥಾಪಿಸಿದ 'ನವನಿರ್ಮಾಣ ವೇದಿಕೆ'ಯನ್ನು ಸೇರಿ ಆತಂಕ ಸೃಷ್ಟಿಸಿದರು. ಆದರೆ, ಗಂಡೆದೆಯ ಪಟೇಲರು ಇದಕ್ಕೆಲ್ಲ ಸೊಪ್ಪು ಹಾಕದೇ, ಜಗ್ಗದೇ, ಬಗ್ಗದೇ ಇಂಥ ವಿಷಮ ಪರಿಸ್ಥಿತಿಯಲ್ಲೂ ಸರ್ಕಾರವನ್ನು ಸುಸೂತ್ರವಾಗಿ ಮುನ್ನಡೆಸಿಕೊಂಡು ಹೋದರು.

ಪಟೇಲರು ಕರ್ನಾಟಕದ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ದೆಹಲಿಯಲ್ಲಿ 'ಸಂಪುಟ ದರ್ಜೆ'ಯ ರಾಜ್ಯ ಪ್ರತಿನಿಧಿಯನ್ನು ನೇಮಿಸಿದಾಗ ಟೀಕೆಗಳನ್ನು ಎದುರಿಸಬೇಕಾಯಿತು. ಆಡಳಿತ ವ್ಯವಸ್ಥೆ ಜನರಿಗೆ ಹತ್ತಿರವಾಗಬೇಕೆಂಬ ಉದ್ದೇಶದಿಂದ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ "ಹೊಸ ಜಿಲ್ಲೆಗಳ ರಚನಾಕಾರ್ಯವನ್ನು" ಕೈಗೆತ್ತಿಕೊಂಡರು. ಏಳು ಹೊಸ ಜಿಲ್ಲೆಗಳನ್ನು ನಿರ್ಮಿಸಿ ಪ್ರಶಂಸೆಗೆ ಪಾತ್ರರಾದರು. ಯಾವುದೇ ಮೂಲ ಸೌಕರ್ಯಗಳ ಪೂರ್ವಭಾವಿ ಸಿದ್ಧತೆ ಇಲ್ಲದೇ ಹೊಸ ಜಿಲ್ಲೆಗಳ ರಚನೆ ಮಾಡಿದ್ದನ್ನು ಕೆಲವರು ಟೀಕಿಸಿದ್ದು ಸಹಜವೇ! ಆದರೂ ಹೊಸ ಜಿಲ್ಲೆಗಳೊಂದಿಗೆ ಪಟೇಲರ ಹೆಸರು ಸದಾಕಾಲ ಸ್ಮರಣೆಯಲ್ಲಿರುತ್ತದೆ.

## ಸ್ನೇಹ ಜೀವಿ, ಸೊಗಸುಗಾರ, ಶಿಸ್ತಿನ ಸುಸಂಸ್ಕೃತ ಮನುಷ್ಯ 'ಎಸ್. ಎಂ. ಕೃಷ್ಣ!'

೧೯೯೯ರಲ್ಲಿ ವಿಧಾನಸಭೆಗೆ ಚುನಾವಣೆಗಳು ನಡೆದವು. ಎಸ್. ಎಂ. ಕೃಷ್ಣರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ವಿಜಯದ ಅಲೆಯೇರಿ ಬಹುಮತಗಳಿಸಿತು. ಈ ವೇಳೆಗಾಗಲೇ ಕಾಂಗ್ರೆಸ್ ಪಕ್ಷದಲ್ಲಿ ಎಸ್. ಎಂ. ಕೃಷ್ಣರ ವರ್ಚಸ್ಸು ಸಾಕಷ್ಟು ಬೆಳೆದಿತ್ತು. ಮುಖ್ಯಮಂತ್ರಿ ಪಟ್ಟ ಅವರಿಗೇ ಗಟ್ಟಿಯಾಯಿತು. ನಾಲ್ಕು ದಶಕಗಳ ದೀರ್ಘ ರಾಜಕೀಯ ಪಯಣದ ನಂತರ ಅವರು ಕರ್ನಾಟಕ ರಾಜ್ಯದ ಈ ಉಚ್ಚ ಪದವಿಗೇರಿದರು.

# ಸಮಾಜವಾದಿ ಹಿನ್ನೆಲೆಯ ಸೊಗಸುಗಾರ !

ಮೈಸೂರು ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿ ಹಾಗೂ ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಿಂದ ಬಿ.ಎಲ್. ಡಿಗ್ರಿ ಪಡೆದ ಕೃಷ್ಣ ನಂತರ ಅಮೆರಿಕದ ಯುನಿವರ್ಸಿಟಿಯೊಂದರಿಂದ ಕಾನೂನು ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಸದ್ಯ ಮಹಾರಾಷ್ಟ್ರದ ರಾಜ್ಯಪಾಲರಾಗಿರುವ ಮಾಜಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಸದಭಿರುಚಿಯುಳ್ಳ ಸುಸಂಸ್ಕೃತ ಮನುಷ್ಯ, ಸೊಗಸುಗಾರ. ಎಲ್ಲದರಲ್ಲೂ ಒಂದು ರೀತಿಯ ಶಿಸ್ತು, ಅಚ್ಚುಕಟ್ಟುತನ ಅವರಲ್ಲಿ ಎದ್ದುಕಾಣುತ್ತದೆ.

೧೯೬೨ರಲ್ಲಿ ಮೊದಲಬಾರಿಗೆ ಹುಟ್ಟೂರು ಮದ್ದೂರಿನಿಂದ ಪಿ.ಎಸ್.ಪಿ. ಅಭ್ಯರ್ಥಿಯಾಗಿ ವಿಧಾನಸಭೆಗೆ ಸ್ಪರ್ಧಿಸಿ ಗೆದ್ದು ರಾಜಕೀಯ ರಂಗ ಪ್ರವೇಶಿಸಿದ ಕೃಷ್ಣ ಶ್ರೀಮಂತ ಕುಟುಂಬದಿಂದ ಬಂದವರು. ಆದರೂ ಸಮಾಜವಾದೀ ಹಿನ್ನೆಲೆಯುಳ್ಳವರು. ಕೃಷ್ಣರ ತಂದೆ ಮಲ್ಲಯ್ಯನವರು ೨೭ ವರ್ಷಗಳ ಕಾಲ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಮೊದಲು ಮೈಸೂರು ಜಿಲ್ಲೆಯ ಭಾಗವಾಗಿದ್ದ ಮಂಡ್ಯ ಪ್ರದೇಶ ಪ್ರತ್ಯೇಕ ಜಿಲ್ಲೆಯಾಗುವಂತೆ ಹೋರಾಟ ಮಾಡಿ, ಯಶಸ್ವಿಯಾಗಿ, ಮಂಡ್ಯ ಜಿಲ್ಲೆಯ ಕಾರಣ ಪುರುಷರೆನ್ನಿಸಿಕೊಂಡ ಆ 'ಮಲ್ಲಯ್ಯನವರ' ಮಗ ಇವರು.

೧೯೬೮ರಿಂದ ೧೯೭೨ರ ವರೆಗೆ ಲೋಕಸಭೆಯ ಸದಸ್ಯರಾಗಿದ್ದ ಕೃಷ್ಣ ೧೯೭೨ರಿಂದ ೧೯೭೭ರ ವರೆಗೆ ರಾಜ್ಯವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಆಗಲೇ ಅವರು ಅರಸು ಮಂತ್ರಿಮಂಡಲದಲ್ಲಿ ಕೈಗಾರಿಕೆ, ವಾಣಿಜ್ಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿ ಸೇವೆ ಸಲ್ಲಿಸಿದರು. ೧೯೮೦ರಲ್ಲಿ ಮತ್ತೆ ಲೋಕಸಭೆ ಪ್ರವೇಶ. ೧೯೮೩ರಿಂದ ೧೯೮೪ರ ವರೆಗೆ ಕೇಂದ್ರ ಸರಕಾರದಲ್ಲಿ ಹಣಕಾಸು ಹಾಗೂ ಕೈಗಾರಿಕಾ ಖಾತೆಗಳ ಸಹಾಯಕ ಸಚಿವರಾಗಿ ಕೆಲಸ ಮಾಡಿದರು.

೧೯೮೯ರಲ್ಲಿ ಮತ್ತೆ ವಿಧಾನ ಸಭೆಗೆ ಆಯ್ಕೆಗೊಂಡ ಕೃಷ್ಣ ಮೂರು ವರ್ಷ ವಿಧಾನಸಭೆಯ 'ಸ್ಪೀಕರ್' ಆಗಿದ್ದರು. ನಂತರ ೧೯೯೨ರಿಂದ ೧೯೯೪ರ ವರೆಗೆ ವೀರಪ್ಪ ಮೊಯ್ಲಿ ಸರಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದರು. ೧೯೯೪ರಲ್ಲಿ ಮದ್ದೂರು ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸಿ ಪರಾಭವಗೊಂಡರು. ಕೆಲಕಾಲ ರಾಜಕೀಯ ಅಜ್ಞಾತವಾಸ ಅನುಭವಿಸಿ ಮತ್ತೆ ರಾಜ್ಯಸಭೆಗೆ ಆಯ್ಕೆಗೊಂಡರು. ೧೯೯೪ರ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಿದ ಕಾಂಗ್ರೆಸ್‌ಪಕ್ಷ 'ಸಮರ್ಥ ಸಾರಥಿ'ಯೊಬ್ಬನ ಶೋಧನೆಯಲ್ಲಿತ್ತು. ಕೆಪಿಸಿಸಿ ಅಧ್ಯಕ್ಷ ಪದ ಕೃಷ್ಣರನ್ನು ಅರಸಿಕೊಂಡು ಬಂತು.

೧೯೯೯ರಲ್ಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಬಹುಮತ ಗಳಿಸಿ ಅಧಿಕಾರಕ್ಕೆ ಬರಲು ಎಸ್. ಎಂ. ಕೃಷ್ಣರ ಪಾತ್ರ ಬಲು ಮಹತ್ವದ್ದಾಗಿತ್ತು. ಹೀಗಾಗಿ ಮುಖ್ಯಮಂತ್ರಿಯಾಗಿ ಅವರೇ ಪ್ರಮಾಣವಚನ ಸ್ವೀಕರಿಸಿದರು.

ಕೃಷ್ಣರ ಅಧಿಕಾರಾವಧಿಯಲ್ಲಿ ಇವರು ಎದುರಿಸಿದ ಸವಾಲುಗಳು ಹಲವು. ಕಾಡುಗಳ್ಳ ವೀರಪ್ಪನ್ ವರನಟ ಡಾ॥ ರಾಜಕುಮಾರ್‌ರನ್ನು ಅಪಹರಿಸಿ ಇಟ್ಟುಕೊಂಡದ್ದು ಒಂದು ದೊಡ್ಡ ಘಟನೆ. ಅವರ ಬಿಡುಗಡೆಗೆ ಎಸ್.ಎಂ. ಕೃಷ್ಣ ಪಟ್ಟಪಾಡು ಅಷ್ಟಿಷ್ಟಲ್ಲ. ಡಾ॥ ರಾಜಕುಮಾರ್‌ರ 'ಪ್ರಾಣ' ಹಾಗೂ ತಮ್ಮ 'ಕುರ್ಚಿ' ಎರಡೂ ಉಳಿಸಿಕೊಳ್ಳುವುದು ಅವರಿಗೆ ಮುಖ್ಯವಾಗಿತ್ತು. ತಮಿಳುನಾಡಿನೊಡನೆ ಕಾವೇರಿ ನೀರು ಹಂಚಿಕೆ ವಿವಾದ ಇವರು ಎದುರಿಸಿದ ಇನ್ನೊಂದು ಸವಾಲು. ಈ ಎರಡೂ ಸಂದರ್ಭಗಳಲ್ಲಿ ಸುಪ್ರೀಂಕೋರ್ಟ್‌ನಿಂದ ಪದೇ ಪದೇ 'ಛೀಮಾರಿ' ಹಾಕಿಸಿಕೊಳ್ಳುವ ದುರದೃಷ್ಟ ಇವರದಾಗಿತ್ತು. ಅಂತೂ ಕೊನೆಗೊಮ್ಮೆ ವೀರಪ್ಪನ್ ಬಂಧನದಿಂದ ರಾಜಕುಮಾರ್ ಬಿಡುಗಡೆಯಾಗಲು ಅದೆಷ್ಟು 'ಬೆಲೆ' ತೆತ್ತರೊ ಗೊತ್ತಿಲ್ಲ. ಆದರೆ, ಕುರ್ಚಿ ಉಳಿಸಿಕೊಂಡು ನಿಟ್ಟುಸಿರು ಬಿಟ್ಟರು!.

ರೋಗಗ್ರಸ್ತವಾಗಿದ್ದ ಬೆಂಗಳೂರು ನಗರಕ್ಕೆ ಕಾಯಕಲ್ಪ ಚಿಕಿತ್ಸೆ ನೀಡಿ ಅದನ್ನು 'ಸಿಂಗಾಪೂರ'ವಾಗಿ ಪರಿವರ್ತಿಸುವ ಪಣತೊಟ್ಟು ಕಾರ್ಯಪ್ರವೃತ್ತರಾದ ಕೃಷ್ಣ ಐದು ವರ್ಷಗಳಲ್ಲಿ ಅದನ್ನು ಸಾಧಿಸುವ ಗುರಿ ಹೊಂದಿದ್ದರು. ಬಿ.ಎಂ.ಐ.ಸಿ. ಯೋಜನೆಗೆ ಸಂಬಂಧಿಸಿದ 'ಒಳ' ವ್ಯವಹಾರಗಳು, ಅಳಿಯ ಸಿದ್ಧಾರ್ಥರ ಹಗರಣಗಳು, ಇವರ ಬಲಗೈ ಬಂಟ ಸಹಕಾರ ಮಂತ್ರಿ ಡಿ.ಕೆ.ಶಿವಕುಮಾರ್‌ರ ಅಧಿಕಾರ ದುರುಪಯೋಗದ ಕಥೆಗಳು ಎಸ್. ಎಂ. ಕೃಷ್ಣರನ್ನು ಒಳ್ಳೆಯ ಬೆಳಕಿನಲ್ಲಿ ತೋರಿಸಲಿಲ್ಲ. 'ಕೃಷ್ಣಾವತಾರ' ಕೊನೆಗೊಂಡಿತ್ತು. ೨೦೦೪ರ ವಿಧಾನಸಭಾ ಚುನಾವಣೆಲ್ಲಿ ಕಾಂಗ್ರೆಸ್ ಬಹುಮತ ಕಳೆದುಕೊಂಡಿತು. ಬಿ.ಜೆ.ಪಿ, ಕಾಂಗ್ರೆಸ್ ಹಾಗೂ ಜೆ.ಡಿ.ಎಸ್.ಗಳ ಪೈಕಿ ಬಿ.ಜೆ.ಪಿ. ಅತ್ಯಧಿಕ ಸ್ಥಾನಗಳಿಸಿ ಮೊದಲ ಸ್ಥಾನದಲ್ಲಿತ್ತು. ತಾವು ಮಾತ್ರ 'ಸೆಕ್ಯುಲರ್' ಎಂದು ಭಾವಿಸಿರುವ ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಪಕ್ಷಗಳು ಹೇಗಾದರೂ ಮಾಡಿ 'ಬಿ.ಜೆ.ಪಿ.'ಗೆ ಅಧಿಕಾರ ದಕ್ಕದಂತೆ ಮಾಡಲು 'ಉನ್ನತ ಮಟ್ಟದ' ಮಾತುಕತೆಯಲ್ಲಿ ತೊಡಗಿದವು. ಯಾರೊಂದಿಗೂ ಅಧಿಕಾರ ಹಂಚಿಕೊಳ್ಳಲು ಇಷ್ಟಪಡದ ಕಾಂಗ್ರೆಸ್ ಮೊದಲಿನಿಂದಲೂ 'ಸಮ್ಮಿಶ್ರ ಸರಕಾರ'ದ ಪರವಾಗಿರಲಿಲ್ಲ. ಆದರೆ, ಬದಲಾದ ದೇಶದ ರಾಜಕೀಯ ಪರಿಸ್ಥಿತಿಯ ಅರಿವು ಕಾಂಗ್ರೆಸ್ ಪಕ್ಷದ ನಿಲುವನ್ನು ಬದಲಿಸಿತ್ತು. ಕೇಂದ್ರದಲ್ಲಿ, ಜಮ್ಮು-ಕಾಶ್ಮೀರ, ಮಹಾರಾಷ್ಟ್ರಗಳಲ್ಲಿ ಕಾಂಗ್ರೆಸ್ ಪಕ್ಷ ಆಗಲೇ ಸಮ್ಮಿಶ್ರ ಸರಕಾರಗಳ ಪಾಲುದಾರ ಪಕ್ಷವಾಗಿತ್ತು. ಕರ್ನಾಟಕದಲ್ಲೂ ಜೆ.ಡಿ.ಎಸ್.ದೊಂದಿಗೆ ಅಂಥ ಪ್ರಯೋಗಕ್ಕೆ ಕಾಂಗ್ರೆಸ್ ಸಿದ್ಧವಾಯಿತು.

ಆದರೆ, ಮುಖ್ಯಮಂತ್ರಿ ಯಾರು ಆಗಬೇಕು? ಕಾಂಗ್ರೆಸ್ ಕಡೆಯವರೋ? ಅಥವಾ ಜೆ.ಡಿ.ಎಸ್. ಕಡೆಯವರೋ? ಕಾಂಗ್ರೆಸ್ ಜೆ.ಡಿ.ಎಸ್.ಗಿಂತ ಹೆಚ್ಚು ಸ್ಥಾನಗಳಿಸಿತ್ತು. ಹೀಗಾಗಿ ಮುಖ್ಯಮಂತ್ರಿಯಾಗಬೇಕಾದವರು ತಮ್ಮ ಪಕ್ಷದ ಅಭ್ಯರ್ಥಿ ಎಂದು ಪಟ್ಟು ಹಿಡಿಯಿತು. ಇದು ಮಹಾರಾಷ್ಟ್ರದ ಮಾದರಿಯಾಯಿತು. ಆದರೆ, ಜಮ್ಮು-ಕಾಶ್ಮೀರ 'ಮಾದರಿ' ಅನುಸರಿಸಿ ನಮ್ಮ ಪಕ್ಷದ ಅಭ್ಯರ್ಥಿಯೇ ಮುಖ್ಯಮಂತ್ರಿಯಾಗಬೇಕೆಂದು ಜೆ.ಡಿ.ಎಸ್. ತನ್ನ ಹಕ್ಕು ಮುಂದೆಮಾಡಿತು. ಜೆ.ಡಿ.ಎಸ್. ಪಕ್ಷದ ವತಿಯಿಂದ ಸಿದ್ಧರಾಮಯ್ಯ 'ಮುಖ್ಯಮಂತ್ರಿ'ಯಾಗಲು ತಯಾರಾಗಿ ನಿಂತಿದ್ದರು. ಕಾಂಗ್ರೆಸ್ ಪಾಳೆಯದಲ್ಲಿ 'ಧರ್ಮಸಿಂಗ್ – ಖರ್ಗೆ' ಇಬ್ಬರೂ ಜಯಮಾಲೆಗೆ ಕೊರಳೊಡ್ಡಿ ನಿಂತಿದ್ದರು. ಅಂತೂ ಕೊನೆಗೆ 'ರಾಜಿ–ಕಬೂಲಿ–ಹೊಂದಾಣಿಕೆ'ಯಾಗಿ ನಿರ್ಣಯ ಹೊರಬಿತ್ತು. ಕಾಂಗ್ರೆಸ್ಸಿನ ಧರ್ಮಸಿಂಗ್ – ಜೆ.ಡಿ.ಎಸ್.ನ ಸಿದ್ಧರಾಮಯ್ಯ ಅನುಕ್ರಮವಾಗಿ, 'ಮುಖ್ಯಮಂತ್ರಿ' 'ಉಪಮುಖ್ಯಮಂತ್ರಿಯಾಗಿ' ಪ್ರಮಾಣವಚನ ಸ್ವೀಕರಿಸಿದರು.

## ಸಮ್ಮಿಶ್ರ ಸರಕಾರದ ಸಾರಥಿ – ಧರ್ಮಸಿಂಗ್ !

ಎಂಟುಸಾರೆ ವಿಧಾನಸಭೆಗೆ ಚುನಾಯಿತರಾದ 'ದಾಖಲೆ' ಹಾಗೂ ಅಲ್ಪಸಂಖ್ಯಾತ ವರ್ಗದವರೆಂಬ 'ಕಾರ್ಡ್' ಹಿಡಿದುಕೊಂಡು ಮುಖ್ಯಮಂತ್ರಿ ಪಟ್ಟ ಕಟ್ಟಿಸಿಕೊಂಡ ಧರ್ಮಸಿಂಗ್ ಮೃದುಮಾತಿನ ಸೌಮ್ಯಸ್ವಭಾವದ ವ್ಯಕ್ತಿ. ಅವರು ಇಪ್ಪತ್ತು ತಿಂಗಳು ಮುಖ್ಯಮಂತ್ರಿಯಾಗಿ 'ಅಧಿಕಾರ'ದಲ್ಲಿ ಉಳಿದದ್ದೂ ಇದೇ ಕಾರಣದಿಂದ! ಅತ್ತ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಗಾಂಧಿಗೆ ಸಂಪೂರ್ಣ 'ನಿಷ್ಠೆ' ತೋರಬೇಕು. ಇತ್ತ ಜೆ.ಡಿ.ಎಸ್.ನ 'ಸುಪ್ರೀಮೊ' ದೇವೇಗೌಡರು ದಿನನಿತ್ಯ ಕೊಡುತ್ತಿದ್ದ ಸೂಚನೆ, ಸಲಹೆ, ನಿರ್ದೇಶನ, ಕಿರುಕುಳ 'ಎಚ್ಚರಿಕೆ'ಗಳನ್ನು ಪಾಲಿಸಬೇಕು! 'ಸರಕಾರವನ್ನು ಧರ್ಮಸಿಂಗರ ಹೆಸರಿನಲ್ಲಿ ದೇವೇಗೌಡರೇ ನಡೆಸುತ್ತಿದ್ದಾರೆ.' ಎಂಬ ಮಾತೂ ಆಗಾಗ ಕೇಳಿ ಬರುತ್ತಿತ್ತು. ಉಪಮುಖ್ಯಮಂತ್ರಿಯಾಗಿ ಹಣಕಾಸು ಖಾತೆ ಹೊಂದಿದ್ದ ಸಿದ್ಧರಾಮಯ್ಯನವರಿಗೆ ತಾವು 'ಮುಖ್ಯಮಂತ್ರಿ'ಯಾಗಲಿಲ್ಲ ಎಂಬ ಕೊರಗಿನ ಜತೆಗೆ – ಹೀಗಾಗಲು ಇದರಲ್ಲಿ ದೇವೇಗೌಡರ ಪರೋಕ್ಷ 'ಕೈವಾಡ'ವೂ ಇದೆಯೆಂಬ ಶಂಕೆ ಮೂಡತೊಡಗಿತ್ತು.

'ಜೆ.ಡಿ.ಎಸ್' ಅಂದರೆ, 'ಜನತಾ ದಳ ಆ್ಯಂಡ ಸನ್ಸ್' – ತಂದೆ ಮಕ್ಕಳ ಪಕ್ಷ' – ದೇವೇಗೌಡರು ಕುಟುಂಬ ರಾಜಕೀಯ ಮಾಡುತ್ತಿದ್ದಾರೆ' – ಎಂದು ವಿರೋಧಿ ನಾಯಕರು ಟೀಕಿಸಿದರೆ, ಗೌಡರ ಪರವಾಗಿ ಶುಲ್ಕರಹಿತ ವಕಾಲತ್ತು

ವಹಿಸಿಕೊಂಡು "ರಾಣಿಗಿಂತ ಹೆಚ್ಚು ನಿಷ್ಠೆ" ಪ್ರದರ್ಶಿಸುತ್ತಿದ್ದ ಜೆ.ಡಿ.ಎಸ್ ಪ್ರಮುಖರಲ್ಲಿ ಸಿದ್ಧರಾಮಯ್ಯನವರೂ ಒಬ್ಬರಾಗಿದ್ದರು. ಇನ್ನಿತರರೆಂದರೆ ಪಿ.ಜಿ.ಆರ್ ಸಿಂಧ್ಯ, ಎಂ.ಪಿ. ಪ್ರಕಾಶ್, ಬಸವರಾಜ ಹೊರಟ್ಟಿ ಮುಂತಾದವರು.

ರಾಜಕೀಯದಲ್ಲಿ ಶಾಶ್ವತ ಮಿತ್ರರಾಗಲಿ, ಶತ್ರುಗಳಾಗಲಿ ಇರುವುದಿಲ್ಲ ಎಂಬ ಸತ್ಯ ಹೊರಬರಲು ತಡವಾಗಲಿಲ್ಲ. ಸಿದ್ಧರಾಮಯ್ಯನವರು ತಮ್ಮ ರಾಜಕೀಯ ಬಲಸಂವರ್ಧನೆಗೆ ಮುಂದಾದರು. ದೇವೇಗೌಡರ ಮನಸ್ಸಿನ ವಿರುದ್ಧ, ಕೆಲವು ಕಾಂಗ್ರೆಸ್ ನಾಯಕರ ಕುಮ್ಮಕ್ಕಿನಿಂದ ಅವರು ಹುಬ್ಬಳ್ಳಿಯಲ್ಲಿ ಜರುಗಿದ ಬೃಹತ್ 'ಅಹಿಂದ' (ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು) ಸಮ್ಮೇಳನದಲ್ಲಿ ಮಹಾ ನಾಯಕನ ವರಸೆಯಲ್ಲಿ ಎದ್ದು ಕಾಣುವಂತೆ ಭಾಗವಹಿಸಿ ಮಿಂಚಿದರು. ಆಗಲೇ ದೇವೇಗೌಡರು ಸಿದ್ಧರಾಮಯ್ಯನವರ 'ಸಂಹಾರ'ಕ್ಕೆ 'ಸ್ಕೆಚ್' ಹಾಕಿದರು. ದಿನದಿಂದ ದಿನಕ್ಕೆ ದೇವೇಗೌಡರು ಹಾಗೂ ಸಿದ್ಧರಾಮಯ್ಯನವರ ನಡುವಿನ ಕಂದರ ಹೆಚ್ಚುತ್ತ ಹೋಯಿತು. ಈ ಭಿನ್ನಾಭಿಪ್ರಾಯ ಜೆ.ಡಿ.ಎಸ್.ನಿಂದ ಸಿದ್ಧರಾಮಯ್ಯನವರ ಉಚ್ಚಾಟನೆ – ಹಾಗೂ ಉಪಮುಖ್ಯಮಂತ್ರಿ ಸ್ಥಾನಕ್ಕೆ ಅವರ ರಾಜೀನಾಮೆಯಲ್ಲಿ ಪರ್ಯವಸಾನಗೊಂಡು, ತಾರ್ಕಿಕ ಅಂತ್ಯ ಕಂಡಿತು. ಈ ಘಟನೆ ನಡೆದ ಕೆಲದಿನಗಳ ನಂತರ ಸ್ವತಃ ಮುಖ್ಯಮಂತ್ರಿ ಧರ್ಮಸಿಂಗ್ ಪಾಲುದಾರ ಪಕ್ಷ ಜೆ.ಡಿ.ಎಸ್. ಕಡೆಯಿಂದ ಭಾರಿ 'ಬಾಂಬ್‌ಶೆಲ್' ಎದುರಿಸಬೇಕಾಯಿತು.

ಅದೊಂದು ದಿನ ಜೆ.ಡಿ.ಎಸ್.ನ ನಾಲ್ವತ್ತು ಶಾಸಕರು ಎಚ್. ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ದಿಢೀರ್ ಬಂಡೆದ್ದು, ಧರ್ಮಸಿಂಗ್ ಸರಕಾರಕ್ಕೆ ತಮ್ಮ ಬೆಂಬಲ ಹಿಂತೆಗೆದುಕೊಂಡಿರುವುದಾಗಿ ಘೋಷಿಸಿದರು. ಹಾಗೆಂದು ರಾಜ್ಯಪಾಲರನ್ನು ಭೆಟ್ಟಿಯಾಗಿ ಲಿಖಿತ ಹೇಳಿಕೆಯನ್ನೂ ಸಲ್ಲಿಸಿದರು. ಈ ಬೆಳವಣಿಗೆಯಿಂದ ದೇವೇಗೌಡರಿಗೇ 'ಶಾಕ್' ಆಯಿತಂತೆ! ಹಾಗೆಂದು ಅವರು 'ನಟನೆ' ಮಾಡಿದರೆಂಬ ಸತ್ಯ ಕ್ರಮೇಣ ಸ್ಪಷ್ಟವಾಗತೊಡಗಿತು. ಬಂಡೆದ್ದ ನಾಲ್ವತ್ತು ಶಾಸಕರನ್ನು ಪಕ್ಷದಿಂದ ಅಮಾನತ್ತುಗೊಳಿಸಿರುವ ಪತ್ರವನ್ನು ಸ್ಪೀಕರ್‌ಗೆ ಕಳಿಸುವ ಬದಲು ಮುಂದಾಲೋಚನೆ(?)ಯಿಂದ ರಾಜ್ಯಪಾಲರಿಗೆ ಕಳಿಸಿದರು!

ಸಿದ್ಧರಾಮಯ್ಯನವರ ಉಚ್ಚಾಟನೆಯ ನಂತರ 'ಉಪಮುಖ್ಯಮಂತ್ರಿ' ಪಟ್ಟ ಗಿಟ್ಟಿಸಿದ್ದ ಹಾಗೂ ಜೆ.ಡಿ.ಎಸ್. ಶಾಸಕಾಂಗ ಪಕ್ಷದ ನಾಯಕರೂ ಆಗಿದ್ದ ಎಂ. ಪಿ. ಪ್ರಕಾಶ್ ಸಹ ಅತಂತ್ರ ಸ್ಥಿತಿ ಅನುಭವಿಸುವಂತಾಯಿತು. ಅವರ ಸ್ಥಾನ–ಮಾನ ಎರಡೂ ಹೋಗಿದ್ದವು! ಏಕೆಂದರೆ ದಿಢೀರ್ ಬದಲಾದ ಸನ್ನಿವೇಶದಲ್ಲಿ ಎಚ್. ಡಿ. ಕುಮಾರಸ್ವಾಮಿ 'ಮುಖ್ಯಮಂತ್ರಿ'ಯಾಗಿ ಹಾಗೂ ಬಿ.ಜೆ.ಪಿ.ಯ ಬಿ. ಎಸ್. ಯಡಿಯೂರಪ್ಪ 'ಉಪಮುಖ್ಯಮಂತ್ರಿ'ಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

ಇತ್ತ ಮಗನ 'ಬಂಡಾಯ'ದಿಂದ 'ಶಾಕ್' ಆಗಿ, ಅಸ್ವಸ್ಥರಾಗಿ, ಊಟ-ನಿದ್ರೆ ಬಿಟ್ಟು, ಮಗನಿಗೆ 'ಶಾಪ' ಹಾಕುತ್ತಿದ್ದ ಗೌಡರು ದಿನಗಳೆದಂತೆ ರಾಗ ಬದಲಿಸತೊಡಗಿದರು. 'ಕಾಂಗ್ರೆಸ್‌ಪಕ್ಷ ತಮ್ಮ ಪಕ್ಷ ಜೆ.ಡಿ.ಎಸ್ ಅನ್ನು ನಾಶಮಾಡಲು ಸಂಚು ಹೂಡಿತ್ತು.' ಎಂಬ ತಮ್ಮ ಪುತ್ರನ ಆರೋಪವನ್ನೆ ಪುನರುಚ್ಚರಿಸುತ್ತ - ಬಿ.ಜೆ.ಪಿ. ಜೊತೆಗಿನ 'ಸಖ್ಯ'ವನ್ನು ಆಗಾಗ ಮೆಲುದನಿಯಲ್ಲಿ ಖಂಡಿಸುತ್ತ ತಮ್ಮ 'ಸೆಕ್ಯುಲರ್' ಪ್ರತಿಬಿಂಬವನ್ನು ಪ್ರದರ್ಶಿಸುತ್ತ - ಕೊನೆಗೆ "ತಮ್ಮ ಮಗ ಮಾಡಿದ್ದೇ ಸರಿ - ಅವನಿಂದಾಗಿ ಪಕ್ಷ ಉಳಿಯಿತು" ಎಂಬ ನಿರ್ಣಾಯಕ ಹಂತಕ್ಕೆ ಬಂದು ತಲುಪಿದರು! ಆರಂಭದಲ್ಲಿ "ನನ್ನ ತಂದೆಯ ಟೀಕೆ, ಮೂದಲಿಕೆಗಳನ್ನು 'ಆಶೀರ್ವಾದ'ವೆಂದೇ ಸ್ವೀಕರಿಸುವೆ, ಒಳ್ಳೆಯ ಕೆಲಸ ಮಾಡಿ ಅವರಿಂದ ಶಹಬ್ಬಾಷ್‌ಗಿರಿ' ಪಡೆಯುವೆ" ಎಂದು ಪದೇ ಪದೇ ಹೇಳುತ್ತಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ಈಗ ಅಪ್ಪನ 'ಅಪ್ಪಟ' ಆಶೀರ್ವಾದದ 'ಶ್ರೀರಕ್ಷೆಯೇ' ಪ್ರಾಪ್ತವಾಗಿತ್ತು.

ಮುಖ್ಯಮಂತ್ರಿ ಕುಮಾರಣ್ಣನ ಜೊತೆ ಸೇರದೇ 'ದೊಡ್ಡಗೌಡರ' 'ನೆರಳಿ'ನಲ್ಲಿಯೇ ಉಳಿದುಕೊಂಡಿದ್ದ ಎಂ.ಪಿ. ಪ್ರಕಾಶ್, ಪಿ.ಜಿ.ಆರ್. ಸಿಂಧ್ಯ, ಎಚ್.ಡಿ.ರೇವಣ್ಣ ಅಧಿಕಾರವಿಲ್ಲದೆ ಚಡಪಡಿಸತೊಡಗಿದ್ದರು. ಎಂ.ಪಿ.ಪ್ರಕಾಶ್, ರೇವಣ್ಣ ಕುಮಾರಸ್ವಾಮಿ ಮಂತ್ರಿ ಮಂಡಲ ಸೇರುವ ಮುಹೂರ್ತ ಬಂದೇ ಬಿಟ್ಟಿತು! ರಾಜಕೀಯದಲ್ಲಿ 'ಮಾನ'-'ಮರ್ಯಾದೆ' 'ಪ್ರತಿಷ್ಠೆ' ಅಂತ ಕೂತರೆ ಅಧಿಕಾರ ಸಿಗಬೇಕಲ್ಲ! ಸಿಂಧ್ಯ ಮಾತ್ರ ಇಬ್ಭಾಗಗೊಂಡ ಜೆ.ಡಿ.ಎಸ್.ದ ಸುರೇಂದ್ರ ಮೋಹನರ ಬಣದಲ್ಲಿಯೇ ಉಳಿದರು. ಒಂದು ಕಾಲದಲ್ಲಿ ದೇವೇಗೌಡರ 'ಪರಮನಿಷ್ಠ' ಅನುಯಾಯಿ ಆಗಿದ್ದು ಈಗ ಅವರಿಂದ ದೂರಾಗಿ ಅವರ ಜನ್ಮ ಜಾಲಾಡುತ್ತಿದ್ದಾರೆ. ರಾಜಕೀಯದಲ್ಲಿ ಶಾಶ್ವತ ಮಿತ್ರರಾಗಲಿ - ಶತ್ರುಗಳಾಗಲಿ ಇರುವುದಿಲ್ಲ - ಶಾಶ್ವತವಾಗಿರುವುದು ಸ್ವಂತ ಹಿತಾಸಕ್ತಿ ಮಾತ್ರ!

## 'ಕರ್ನಾಟಕ ಅಭಿವೃದ್ಧಿ ರಂಗ'ದ ಮುಖ್ಯಮಂತ್ರಿ ಕುಮಾರಸ್ವಾಮಿ !

'ತಮ್ಮ ಹಿರಿಯ ಪುತ್ರ ರೇವಣ್ಣನನ್ನು ಮುಖ್ಯಮಂತ್ರಿ ಮಾಡಬೇಕೆಂಬ ಉತ್ಕಟೇಚ್ಛೆ ದೇವೇಗೌಡರದಾಗಿತ್ತು' ಎಂಬ ರಹಸ್ಯವನ್ನು ಕೆಲವು ಪತ್ರಿಕೆಗಳು ಹೊರಹಾಕಿವೆ. ಅದೇನೇ ಇರಲಿ, ಈಗ ಮುಖ್ಯಮಂತ್ರಿಯಾದವರು ಅವರ ಮಗನೇ ಅಲ್ಲವೇ? ಜೆ.ಡಿ.ಎಸ್. ಅಂದರೆ ತಂದೆ ಮಕ್ಕಳ ಪಕ್ಷ ಎಂಬ ಆಪಾದನೆಗೆ ಪುರಾವೆ ಏಕೆ ಬೇಕು? ಅದು ಮೇಲೇಯೇ ಕಾಣುತ್ತದಲ್ಲ!

ನೆಹರೂ ಮನೆತನದ ವಂಶಾಡಳಿತವನ್ನು ಸಮರ್ಥಿಸುವ ಮಣಿಶಂಕರ್ ಅಯ್ಯರ್‌ರಂಥವರು – 'ಡೈನ್ಯಾಸ್ಟಿಕ್ ಡೆಮೊಕ್ರಸಿ' – (ರಾಜ) ವಂಶಾವಳಿಯ ಪ್ರಜಾ–ಪ್ರಭುತ್ವದ ಬಗೆಗೆ ಮಾತನಾಡುವುದನ್ನು ಕೇಳಿದ್ದೇವೆ. ಇತರ ರಾಜಕೀಯ ಪಕ್ಷಗಳಲ್ಲೂ – ಇದು ಸಿ.ಪಿ.ಎಂ, ಸಿ.ಪಿ.ಐ, ಬಿ.ಜೆ.ಪಿ.ಗಳಲ್ಲಿ ಅಪರೂಪ – ತಂದೆ ಮಕ್ಕಳು, ಅಳಿಯಂದಿರ ಕುಟುಂಬ ರಾಜಕೀಯವನ್ನು ನೋಡಬಹುದಾಗಿದೆ !

೧೯೫೬ರ ನವಂಬರ್ ೧ ರಂದು ಹೊಸ ರಾಜ್ಯೋದಯವಾದಾಗ ಇನ್ನೂ ಹುಟ್ಟಿರದೇ ಇದ್ದ ವ್ಯಕ್ತಿಯೊಬ್ಬರು 'ಸುವರ್ಣ ಕರ್ನಾಟಕ ವರ್ಷಾಚರಣೆ'ಯ ಸಂದರ್ಭದಲ್ಲಿ 'ಜೆ.ಡಿ.ಎಸ್., ಬಿ.ಜೆ.ಪಿ.' ಮೈತ್ರಿಕೂಟ – 'ಕರ್ನಾಟಕ ಅಭಿವೃದ್ಧಿರಂಗ' ಸರಕಾರದ ಸಾರಥ್ಯ ವಹಿಸಿರುವುದು ಈ ರಾಜ್ಯದ ಐವತ್ತು ವರ್ಷಗಳ ರಾಜಕೀಯ ಸ್ಥಿತ್ಯಂತರಗಳು, ತಿರುವುಗಳು, ಘಟನಾವಳಿಗಳ 'ಕ್ಲೈಮ್ಯಾಕ್ಸ್ ದೃಶ್ಯ' – 'ಉತ್ತುಂಗ ಸನ್ನಿವೇಶ' ಎನ್ನಬಹುದಾಗಿದೆ. ಈ ಸಂಗತಿಯನ್ನು ಬೇಕಾದರೆ ಪ್ರಜಾತಂತ್ರದ ಪವಾಡ ಎನ್ನಿರಿ ಅಥವಾ ಪ್ರಹಸನ ಎನ್ನಿರಿ! ತತ್ವ ಸಿದ್ಧಾಂತಗಳಿಗೆ ಎಳ್ಳು ನೀರು ಬಿಡಲಾಗಿದೆ. 'ಅಭಿವೃದ್ಧಿ'ಯ ಹೆಸರಿನಲ್ಲಿ 'ಅಧಿಕಾರ' ವಶಪಡಿಸಿಕೊಳ್ಳಲಾಗಿದೆ. ಸ್ವಜನ ಪಕ್ಷಪಾತ, ಭ್ರಷ್ಟಾಚಾರದ ಪ್ರಕರಣಗಳು ದಿನನಿತ್ಯ ವರದಿಯಾಗುತ್ತಿವೆ. ಬಡವರು, ರೈತರು, ಮಹಿಳೆಯರ ಶೋಷಣೆ ತಪ್ಪಿಲ್ಲ. ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರನ್ನು 'ವೋಟ್‌ಬ್ಯಾಂಕ್'ಗಳಾಗಿ ಪರಿವರ್ತಿಸಲಾಗಿದೆ. ಭಯೋತ್ಪಾದಕರು, ಉಗ್ರಗಾಮಿಗಳು, ನಕ್ಸಲೀಯರು, ಮಾವೋವಾದಿಗಳು, ಜನಮನದಲ್ಲಿ ಭಯ ಮತ್ತು ಅಭದ್ರತೆಯ ಭಾವನೆ ಹುಟ್ಟುಹಾಕಿದ್ದಾರೆ. ನೆಲ, ಜಲ, ನುಡಿ, ವಿವಾದಗಳು ಹಾಗೇ ಇವೆ.

ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ ಹೇಗಿದ್ದರು? ಸುವರ್ಣ ಕರ್ನಾಟಕದ ಈಗಿನ ಮುಖ್ಯಮಂತ್ರಿ ಹೇಗಿದ್ದಾರೆ? ಅರ್ಧ ಶತಮಾನದಲ್ಲಿ ರಾಜಕೀಯ ಮೌಲ್ಯಗಳು ಎಷ್ಟೊಂದು ಬದಲಾಗಿ ಬಿಟ್ಟಿವೆಯಲ್ಲ! ಕೃಷ್ಣಾ ಕಾವೇರಿಯಲ್ಲಿ ಸಾಕಷ್ಟು ನೀರು ಹರಿದುಹೋಗಿದೆ. 'ಕೋಮುವಾದಿ ಪಕ್ಷ' ಎಂಬ ಮುದ್ರೆ ಹಾಕಿಸಿಕೊಂಡಿರುವ 'ಭಾಜಪ' ದೊಂದಿಗೆ 'ಸೆಕ್ಯುಲರ್' ಎಂಬ ಹಣೆಪಟ್ಟಿ ಹಚ್ಚಿಕೊಂಡಿರುವ 'ಜನತಾದಳ' 'ಕೂಡಿಕೆ' ಮಾಡಿಕೊಂಡು ಸರಕಾರ ರಚಿಸಿದ್ದು ಯಾವ ಘನ ಉದ್ದೇಶಕ್ಕಾಗಿ? ರಾಜಕೀಯದಲ್ಲಿ 'ಅಧಿಕಾರ' ಹಂಚಿಕೊಳ್ಳ ಬಯಸುವವರು ಒಂದೇ ಹಾಸುಗೆಯಲ್ಲಿ ಹಂಚಿಕೊಳ್ಳುವ ಹಲವರನ್ನು ವಾರಾಂಗನೆಯರಂತಾಗಲು ಸದಾ ಸಿದ್ಧರಿರುತ್ತಾರೆಂಬುದು ಖಚಿತವಾಯಿತು.

# ದೋಸ್ತಿ ಸರಕಾರದ ಇಪ್ಪತ್ತು ತಿಂಗಳ ಸಾಧನೆ

ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರಕಾರ ಹೊಸ ಹುರುಪಿನಿಂದ ಕೆಲಸ ಶುರು ಮಾಡಿದ್ದಂತೂ ನಿಜ. ಗಡಿ ಜಿಲ್ಲೆ ಬೆಳಗಾವಿಯಲ್ಲಿ ವಿಧಾನ ಮಂಡಳದ ಅಧಿವೇಶನವನ್ನು ಯಶಸ್ವಿಯಾಗಿ ನಡೆಸಿ ಶಹಬ್ಬಾಷ್‌ಗಿರಿ ಪಡೆದದ್ದೂ ನಿಜ! ವಿಶ್ವಕನ್ನಡ ಸಮ್ಮೇಳನವನ್ನು ನಡೆಸಲು ಸಿದ್ಧತೆ ಮಾಡಿದ್ದು ನಿಜ! ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್‌ಪೀಠ ಸ್ಥಾಪನೆಯ ಬೇಡಿಕೆಯನ್ನು ಈಡೇರಿಸಿ ಧಾರವಾಡ ಹಾಗೂ ಗುಲ್ಬರ್ಗಾಗಳಲ್ಲಿ ಸಂಚಾರಿ ಹೈಕೋರ್ಟ ಪೀಠಗಳನ್ನು ಸ್ಥಾಪಿಸಿದ್ದೂ ನಿಜ! 'ಜನತಾ ದರ್ಶನ' ಕಾರ್ಯಕ್ರಮ, ಗ್ರಾಮವಾಸ್ತವ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡು 'ಅಹಿಂದ' ಜನಾಂಗಗಳ ಮನೆಯಲ್ಲಿ ಮಲಗಿ, ಊಟಮಾಡಿ, ಉಪಾಹಾರ ಸ್ವೀಕರಿಸಿ ಹೊಸಶೈಲಿಯ ಜನಸಂಪರ್ಕ ಸಾಧಿಸಿದ್ದೂ ನಿಜ!

ಆದರೆ, ಲೋಕಾಯುಕ್ತ ಸಂಸ್ಥೆಗೆ ಹೆಚ್ಚಿನ ಅಧಿಕಾರ ನೀಡುವ ಭರವಸೆ ಹಾಗೇ ಉಳಿದಿದೆ. ಸರೋಜಿನಿ ಮಹಿಷಿ ವರದಿ, ಡಾ॥ ನಂಜುಂಡಪ್ಪ ವರದಿ, ಮಹಾಜನ್ ವರದಿಯ ಶಿಫಾರಸ್ಸುಗಳು ಜಾರಿಗೊಳ್ಳುವ ಹಾಗೆ ತನ್ನ 'ಇಚ್ಛಾಶಕ್ತಿ'ಯನ್ನು ರಾಜ್ಯ ಸರಕಾರ ಪ್ರಕಟಿಸಬೇಕಾಗಿದೆ. ಐವತ್ತು ವರ್ಷಗಳ ನಂತರವೂ ನಾಡಿನ ಪ್ರಜೆಗಳಲ್ಲಿ ನಾವೆಲ್ಲ ಒಂದಾಗಿದ್ದೇವೆ ಎಂಬ ಭಾವನೆ ಮೂಡಿದೆಯೇ? ಭರವಸೆ ಹುಟ್ಟಿದೆಯೇ? ನಮ್ಮ ಜನ ಈಗಲೂ ತಮ್ಮನ್ನು 'ಮುಂಬೈ ಕರ್ನಾಟಕ' 'ಹೈದರಾಬಾದ ಕರ್ನಾಟಕ' 'ಮದ್ರಾಸ ಕರ್ನಾಟಕ' 'ಕೊಡಗು ಕರ್ನಾಟಕ' 'ಮೈಸೂರು ಕರ್ನಾಟಕ'ದವರೆಂದೇ ಗುರುತಿಸಿಕೊಳ್ಳಲು ಏನು ಕಾರಣ? ಬೆಂಗಳೂರು, ಮೈಸೂರು, ಮಂಡ್ಯ, ಹಾಸನ ಪ್ರದೇಶಗಳು ಅಪಾರ ಅಭಿವೃದ್ಧಿ ಕಂಡಿವೆ. ಪ್ರಗತಿಯ ಫಲ ಇನ್ನುಳಿದ ಜಿಲ್ಲೆಗಳನ್ನು ತಲುಪಿಯೇ ಇಲ್ಲ! ನಿರ್ಲಕ್ಷಿತ ಪ್ರದೇಶಗಳ ಅಭಿವೃದ್ಧಿಗೆ 'ಪ್ಯಾಕೇಜ್' ಪ್ರಕಟಿಸಿ, ಮೂಗಿಗೆ ತುಪ್ಪ ಹಚ್ಚಿ ಕೂರಿಸುವುದು "ಫ್ಯಾಶನ್" ಆಗಿಬಿಟ್ಟಿದೆ. ಈ ಬಗ್ಗೆ ಬರಿ ಸರಕಾರವನ್ನು ದೂಷಿಸುವುದಕ್ಕಿಂತ ನಮ್ಮ ಭಾಗದ ಜನಪ್ರತಿನಿಧಿಗಳ ನಿಷ್ಕ್ರಿಯತೆ, ಜಡತ್ವ, ಜೋಬದ್ರತನವನ್ನು ಹಳಿಯಬೇಕಾಗಿದೆ.

ನಮ್ಮ ದೇಶದಲ್ಲಿ ರಾಜಕಾರಣ ಹಾಗೂ ರಾಜಕಾರಣಿಗಳಿಗೆ ಎಲ್ಲಿಲ್ಲದ ಮಹತ್ವ, ಪ್ರಚಾರ ಕೊಡಲಾಗುತ್ತಿದೆ. ಈ ಮಾತಿಗೆ ಕರ್ನಾಟಕ ಹೊರತಲ್ಲ. ಸಾಹಿತಿಗಳು, ಸಂಗೀತಗಾರರು, ಕ್ರೀಡಾಪಟುಗಳು, ವಿಜ್ಞಾನಿಗಳು, ಉದ್ದಿಮೆದಾರರು, ಮಠಾಧಿಪತಿಗಳು, ಚಿತ್ರರಂಗದ ಕಲಾವಿದರು, ಪತ್ರಕರ್ತರು ಹೀಗೆ ವಿಭಿನ್ನ ಕ್ಷೇತ್ರಗಳ ಸಾಧಕರೆಲ್ಲ ಕೂಡಿ ಕನ್ನಡ ನಾಡಿನ ನೆಲ, ಜಲ, ಭಾಷೆಯ ವಿವಾದದ ಹಿಂದಿನ ಸತ್ಯವನ್ನು ದೇಶದ ಜನರೆದುರು, ಕೇಂದ್ರ

ನಾಯಕತ್ವದೆದುರು ಮುಂದಿಡಲು ಹಿಂದೇಟು ಹಾಕುವುದೇಕೆ? ರಾಜ್ಯದ ಪರವಾಗಿ ಇವರ ಹೊಣೆಗಾರಿಕೆ ಏನೂ ಇಲ್ಲವೇ?

ಈ ಐವತ್ತೊಂದು ವರ್ಷಗಳಲ್ಲಿ ಕರ್ನಾಟಕದಲ್ಲಿ ಹಲವಾರು ಪ್ರಾದೇಶಿಕ ಪಕ್ಷಗಳು ಹುಟ್ಟಿವೆ – ಸತ್ತಿವೆ. ಕೆಂಗಲ್ ಹನುಮಂತಯ್ಯನವರ ಸುರಾಜ್ಯಪಕ್ಷ, ದೇವರಾಜ ಅರಸರ 'ಕರ್ನಾಟಕ ಕಾಂಗ್ರೆಸ್', ಬಂಗಾರಪ್ಪನವರ 'ಕ್ರಾಂತಿರಂಗ', ಪಿ. ಲಂಕೇಶರ ಪ್ರಗತಿರಂಗ, ವಿಜಯ ಸಂಕೇಶ್ವರರ 'ಕನ್ನಡ ನಾಡು' ಪಕ್ಷ, ದೇವೇಗೌಡರ 'ಕರ್ನಾಟಕ ವಿಕಾಸ ವೇದಿಕೆ'ಗಳನ್ನು ಇಲ್ಲಿ ಹೆಸರಿಸಬಹುದು. ಇವು ಮಿಂಚಿಮಾಯವಾದ ಅಲ್ಪಾಯುಷಿ ಸಂಘಟನೆಗಳು. 'ಕನ್ನಡ ಚಳವಳಿ ವಾಟಾಳ್ ಪಕ್ಷ' ಎಂಬ ಏಕವ್ಯಕ್ತಿ ಪ್ರಧಾನ ಪಕ್ಷ ಇನ್ನೂ ಚಲಾವಣೆಯಲ್ಲಿದೆ. ಕಾಲಕಾಲಕ್ಕೆ ಕನ್ನಡ, ಕರ್ನಾಟಕದ ಹೆಸರಿನಲ್ಲಿ ಸುದ್ದಿ ಗದ್ದಲ ಮಾಡುತ್ತಿರುವ 'ಕರ್ನಾಟಕ ರಕ್ಷಣಾ ವೇದಿಕೆ' ಹೋಳಾಗಿ ಎರಡಾಗಿದೆ. ಇದೀಗ ಜೆಡಿಎಸ್ ತ್ಯಜಿಸಿ ಹೊರಬಂದಿರುವ ಜೆ.ಎಚ್. ಪಟೇಲರ ಪುತ್ರ ಮಹಿಮಾ ಪಟೇಲರು 'ಸುವರ್ಣ ಯುಗ' ಎಂಬ ಮತ್ತೊಂದು ಪ್ರಾದೇಶಿಕ ಪಕ್ಷವನ್ನು ಹುಟ್ಟು ಹಾಕಿದ್ದಾರೆ.

ಏಕೀಕರಣವಾಗಿ ಐವತ್ತೊಂದು ವರ್ಷಗಳು ಸಂದಿರುವ ಈ ದೀರ್ಘಾವಧಿಯಲ್ಲಿ ನಮ್ಮ ನಾಡು ಅನೇಕ ರಾಜಕೀಯ ಸ್ಥಿತ್ಯಂತರಗಳನ್ನು, ಸವಾಲುಗಳನ್ನು ಕಂಡಿದೆ. ಇವೆಲ್ಲವೂ ರಾಜ್ಯದ ಸ್ಥೈರ್ಯವನ್ನು ಗಟ್ಟಿಗೊಳಿಸಿವೆ, ಆತ್ಮವಿಶ್ವಾಸವನ್ನು ಹೆಚ್ಚಿಸಿವೆ. ನೆಲ, ಜಲ, ನುಡಿಯ ವಿಷಯದಲ್ಲಿ ನಮ್ಮ ನೆರೆಹೊರೆಯ ರಾಜ್ಯಗಳು ನ್ಯಾಯಯುತವಾಗಿ ನಮ್ಮೊಂದಿಗೆ ನಡೆದುಕೊಂಡಿಲ್ಲ. ಇದಕ್ಕೆ ನಮ್ಮ ಸರಕಾರಗಳ ಮೆದುಧೋರಣೆಯೇ ಕಾರಣ. ನಮ್ಮ ಸರಕಾರಗಳು ಉಗ್ರಕ್ರಮ, ಕಠಿಣ ನಿಲುವುಗಳನ್ನು ಪ್ರದರ್ಶಿಸದೆ ಬರಿ 'ಸಂರಕ್ಷಣಾತ್ಮಕ ಕ್ರಮ' ಕೈಗೊಳ್ಳುತ್ತ ಹೋದರೆ ಸಮಸ್ಯೆಗಳು ಬಗೆಹರಿಯದೆ ಭೂತಾಕಾರವಾಗಿ ಬೆಳೆಯುತ್ತ ಹೋಗುತ್ತವೆ. ನಮ್ಮ ರಾಜ್ಯದ ಹಿತ ನೆರವೇರಬೇಕಾದರೆ ದಿಟ್ಟತನ, ಗಟ್ಟಿತನ ಪ್ರಕಟಗೊಳ್ಳಬೇಕು.

ಹಾಗೆ ನೋಡಿದರೆ, ಐದು ದಶಕಗಳ ನಮ್ಮ ಸಾಧನೆಯೇನೂ ಕಡಿಮೆ ಇಲ್ಲ. ಕೊಂಕಣ ರೇಲ್ವೆ ಕರಾವಳಿ ಇತಿಹಾಸದಲ್ಲಿ ಒಂದು ಮೈಲುಗಲ್ಲು! ಕಾರವಾರದ ನೌಕಾನೆಲೆ ರಾಜ್ಯಕ್ಕೊಂದು ಹೆಮ್ಮೆ, ಐ.ಟಿ ಬಿ.ಟಿ. ಉದ್ಯಮದ ಅಭಿವೃದ್ಧಿ ಮೂಲಕ 'ನ್ಯಾನೊ' ತಂತ್ರಜ್ಞಾನದ ಅಭಿವೃದ್ಧಿ ಮೂಲಕ ನಮ್ಮ ರಾಜ್ಯ ಜಾಗತಿಕ ಮಹತ್ವ ಪಡೆದಿದೆ. ಬೆಂಗಳೂರಿನ 'ಸಿಲಿಕಾನ್ ಸಿಟಿ', ರಾಜ್ಯದ ಉದ್ದಿಮೆದಾರರು, ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ರಂಗದಲ್ಲಿ ಹೆಸರು ಮಾಡಿದ್ದಾರೆ. ನಮ್ಮ ಸಾಹಿತಿಗಳಿಗೆ ಏಳು ಜ್ಞಾನಪೀಠ ಪ್ರಶಸ್ತಿಗಳು ಸಂದಿವೆ. ನಮ್ಮ ರಾಜ್ಯದ ಚಿತ್ರನಿರ್ದೇಶಕರು ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಪ್ರಶಸ್ತಿ,

ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಕ್ರೀಡಾ ಕ್ಷೇತ್ರದಲ್ಲಿ, ಅದರಲ್ಲೂ ವಿಶೇಷವಾಗಿ ಕ್ರಿಕೆಟ್‌ನಲ್ಲಿ ನಮ್ಮ ಆಟಗಾರರು ಜಗತ್ತಿನಾದ್ಯಂತ ಮಿಂಚುತ್ತಿದ್ದಾರೆ. ಆಲಮಟ್ಟಿ ನಾರಾಯಣಪುರ ಆಣೆಕಟ್ಟುಗಳ ಮೂಲಕ ಉತ್ತರ ಕರ್ನಾಟಕದ ಭಾಗ್ಯದ ಬಾಗಿಲು ತೆರೆಯುತ್ತಲಿದೆ.

ಇಷ್ಟಾದರೂ ರಾಜ್ಯದಲ್ಲಿ ಮೂಲ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ರಸ್ತೆಗಳು ಸರಿ ಇಲ್ಲ. ನೀರು, ವಿದ್ಯುತ್ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲ. ಬೆಂಗಳೂರಿನಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದಾರೆ. ಭೂ ಮಾಫಿಯಾಗಳು ನೆಲ ಕಬಳಿಕೆಯಲ್ಲಿ ತೊಡಗಿವೆ. ಅಪರಾಧಗಳು ಹೆಚ್ಚುತ್ತಿವೆ. ಇವುಗಳಿಗೆ ರಾಜಕಾರಣಿಗಳ ಅಭಯಹಸ್ತ, ಕುಮ್ಮಕ್ಕು ಇದೆ. ಒಳ್ಳೆಯ ಯೋಜನೆಗಳು ರಾಜ್ಯದ ಕೈತಪ್ಪಿ ಹೋಗುತ್ತಿವೆ. ಕೇಂದ್ರದಲ್ಲಿ ನಮ್ಮ ರಾಜ್ಯವನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವ, ಪ್ರಭಾವ ಬೀರಿ ಕೆಲಸ ಸಾಧಿಸುವ ನಾಯಕತ್ವ ನಮ್ಮಲ್ಲಿಲ್ಲ. ಹೀಗಾಗಿ, ರಾಜ್ಯ ವಿಶ್ವವನ್ನೇ ಆಕರ್ಷಿಸುತ್ತಿದ್ದರೂ ಪ್ರವಾಸಿ ತಾಣಗಳ ಅಭಿವೃದ್ಧಿ ಮಾತ್ರ ನಿರಾಶಾದಾಯಕವಾಗಿದೆ. ಪ್ರವಾಸಿ ಆಕರ್ಷಣೆ ಸಾಲದು. ವಿದೇಶೀ ಪ್ರವಾಸಿಗರನ್ನು ಆಕರ್ಷಿಸಬೇಕಾದರೆ ಮೂಲ ಸೌಕರ್ಯಗಳ ಕೊರತೆಯನ್ನು ನೀಗಿಸಬೇಕು. ಸೌಜನ್ಯತೆ, ಪ್ರಾಮಾಣಿಕತೆಗಳನ್ನು ರೂಢಿಸಿಗೊಳ್ಳಬೇಕು. ಭಯೋತ್ಪಾದಕರ, ಉಗ್ರರ, ನಕ್ಸ್‌ಲೈಟ್‌ಗಳ ಉಪಟಳ ತಡೆಯಬೇಕು. ಜಾಗತೀಕರಣದಿಂದ ನಮ್ಮ ರೈತರು ತತ್ತರಿಸಿ ಹೋಗಿದ್ದಾರೆ. ಅರಣ್ಯ, ಕೃಷಿ, ನದಿ, ಭೂಮಿ, ಅಭಿವೃದ್ಧಿ ಹೆಸರಿನಲ್ಲಿ ಮಾಯವಾಗುತ್ತಿವೆ. ಸಾರ್ವಜನಿಕ, ಸರಕಾರೀ ಉದ್ದಿಮೆಗಳ ಬೆಳವಣಿಗೆ ಜತೆಗೆ 'ಮಣ್ಣಿನ ಮಕ್ಕಳಿಗೆ' ಸಿಗಬೇಕಾದ ಪ್ರಾಶಸ್ತ್ಯ ಸಿಗುತ್ತಿಲ್ಲ. ಮನೆಮಕ್ಕಳು ಉಂಡ ಮೇಲೆ ಉಳಿದವರ ಬಗೆಗೆ ಔದಾರ್ಯ ತೋರಬೇಕಲ್ಲವೇ? ಬೃಹತ್ ಯೋಜನೆಗಳಿಂದ ನಿರ್ವಸತಿಗಳಾದ ಜನರಿಗೆ ಕಲ್ಪಿಸಲಾಗುತ್ತಿರುವ ಪುನರ್ವಸತಿ ಯೋಜನೆಗಳೂ ಸಮರ್ಪಕವಾಗಿಲ್ಲ. ಅಭಿವೃದ್ಧಿ ಜನಪರವಾಗಿರಬೇಕಲ್ಲವೆ?

೨೦೦೬ರಲ್ಲಿ ಕರ್ನಾಟಕ ಏಕೀಕರಣದ ಸುವರ್ಣ ಸಂಭ್ರಮವನ್ನಾಚರಿಸಿದೆವು. ಈ ಐವತ್ತನೆಯ ವರ್ಷಾಚರಣೆಯ ಪ್ರಚಾರ ವೈಖರಿ ನೋಡಿದರೆ ಈ ಎಲ್ಲದಕ್ಕೆ ತಾವೇ ಕಾರಣರೆಂಬಂತೆ ಕರದಾತರ ಖರ್ಚಿನಲ್ಲಿ ರಾಜಕಾರಣಿಗಳು ವೈಭವೀಕರಣಗೊಂಡದ್ದು ಎದ್ದು ಕಾಣುತ್ತಿತ್ತು. ಸುವರ್ಣಸಂಭ್ರಮ ಇಡೀ ನಾಡಿನ ಸಂಭ್ರಮ ಎನಿಸಬೇಕು. ಪ್ರಸ್ತುತ ಸರಕಾರ ಕೇವಲ ಒಂದು ನಿಮಿತ್ತ ಮಾತ್ರ ಎಂಬಂತೆ ಅದರ ಪಾತ್ರ ಸೀಮಿತವಾಗಿರಬೇಕು. ಈ ವರ್ಷ ರಾಜ್ಯ ರಾಜಕಾರಣದಲ್ಲಿ ಪ್ರಮುಖ ಬದಲಾವಣೆಯನ್ನು ತಂದ ವರ್ಷ. ದಕ್ಷಿಣ ಭಾರತದಲ್ಲಿ ತನ್ನ ದಿಗ್ವಿಜಯಕ್ಕಾಗಿ ಹಾತೊರೆಯುತ್ತಿದ್ದ ಬಿಜೆಪಿ, ಕರ್ನಾಟಕದಲ್ಲಿ ಸಮ್ಮಿಶ್ರ ಸರಕಾರದಲ್ಲಿ ಭಾಗಿಯಾಗಿ ಅಧಿಕಾರಕ್ಕೆ ಏರಿತು.

'ಜಾತ್ಯತೀತ' ಎಂಬ ಲೇಬಲ್ ಹಚ್ಚಿಕೊಂಡಿದ್ದ ಜೆಡಿಎಸ್ 'ಕೋಮುವಾದಿ' ಎಂದು ತಾನೇ ಜರಿಯುತ್ತಿದ್ದ, ಬಿಜೆಪಿ ಜತೆಗೂಡಿ ಸರ್ಕಾರ ರಚಿಸಿತು ! ಕಾಂಗ್ರೆಸ್ ವಿರೋಧಿಸುತ್ತಲೇ ರಾಜಕೀಯ ಪ್ರವೇಶ ಮಾಡಿದ್ದ ಸಿದ್ಧರಾಮಯ್ಯ ಕಾಂಗ್ರೆಸ್ಸಿನಿಂದಲೇ ಶಾಸಕರಾಗಿ ಆಯ್ಕೆ ಆಗಿದ್ದಾರೆ ! ಅಧಿಕಾರ ವ್ಯಾಮೋಹಕ್ಕೊಳಗಾದ ರಾಜಕಾರಣಿಗಳು ತತ್ವ ಸಿದ್ಧಾಂತಕ್ಕೆ ತಿಲಾಂಜಲಿಕೊಟ್ಟ ವರ್ಷ ಇದು ! ಸುವರ್ಣ ಕರ್ನಾಟಕ ವರ್ಷ ! ಕನ್ನಡ–ಕನ್ನಡಿಗ–ಕರ್ನಾಟಕದ ಉತ್ಕರ್ಷ ಸಾಧನೆಗಾಗಿ ಐವತ್ತೊಂದು ವರ್ಷಗಳ ಹಿಂದೆ 'ಕನ್ನಡ ನಾಡು' ಉದಯವಾಯಿತು. ಆದರೆ ಕನ್ನಡಿಗರ ಕನಸಿನ 'ಚೆಲುವ ಕನ್ನಡ ನಾಡು' ಉದಯವಾಗಿದೆಯೇ?

## ಅಕ್ಟೋಬರ್ ೩, ೨೦೦೭ರ ನಂತರದಲ್ಲಿ ಕರ್ನಾಟಕದಲ್ಲಿ ಕಂಡುಬಂದ ರಾಜಕೀಯ ಸ್ಥಿತ್ಯಂತರಗಳು

ಕರ್ನಾಟಕದಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ 'ಅಭಿವೃದ್ಧಿರಂಗ' ಎಂಬ 'ಆಡಳಿತಕೂಟ'ದ ದೊಡ್ಡ ಅಂಗಪಕ್ಷವಾಗಿ ಸರಕಾರದಲ್ಲಿ ಭಾಗಿಯಾಗಿದ್ದ 'ಭಾಜಪ' ದಕ್ಷಿಣ ಭಾರತದ ಪ್ರಮುಖ ರಾಜ್ಯವೊಂದರಲ್ಲಿ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ತನ್ನ ಆಡಳಿತ ಖಾತೆ ಆರಂಭಿಸುವ ಮೂಲಕ ತನ್ನ ಬೇರುಗಳನ್ನು ಚಾಚುವಲ್ಲಿ ಯಶಸ್ವಿಯಾದದ್ದಂತೂ ಸತ್ಯ ಸಂಗತಿ. ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಹೊಸ ಸರಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಮಹತ್ವದ ಖಾತೆಯಾದ ಹಣಕಾಸು ಮಂತ್ರಿಯಾಗಿದ್ದರು. ಸಚಿವ ಸಂಪುಟದ ಅರ್ಧದಷ್ಟು ಮಹತ್ವದ ಖಾತೆಗಳು ಬಿಜೆಪಿ ಸದಸ್ಯರ ಕೈಯಲ್ಲಿದ್ದವು. ಯಡಿಯೂರಪ್ಪನವರು ಎರಡು ಜನಪರ ಬಜೆಟ್ ಕೊಡುವ ಮೂಲಕ ಹಾಗೂ ರೈತರ ಸಾಲಮನ್ನಾ, ಲಾಟರಿ, ಸಾರಾಯಿ ನಿಷೇಧದ ಮೂಲಕ ಜನಪ್ರಿಯತೆ ಗಳಿಸಿದ್ದರು. ಮುಖ್ಯಮಂತ್ರಿ ಕುಮಾರಸ್ವಾಮಿಯವರು ಗ್ರಾಮವಾಸ್ತವ್ಯ ಹಾಗೂ ಜನತಾದರ್ಶನ ಕಾರ್ಯಕ್ರಮಗಳ ದ್ವಾರಾ ಜನಮನ ಗೆದ್ದು, ಹೊಸ ರಾಜಕೀಯ ಶೈಲಿಗೆ ನಾಂದಿ ಹಾಡಿದ್ದರು. ಜನಸಾಮಾನ್ಯರು ಈ ಸರಕಾರದ ಬಗೆಗೆ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದರು.

ಇಪ್ಪತ್ತು ತಿಂಗಳ ಹಿಂದೆ 'ಬಿಜೆಪಿ–ಜೆಡಿಎಸ್' ನಾಯಕರ ನಡುವೆ ಆದ ಪರಸ್ಪರ ಒಪ್ಪಂದದ ಪ್ರಕಾರ ಅಕ್ಟೋಬರ್ ೩, ೨೦೦೭ ರಂದು ಮುಖ್ಯಮಂತ್ರಿ ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಯಡಿಯೂರಪ್ಪನವರಿಗೆ 'ಅಧಿಕಾರ' ಹಸ್ತಾಂತರ ಮಾಡಬೇಕಾಗಿತ್ತು, ಆದರೆ ಕುಮಾರಸ್ವಾಮಿ ಕೊಟ್ಟ ಮಾತಿನಂತೆ

ನಡೆದುಕೊಳ್ಳಲಿಲ್ಲ. ಒಪ್ಪಂದವನ್ನು ಗೌರವಿಸಲಿಲ್ಲ. ತಮ್ಮ ಮುಖ್ಯಮಂತ್ರಿ ಪದಕ್ಕೆ ರಾಜೀನಾಮೆ ಸಲ್ಲಿಸಿ ಬಿಜೆಪಿಯ ಯಡಿಯೂರಪ್ಪನವರಿಗೆ ಬೆಂಬಲ ಸೂಚಿಸಿ ರಾಜ್ಯಪಾಲರಿಗೆ ಪತ್ರ ನೀಡಲಿಲ್ಲ. ಈ ಬೆಳವಣಿಗೆಯ ಹಿಂದೆ ಜೆಡಿಎಸ್ ವರಿಷ್ಠರಾದ ದೇವೇಗೌಡರ ಕುಮ್ಮಕ್ಕು ಕೈವಾಡ ಇದ್ದದ್ದು ಸ್ಪಷ್ಟವಾಗಿತ್ತು ! 'ವಚನಭ್ರಷ್ಟನೆನ್ನಿಸಿಕೊಳ್ಳಲೂ ನಾನು ಸಿದ್ಧ' ಎಂದು ಕುಮಾರಸ್ವಾಮಿ ಎಗ್ಗಿಲ್ಲದೇ ಘೋಷಿಸಿ ಬಿಟ್ಟರು !

ಹಾಗೆ ನೋಡಿದರೆ, ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಬೇಕಾದ ಗಡುವಿಗಿಂತ ಮೂರುನಾಲ್ಕು ತಿಂಗಳು ಮೊದಲೇ ಜೆಡಿಎಸ್ ಕಡೆಯಿಂದ ಆ ಪಕ್ಷದ ಸಚಿವರು–ಶಾಸಕರಾದ– ಅನ್ಸಾರಿ, ಡಿ.ಟಿ.ಜಯಕುಮಾರ, ಜಮೀರ್, ವೆಂಕಟೇಶ್ ಮುಂತಾದವರು ಬಿಜೆಪಿ ಬಗೆಗೆ ಅಪಸ್ವರ ಹೊರಡಿಸತೊಡಗಿದ್ದರು. ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಕೂಡದು. ಮುಂದಿನ ಇಪ್ಪತ್ತು ತಿಂಗಳು ಕುಮಾರಣ್ಣನೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು' – ಎಂದು ಇವರೆಲ್ಲ ವೇದಿಕೆಗಳ ಮೂಲಕ ಮುಖ್ಯಮಂತ್ರಿಗಳ ಸಮ್ಮುಖದಲ್ಲಿಯೇ ಹೇಳತೊಡಗಿದ್ದರು. ಇದೇ ಅಭಿಪ್ರಾಯವನ್ನು ಪತ್ರಕರ್ತರೆದುರು, ಟಿವಿ ಮಾಧ್ಯಮದವರೆದುರು ಸ್ಪಷ್ಟ ಶಬ್ದಗಳಲ್ಲಿ ಪುನರುಚ್ಚಿಸತೊಡಗಿದ್ದರು.

೨೦೦೬ರ ಫೆಬ್ರುವರಿ ತಿಂಗಳಲ್ಲಿ 'ಬಿಜೆಪಿ–ಜೆಡಿಎಸ್' ಪಕ್ಷಗಳ 'ದೋಸ್ತಿ' ಸರಕಾರ ರಚನೆಯಾಗುವ ಕಾಲಕ್ಕೆ ಜೆಡಿಎಸ್ 'ಸುಪ್ರೀಮೊ' ದೇವೆಗೌಡರು 'ಈ ದಿಢೀರ್' ಬೆಳವಣಿಗೆಗಳ ಭಾಗವಾಗಿ–'ಕ್ಷಿಪ್ರ ಕ್ರಾಂತಿಯ' ಕಾರಣಕರ್ತರಾಗಿ 'ಚಿತ್ರ' ದಲ್ಲಿಯೇ ಇರಲಿಲ್ಲ. ಹಾಗೆಂದು, ಈ ಎಲ್ಲ ಬೆಳವಣಿಗೆಗಳು ಹೊರ ಜಗತ್ತಿಗೆ ತೋರಿದರೂ ತೆರೆಮರೆಯಲ್ಲಿ ಈ 'ಮಹಾನ್ ನಾಟಕ' ದ ಮುಖ್ಯ ಸೂತ್ರಧಾರ – ಬೇರಾರೂ ಅಲ್ಲ – ಸ್ವತಃ ದೇವೇಗೌಡರೇ ಎಂಬುದು ದಿನಗಳೆದಂತೆ ಸ್ಪಷ್ಟವಾಗತೊಡಗಿತ್ತು.

ಕುಮಾರಸ್ವಾಮಿ ನೇತೃತ್ವದಲ್ಲಿ ನಾಲ್ವತ್ತು ಜೆಡಿಎಸ್ ಶಾಸಕರ ಗುಂಪು ಕಾಂಗ್ರೆಸ್ ವಿರುದ್ಧ ಬಂಡೆದ್ದು, ಕಾಂಗ್ರೆಸ್‌ಗೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡು ಬಿಜೆಪಿ ಜೊತೆಗೂಡಿ 'ಕರ್ನಾಟಕ ಅಭಿವೃದ್ಧಿ ರಂಗ' ಎಂಬ ಕೂಟ ರಚಿಸಿಕೊಂಡು ಕಾಂಗ್ರೆಸ್ಸೇತರ ಸಮ್ಮಿಶ್ರ ಸರಕಾರ ಅಸ್ತಿತ್ವಕ್ಕೆ ತಂದಾಗ ದೇವೇಗೌಡರು– ಬಿಜೆಪಿ ಜೊತೆ ಗೂಡಿ ಸರಕಾರ ರಚಿಸಿದ್ದಕ್ಕೆ ಮಗನ ಮೇಲೆ ಮುನಿಸಿಕೊಂಡು ಆಘಾತಕ್ಕೊಳಗಾಗಿ, ಅನಾರೋಗ್ಯ ಪೀಡಿತರಾಗಿ (ಅಥವಾ ಹಾಗೆ ನಟಿಸಿ), ತಮ್ಮ 'ಸೆಕ್ಯುಲರ್' ಪಕ್ಷ 'ಕೋಮುವಾದಿ ಬಿಜೆಪಿ' ಜೊತೆ ಸರಕಾರ ರಚಿಸಿದ್ದು ಅವರಿಗೆ ನುಂಗಲಾರದ ತುತ್ತಾಗಿ, ಮನೆ ಹಿಡಿದು ಕೂತರು !

ತಮ್ಮ ವಿರುದ್ಧ ಬಂಡಾಯವೆದ್ದು, ತಮ್ಮ ಸಮ್ಮತಿಯಿಲ್ಲದೇ ಬಿಜೆಪಿ ಜೊತೆ ಸೇರಿ ಸರಕಾರ ರಚಿಸಿದ್ದ 'ಜೆಡಿಎಸ್ ಶಾಸಕರ ಗುಂಪಿಗೆ ಮನ್ನಣೆ ನೀಡಕೂಡದೆಂದು ರಾಜ್ಯಪಾಲರಿಗೆ ಪತ್ರ ಬರೆದ ದೇವೇಗೌಡರು ಇಲ್ಲಿ ತಮ್ಮ 'ಚಾಣಕ್ಷತನ' ತೋರಿಸಿದ್ದರು ! ನಿಜವಾಗಿಯೂ ಗೌಡರು ಪ್ರಾಮಾಣಿಕರಾಗಿದ್ದರೆ – ಜೆಡಿಎಸ್‌ನ ಬಂಡಾಯ ಶಾಸಕರ ಗುಂಪಿನ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವ ದೃಢ ನಿರ್ಧಾರ ಅವರದಾಗಿದ್ದರೆ – ಅವರು ಅಸೆಂಬ್ಲಿಯ 'ಸ್ಪೀಕರ್'ಗೆ ಪತ್ರ ಬರೆಯಬೇಕಾಗಿತ್ತು – ರಾಜ್ಯಪಾಲರಿಗಲ್ಲ !

ಜೆಡಿಎಸ್ ಪಕ್ಷದ ನಾಯಕರಾದ ಎಚ್.ಡಿ.ರೇವಣ್ಣ, ಎಂ.ಪಿ.ಪ್ರಕಾಶ, ಪಿಜಿಆರ್ ಸಿಂಧ್ಯ ಮುಂತಾದವರು 'ಜೆಡಿಎಸ್' ದ ಬಂಡಾಯ ಗುಂಪಿನ ಜೊತೆ ಗುರುತಿಸಿಕೊಳ್ಳದೆ ದೇವೇಗೌಡರ ಜೊತೆಗೇ ಉಳಿದಿದ್ದರು. ಈ ಮಧ್ಯೆ ವಾಟಾಳ್ ನಾಗರಾಜ, ಪಿಜಿಆರ್ ಸಿಂಧ್ಯ ಮೊದಲಾದ ಶಾಸಕರು ಜೆಡಿಎಸ್‌ನ ಬಂಡಾಯ ಗುಂಪಿಗೆ ಮನ್ನಣೆ ನೀಡದೆ ಪಕ್ಷಾಂತರ ನಿಷೇಧ ಕಾಯ್ದೆಯಡಿ ಆ ಶಾಸಕರೆಲ್ಲರ ಸದಸ್ಯತ್ವವನ್ನು ರದ್ದುಗೊಳಿಸಬೇಕೆಂದು 'ಸ್ಪೀಕರ್' ಗೆ ಮನವಿ ಸಲ್ಲಿಸಿದ್ದರು. ಅದರ ತೀರ್ಪು ಹೊರಬೀಳಲೇ ಇಲ್ಲ !

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕುಮಾರಸ್ವಾಮಿಯರು – ತಮ್ಮ ತಂದೆಯವರು ತನ್ನ ಬಗೆಗೆ ತೋರಿದ ಅಸಮಾಧಾನ ಟೀಕೆ ಟಿಪ್ಪಣಿಗಳನ್ನು ಆಶೀರ್ವಾದವೆಂದೇ ತೆಗೆದುಕೊಳ್ಳುತ್ತೇನೆ – ಒಳ್ಳೆಯ ಕೆಲಸ ಮಾಡಿ ಅವರ ವಿಶ್ವಾಸ ಗಳಿಸಿ ಅವರ ಬೆಂಬಲ, ಸಮರ್ಥನೆ ಪಡೆಯುತ್ತೇನೆ – ಎಂದು ಅತಿ ವಿಶ್ವಾಸದಿಂದ ಪದೆ ಪದೇ ಹೇಳುತ್ತಲೇ ಇದ್ದರು ! ಆ ಕಾಲ ಬಂದೇ ಬಿಟ್ಟಿತು ! ಅಂದರೆ ದೇವೇಗೌಡರು ಒಂದು 'ಹೊಸ ಕಥೆ' ಹುಟ್ಟು ಹಾಕಿ ಕಾಂಗ್ರೆಸ್ ಸಂಚಿನ ರಹಸ್ಯವೊಂದನ್ನು ಸ್ಫೋಟಗೊಳಿಸಿದರು ! ತಮ್ಮ ಜೆಡಿಎಸ್‌ಪಕ್ಷ ವನ್ನು ಒಡೆದು ಕೆಲವು ಶಾಸಕರನ್ನು ತನ್ನತ್ತ ಸೆಳೆದುಕೊಂಡು ಜೆಡಿಎಸ್ ಪಕ್ಷವನ್ನು ನಾಶಗೊಳಿಸುವ ಸಂಚನ್ನು ಕಾಂಗ್ರೆಸ್ ರೂಪಿಸಿತ್ತು – ಈ ಸಂಚಿನ 'ಸುಳಿವು' ದೊರೆತಕೂಡಲೇ ತಮ್ಮ ಪುತ್ರ ಕುಮಾರಸ್ವಾಮಿ ಕಾಂಗ್ರೆಸ್ ವಿರುದ್ಧ ಬಂಡೆದ್ದು, ಅದಕ್ಕೆ ನೀಡಿದ್ದ ಬೆಂಬಲ ಹಿಂತೆಗೆದುಕೊಂಡು, ತಮ್ಮ ಪಕ್ಷವನ್ನು ನಾಶದಿಂದ ಪಾರುಮಾಡಿದ 'ರಕ್ಷಕ'ನೆಂದು ಹಾಡಿ ಹೊಗಳುತ್ತ ಕಾಂಗ್ರೆಸ್ ಮೇಲೆ 'ಗೂಬೆ' ಕೂರಿಸಿದರು.

ಇದಾದ ಮೇಲೆ ದೇವೇಗೌಡರು ತಮ್ಮ ಪುತ್ರ ಕುಮಾರಸ್ವಾಮಿ ನೇತೃತ್ವದ ಸರಕಾರ ಕೈಗೊಂಡ ಒಳ್ಳೆಯ ಕಾರ್ಯಕ್ರಮ, ಕೆಲಸಗಳ ಬಗೆಗೆ ಮೆಚ್ಚುಗೆ ಸೂಚಿಸುತ್ತ ಶಹಭಾಸ್‌ಗಿರಿ ಕೊಡುತ್ತ ಅವರ ಸರಕಾರಕ್ಕೆ ಬೆಂಬಲ ಸೂಚಿಸುತ್ತ ಬಹಿರಂಗವಾಗಿ 'ಅಧಿಕೃತ' ಆಶೀರ್ವಾದ ದಯಪಾಲಿಸಿದರು ! ಹಾಗೆಯೇ ಬರುಬರುತ್ತ ಗೌಡರು ಕುಮಾರಸ್ವಾಮಿ ಸರಕಾರದ ಮೇಲೆ ತಮ್ಮ

'ಹಿಡಿತ'–'ಪ್ರಭಾವ' ಗಟ್ಟಿಗೊಳಿಸತೊಡಗಿದರು. ಸಾರ್ವಜನಿಕವಾಗಿಯೇ ತಂದೆ–ಮಗ ಒಂದಾದರು. ದೇವೇಗೌಡರ ನಾಟಕ ಬಯಲಾಯಿತು!

ಈ ಮಧ್ಯೆ ಇಲ್ಲಿಯ ವರೆಗೆ ದೇವೇಗೌಡರ ಜೊತೆಗೇ ತಮ್ಮನ್ನು ಗುರುತಿಸಿಕೊಂಡು ಕುಮಾರಸ್ವಾಮಿ ಬಣದಿಂದ ದೂರವಿದ್ದ ಗೌಡರ ಹಿರಿಯ ಮಗ – ಎಚ್.ಡಿ.ರೇವಣ್ಣ, ಎಂ.ಪಿ.ಪ್ರಕಾಶ್, ಪಿ.ಜಿ.ಆರ್ ಸಿಂಧ್ಯ ಮುಂತಾದ ಜೆಡಿಎಸ್ ಮುಖಂಡರು ಅಧಿಕಾರವಿಲ್ಲದೇ ಅತಂತ್ರ ಸ್ಥಿತಿಯಲ್ಲಿದ್ದು 'ತ್ರಿಶಂಕು' ವಿನಂತಾಗಿದ್ದರು. ಇವರಿಗೆ ರಾಜಕೀಯ ಪುನರ್ವಸತಿ ಕಲ್ಪಿಸಿಕೊಡಬೇಕಾಗಿತ್ತು. ಸಂಪೂರ್ಣ ತಂದೆಯ ಹೋಲಿಕೆ ಇರುವ ದೇವೇಗೌಡರ ಹಿರಿಯ ಮಗ ಎಚ್.ಡಿ.ರೇವಣ್ಣ ತಂದೆಗೆ ತಕ್ಕ ಮಗನಾಗಿದ್ದು, ಅವರ ಅತ್ಯಂತ ಪ್ರೀತಿಯ ಪುತ್ರರಾಗಿದ್ದಾರೆ. ಈ ಮೊದಲಿನ ಕಾಂಗ್ರೆಸ್–ಜೆಡಿಎಸ್ ಪಕ್ಷಗಳ ಮೈತ್ರಿ ಸರಕಾರದಲ್ಲಿ ತಮ್ಮ ನೆಚ್ಚಿನ ಲೋಕೋಪಯೋಗಿ ಹಾಗೂ ಇಂಧನ ಖಾತೆಗಳ ಮಂತ್ರಿಯಾಗಿದ್ದ ರೇವಣ್ಣ ತಾನೇ 'ಮುಖ್ಯಮಂತ್ರಿ' ಎನ್ನುವ ವರಸೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದುದು ಇತರ ಮಂತ್ರಿಗಳಿಗೆ ಕಿರಿಕಿರಿ ಎನಿಸುತ್ತಿತ್ತು. ಇತರ ಮಂತ್ರಿಗಳ ಖಾತೆಗಳಲ್ಲಿ ಕೈ ಹಾಕುವ, ಅಡ್ಡಗಾಲು ಹಾಕುವ, ಮೂಗು ತೂರಿಸುವ 'ಚಾಳಿ' ಅವರಿಗೆ ಮೊದಲಿನಿಂದಲೂ ಇದೆ. ಈಗ ತಮ್ಮ ಸೋದರ ಕುಮಾರಸ್ವಾಮಿಯೇ ಮುಖ್ಯಮಂತ್ರಿ ! ತಡವಾಗಿ ಅವರ ಸಂಪುಟ ಸೇರಿದ ರೇವಣ್ಣ ತಾನೇ 'ಸಿ.ಎಂ' ಎಂಬ 'ಅಹಂ' ಪ್ರದರ್ಶಿಸತೊಡಗಿದರು. ಎಂದಿನಂತೆ ಲೋಕೋಪಯೋಗಿ ಹಾಗೂ ಇಂಧನ ಖಾತೆಗಳು ಅವರ ಕೈವಶವಾದವು.

ಇನ್ನು ಕುಮಾರಸ್ವಾಮಿ ನೇತೃತ್ವದಲ್ಲಿ ಬಂಡಾಯ ಎದ್ದು ರೆಸಾರ್ಟ ರಾಜಕೀಯ ಮಾಡುತ್ತ ಸಮ್ಮಿಶ್ರ ಸರಕಾರ ರಚಿಸಿಕೊಂಡು ಅಧಿಕಾರದ ಆನಂದ ಅನುಭವಿಸುತ್ತಿದ್ದ ಜೆಡಿಎಸ್ ನಾಯಕರು ತಮ್ಮೊಂದಿಗೆ ಜೊತೆಗೂಡಿ ಸಹಕರಿಸಿ ಅಧಿಕಾರ ಹಂಚಿಕೊಳ್ಳಬೇಕೆಂದು ಎಂ.ಪಿ.ಪ್ರಕಾಶ್, ಪಿಜಿಆರ್ ಸಿಂಧ್ಯ ಅವರಿಗೆ ಆಹ್ವಾನ ನೀಡುತ್ತಲೇ ಇದ್ದರು. 'ಅಹಿಂದ' ಚಳವಳಿಯ ನೇತಾರರಾಗಲು ಹೋಗಿ ಜೆಡಿಎಸ್ ನಿಂದ ಉಚ್ಚಾಟಿತರಾಗಿದ್ದ ಅರ್ಥಸಚಿವರೂ ಆಗಿದ್ದ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನಿರ್ಗಮನದ ನಂತರ ಧರ್ಮಸಿಂಗ್ ಮಂತ್ರಿಮಂಡಲದಲ್ಲಿ ಜೆಡಿಎಸ್ ಕೋಟಾದ ಉಪಮುಖ್ಯಮಂತ್ರಿ ಸ್ಥಾನ ತೆರವಾಗಿಯೇ ಇತ್ತು. ಜೆಡಿಎಸ್ ಶಾಸಕರ ಬಂಡಾಯದ ನಂತರ ಕುಮಾರಸ್ವಾಮಿಯವರೇ ಜೆಡಿಎಸ್, ಶಾಸಕಾಂಗ ಪಕ್ಷದ ನಾಯಕರಾಗಿ ಚುನಾಯಿತರಾಗಿದ್ದರು. ಹೀಗಾಗಿ ಬಂಡಾಯಕ್ಕೆ ಪೂರ್ವದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರೂ ಸಿದ್ಧರಾಮಯ್ಯನವರ ಉಚ್ಚಾಟನೆಯ ನಂತರ ಬಡ್ತಿ ಪಡೆದು ಉಪಮುಖ್ಯಮಂತ್ರಿಯೂ ಆಗಿದ್ದ ಎಂ. ಪಿ. ಪ್ರಕಾಶ್ ಈಗ

ಎರಡೂ ಹುದ್ದೆ ಕಳೆದುಕೊಂಡು 'ಮಾಜಿ' ಆಗಿದ್ದರು ! ಪಿಜಿಆರ್ ಸಿಂಧ್ಯರೂ ಮಂತ್ರಿ ಪದವಿ ಕಳೆದುಕೊಂಡು 'ಮಾಜಿ' ಆಗಿದ್ದರು ! ಅಂತೂ ಕೊನೆಗೆ ಎಂ.ಪಿ.ಪ್ರಕಾಶರ ಮನವೊಲಿಸಿ, ಅವರನ್ನು ಕುಮಾರಸ್ವಾಮಿ ಮಂತ್ರಿಮಂಡಲದಲ್ಲಿ ಮಹತ್ವದ ಗೃಹಖಾತೆಯ ಮಂತ್ರಿಯನ್ನಾಗಿ ಮಾಡಿ 'ಸಮಾಧಾನ' ಪಡಿಸಲಾಯಿತು. ಸಿಂಧ್ಯ ಮಾತ್ರ ಮಂತ್ರಿಮಂಡಲ ಸೇರಲಿಲ್ಲ. ಈ ನಡುವೆ ಜೆಡಿಎಸ್ ರಾಷ್ಟ್ರ ಮಟ್ಟದಲ್ಲಿ ಇಬ್ಭಾಗವಾಗಿ – ದೇವೇಗೌಡರ ಬಣ ಹಾಗೂ ಸುರೇಂದ್ರಮೋಹನರ ಬಣ – ಎಂಬ ಎರಡು ಬಣಗಳು ಅಸ್ತಿತ್ವದಲ್ಲಿ ಬಂದವು. ಈ ಮೊದಲು ಸುರೇಂದ್ರ ಮೋಹನರ ಜೆ.ಡಿ.ಎಸ್ ಬಣದೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದ ಸಿಂಧ್ಯರವರು ಕರ್ನಾಟಕದ ರಾಜಕೀಯದಲ್ಲಿ ಇದೀಗ ಹೊಸದಾಗಿ ಸದ್ದು ಮಾಡುತ್ತಿರುವ ಮಾಯಾವತಿಯವರ 'ಬಿಎಸ್ಪಿ' ಪಕ್ಷ ಸೇರಿರುವುದು ಹೊಸ ಬೆಳವಣಿಗೆ.

ಬಿಜೆಪಿಗೆ ಅಧಿಕಾರ ಹಸ್ತಾಂತರದ ದಿನ ಸಮೀಪಿಸುತ್ತಿದ್ದಂತೆ ದೇವೇಗೌಡರು ಚುರುಕಾದರು. ಅವರು ನಾನಾ ತಂತ್ರಗಳನ್ನು ರೂಪಿಸ ತೊಡಗಿದರು. ಮೂಲೆಯಲ್ಲಿದ್ದ ಮೆರಾಜುದ್ದೀನ ಪಟೇಲ ಎಂಬ ಮುಸ್ಲಿಂ ವ್ಯಕ್ತಿಯನ್ನು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿ, ತಮ್ಮದು 'ಸೆಕ್ಯುಲರ್ ಪಕ್ಷ' – ತಾವೊಬ್ಬ 'ಸೆಕ್ಯುಲರ ವಾದಿ' ಎಂಬ ಪುರಾವೆ ಮುಂದಿಡಲು ಪ್ರಯತ್ನಿಸಿದರು. ಷರತ್ತುಗಳ ಸರದಾರರೆಂದೇ ಖ್ಯಾತರಾಗಿರುವ ದೇವೇಗೌಡರು ಅಧಿಕಾರ ಹಸ್ತಾಂತರಕ್ಕೆ ಪೂರ್ವಭಾವಿಯಾಗಿ ಬಿಜೆಪಿಗೆ ಹಲವಾರು ಷರತ್ತುಗಳನ್ನು ಒಡ್ಡತೊಡಗಿದರು. ಬಿಜೆಪಿಯ ರಾಷ್ಟ್ರೀಯ ನಾಯಕರ ಜೊತೆಗೆ ಕೆಲವೊಂದು ವಿಷಯಗಳನ್ನು ಪ್ರಸ್ತಾಪಿಸಿ ಸ್ಪಷ್ಟೀಕರಣ ಪಡೆಯಬೇಕಾಗಿದೆ ಎಂಬ ಹೊಸ ರಾಗ ಶುರು ಮಾಡಿದರು. ಮೆರಾಜುದ್ದೀನ ಪಟೇಲ, ಅನ್ಸಾರಿ, ಚೆನ್ನಿಗಪ್ಪ, ಡಿ.ಟಿ.ಜಯಕುಮಾರ, ಜಮೀರ, ವೆಂಕಟೇಶ ಮುಂತಾದವರು ಇಪ್ಪತ್ತು ತಿಂಗಳ ಅವಧಿ ನಂತರ ಈಗಿನ ಮುಖ್ಯಮಂತ್ರಿ ಕುಮಾರಸ್ವಾಮಿಯವರೇ ಅಧಿಕಾರದಲ್ಲಿ ಮುಂದುವರೆಯಲಿ ಎಂಬ ರಾಗ ಹಾಡತೊಡಗಿದರು. ಈ 'ಆರ್ಕೆಸ್ಟ್ರಾ' ದ ರಾಗ ಸಂಯೋಜಕರು ದೇವೇಗೌಡರೇ ಆಗಿದ್ದರು !

ದೇವೇಗೌಡರ ಈ 'ಆಟ' ಬಿ.ಜೆ.ಪಿ.ಯ ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ನಾಯಕರಿಗೆ ಹಿಡಿಸಲಿಲ್ಲ. ಯಡಿಯೂರಪ್ಪನವರ ರಕ್ತದೊತ್ತಡ ಹೆಚ್ಚಾಗತೊಡಗಿತ್ತು ! ಇತರ ಬಿ.ಜೆ.ಪಿ. ನಾಯಕರು ಅಸಮಾಧಾನಗೊಂಡು– ನಮ್ಮ ಒಪ್ಪಂದ ಏನಿದ್ದರೂ ಅದು ಕುಮಾರಸ್ವಾಮಿಯವರ ಕೂಡ – ಅವರ ಬಗೆಗೆ ನಮಗೆ ನಂಬುಗೆ ಇದೆ. ಈ ವಿಷಯದಲ್ಲಿ ದೇವೇಗೌಡರ ಮಾತಿಗೆ ನಾವು 'ಬೆಲೆ' ಕೊಡುವುದಿಲ್ಲ – ಮಹತ್ವವನ್ನು ನೀಡುವುದಿಲ್ಲ – ಎಂದು ಹೇಳತೊಡಗಿದರು.

ಬಿ.ಜೆ.ಪಿ.ಗೆ ಒಪ್ಪಂದದ ಪ್ರಕಾರ ಅಧಿಕಾರ ಹಸ್ತಾಂತರಕ್ಕೆ ನಾನು ಬದ್ಧ – ನಾನು ಮಾತಿಗೆ ತಪ್ಪುವುದಿಲ್ಲ – ಎಂದು ಹಲವಾರು ಸಾರ್ವಜನಿಕ ವೇದಿಕೆಗಳ ಮೂಲಕ, ಮಠಾಧಿಪತಿಗಳ ಸಮ್ಮುಖದಲ್ಲಿ ಘೋಷಿಸುತ್ತಲೇ ಇದ್ದ ಕುಮಾರಸ್ವಾಮಿ ತಂದೆ ದೇವೇಗೌಡರ ಚಿತಾವಣೆಗೊಳಗಾಗಿ ತಮ್ಮ ನಿಲುವು ಬದಲಿಸತೊಡಗಿದ್ದರು. ಬಿ.ಜೆ.ಪಿ. ಬಗೆಗೆ ಇಲ್ಲ ಸಲ್ಲದ 'ಕ್ಯಾತೆ' ತೆಗೆಯತೊಡಗಿದ್ದ ತಂದೆ ದೇವೇಗೌಡರ ಧ್ವನಿಯೊಂದಿಗೆ ಇವರೂ ಧ್ವನಿಗೂಡಿಸತೊಡಗಿದ್ದರು. ತಂದೆ ಮಕ್ಕಳಿಗೆ ಅವರದೇ ಹಟ – ಅಧಿಕಾರ ಹಸ್ತಾಂತರ ಮಾಡದೇ ಕುಂಟು ನೆಪಗಳನ್ನು ಷರತ್ತುಗಳನ್ನು ಮುಂದಿಡತೊಡಗಿದ್ದರು. "ಕುಮಾರಸ್ವಾಮಿಯವರು ಕೊಟ್ಟ ಮಾತಿನಂತೆ ನಡೆದುಕೊಳ್ಳುವುದಿಲ್ಲ – ಅವರು ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡುವುದಿಲ್ಲ" – ಎಂದು ದೇವರೇ ಬಂದು ಹೇಳಿದರೂ ನಾನು ನಂಬುವುದಿಲ್ಲ" ಎಂದು ಯಡಿಯೂರಪ್ಪನವರು ದಿನಂಪ್ರತಿ ಪುನರುಚ್ಚರಿಸುತ್ತಲೇ ಇದ್ದರು. ಆ ದಿನ ಬಂದೇ ಬಿಟ್ಟಿತು ! ಅಕ್ಟೋಬರ ೩, ೨೦೦೭ ರಂದು ಮುಖ್ಯಮಂತ್ರಿ ತಮ್ಮ ಹುದ್ದೆಗೆ ರಾಜೀನಾಮೆಯನ್ನೂ ಕೊಡಲಿಲ್ಲ – ಅಧಿಕಾರ ಹಸ್ತಾಂತರ ಕುರಿತೂ 'ಚಕಾರ'ವೆತ್ತಲಿಲ್ಲ, "ನಾನು ವಚನಭ್ರಷ್ಟನೆನ್ನಿಸಿಕೊಳ್ಳಲೂ ಸಿದ್ಧ" ಎಂದು ಖಡಾಖಂಡಿತವಾಗಿ ಅವರು ಘೋಷಿಸಿದ ನಂತರ ಯಡಿಯೂರಪ್ಪನವರ ಭ್ರಮೆ ದೂರಾಗಿತ್ತು. ಬಿ.ಜೆ.ಪಿ.ಯ ರಾಜ್ಯ ನಾಯಕರು ಕೆಂಡಮಂಡಲವಾಗಿ ಬೃಹತ್ ಪ್ರತಿಭಟನಾ ಮೆರವಣಿಗೆ ಸಂಘಟಿಸಿದರು.

"ಇಪ್ಪತ್ತು ತಿಂಗಳ ಹಿಂದೆ ಬಿ.ಜೆ.ಪಿ. ಹಾಗೂ ಜೆ.ಡಿ.ಎಸ್. ನಾಯಕರಾದ ಯಡಿಯೂರಪ್ಪ – ಕುಮಾರಸ್ವಾಮಿಯವರು ಪರಸ್ಪರ ಮಾಡಿಕೊಂಡಿದ್ದ 'ಸದ್ಗೃಹಸ್ಥರ ಒಡಂಬಡಿಕೆ'ಯೇ ಅಂತಿಮ. ನಮಗೆ ಯಾವುದೇ ಹೊಸ ಷರತ್ತುಗಳಾಗಲಿ – ಮಾತುಕತೆಯಾಗಲಿ ಒಪ್ಪಿಗೆ ಇಲ್ಲ" ಎಂದು ಬಿ.ಜೆ.ಪಿ. ನಾಯಕರು ಒಕ್ಕೊರಲಿನಿಂದ ಸಾರಿದರು. 'ಅಧಿಕಾರದ ಹಸ್ತಾಂತರದ ನಂತರವೇ ಯಾವುದೇ ಮುಂದಿನ ಮಾತುಕತೆ' ಎಂಬ ದೃಢ ನಿಲುವು ಅವರದಾಗಿತ್ತು.

ರಾಜ್ಯಾದ್ಯಂತ ಬಿಜೆಪಿ ಪರವಾದ ಅನುಕಂಪದ ಅಲೆಗಳು ಏಳತೊಡಗಿದವು. ಬಿ.ಜೆ.ಪಿ.ಯನ್ನು ನಖಶಿಖಾಂತ ವಿರೋಧಿಸುತ್ತಿದ್ದ ಬುದ್ಧಿಜೀವಿಗಳು, ಲೇಖಕರು, ಸಾಹಿತಿಗಳು, ಪತ್ರಕರ್ತರು ಸಹ ಕುಮಾರಸ್ವಾಮಿಯ ವಚನಭ್ರಷ್ಟ ನಡವಳಿಕೆಯನ್ನು ಕಟು ಶಬ್ದಗಳಲ್ಲಿ ಖಂಡಿಸ ತೊಡಗಿದರು. ಈಗ ಕುಮಾರಸ್ವಾಮಿ ಕಂಗಾಲಾದರು. "ದೇವೇಗೌಡರು ಪುತ್ರವ್ಯಾಮೋಹಕ್ಕೊಳಗಾಗಿ ತಾವು 'ರಾಷ್ಟ್ರಮಟ್ಟ'ದ ನಾಯಕರೆಂಬುದನ್ನು ಮರೆತು 'ಧೃತರಾಷ್ಟ್ರ'ಮಟ್ಟದ ನಾಯಕರಾಗುತ್ತಿದ್ದಾರೆಂಬ" ಟೀಕೆ

ಟಿಪ್ಪಣಿಗೊಳಗಾದರು. ಇಪ್ಪತ್ತು ತಿಂಗಳ ಹಿಂದೆ ಅಧಿಕಾರ ಹಂಚಿಕೊಳ್ಳುವಾಗ 'ಕೋಮುವಾದಿ' ಯಾಗಿ ಕಾಣಿಸದ ಬಿಜೆಪಿ, ಈಗ ತಂದೆ ಮಕ್ಕಳಿಗೆ ಕೋಮುವಾದಿಯಾಗಿ ಗೋಚರಿಸತೊಡಗಿದ್ದು ಚೋದ್ಯದ ಸಂಗತಿಯಾಗಿತ್ತು. ನಾಲ್ವತ್ತು ಸದಸ್ಯರನ್ನು ಹೊಂದಿದ್ದ ಸಣ್ಣ ಗುಂಪು ಎಂಬತ್ತು ಸದಸ್ಯರನ್ನು ಹೊಂದಿದ್ದ ದೊಡ್ಡ ಗುಂಪಿನ ಮೇಲೆ ಸವಾರಿ ಮಾಡಿ ಅಧಿಕಾರ ಚಲಾಯಿಸಿ ಈಗ ಅದೇ ದೊಡ್ಡ ಗುಂಪಿಗೆ ನಿರ್ದೇಶನ ನೀಡುತ್ತ ಷರತ್ತುಗಳನ್ನು ವಿಧಿಸುತ್ತಿದ್ದುದು. – 'ಬಾಲವೇ ನಾಯಿಯನ್ನು ಅಲ್ಲಾಡಿಸುವಂಥ ತಮಾಷೆಯ ವಿಷಯವಾಗಿತ್ತು. ಆದರೇನು ? "ನಾಯಿ ಹಸಿದಿತ್ತು – ಅಂಬಲಿ ಹಳಸಿತ್ತು" ಎಂಬ ಗಾದೆ ಇಂದಿನ ರಾಜಕೀಯ ಪರಿಸ್ಥಿತಿಗೆ ಕನ್ನಡಿ ಹಿಡಿಯುವಂತಿತ್ತು ! ಬಿಜೆಪಿಗೆ ದಕ್ಷಿಣ ಭಾರತದಲ್ಲಿ ತಮ್ಮ 'ಖಾತೆ' ತೆರೆಯಬೇಕಾಗಿತ್ತು ! ಅಧಿಕಾರದ 'ರುಚಿ' ಅನುಭವಿಸಬೇಕಾಗಿತ್ತು.

ಇಲ್ಲಿ ಒಂದು ಮಾತನ್ನು ಹೇಳಲೇಬೇಕು : ಕರ್ನಾಟಕದಲ್ಲಿ ಶೂನ್ಯದಿಂದ ತನ್ನ 'ಖಾತೆ' ಆರಂಭಿಸಿದ ಬಿಜೆಪಿಗೆ ಅಧಿಕಾರದ ಸಿಂಹಾಸನಕ್ಕೇರುವಷ್ಟು ಸಂಖ್ಯಾಬಲ ತಂದು ಕೊಟ್ಟ ಕೀರ್ತಿ – ರೈತ ಧುರೀಣ, ದಣಿವರಿಯದ ಹೋರಾಟಗಾರ, ಸಂಘಟನಾ ಚತುರ – ಬಿ.ಎಸ್.ಯಡಿಯೂರಪ್ಪನವರಿಗೆ ಖಂಡಿತ ಸಲ್ಲಬೇಕು. 'ರಾಜಧರ್ಮ'ದ ಪಾಠ ಹೇಳುತ್ತ, ಲಕ್ಷ್ಮಣರೇಖೆಯ ಪ್ರಸ್ತಾಪ ಮಾಡುತ್ತ – ಅಧಿಕಾರ ಹಸ್ತಾಂತರದ ಪ್ರಸ್ತಾಪ ಬಂದಾಗ – 'ವಿಧಿಲೀಲೆ' – ಹಣೆಬರಹ ಮುಂತಾಗಿ ಒಗಟಿನ ಭಾಷೆಯಲ್ಲಿ ಉಲಿಯುತ್ತ – ಅರ್ಥಂಬರ್ಥ ವಾಕ್ಯಗಳ ಅಸ್ಪಷ್ಟ ಹೇಳಿಕೆಗಳನ್ನು ಕೊಡುತ್ತಿದ್ದ ದೇವೇಗೌಡರ ಧೋರಣೆಯಿಂದ ಇರುಸು ಮುರುಸುಗೊಂಡ ಯಡಿಯೂರಪ್ಪನವರು ಅವರಿಂದ 'ವಿಶ್ವಾಸದ್ರೋಹ'ದ ಆಘಾತಕ್ಕೊಳಗಾಗಿದ್ದರು. 'ಜಮದಗ್ನಿ' ಯ ಅವತಾರ ಎಂಬ ಪ್ರತೀತಿ ಪಡೆದಿದ್ದ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವ ಮಹತ್ವಾಕಾಂಕ್ಷೆಯಿಂದ ಮೆತ್ತಗಾಗಿಬಿಟ್ಟಿದ್ದರು. ದೇವೇಗೌಡರ ದರ್ಬಾರಿನಲ್ಲಿ ಅವರು ಹೊಟ್ಟೆ ಹೊಸೆಯುತ್ತ ಹೋದದ್ದು ಪ್ರಯೋಜನವಾಗಲಿಲ್ಲ ! ಹೊಸ ಜನಾದೇಶ ಪಡೆಯಲು ಚುನಾವಣೆ ಎದುರಿಸಲು ಅವರು ತಯಾರಾದರು.

ರಾಜ್ಯ ರಾಜಕೀಯದಲ್ಲಿ ತಲೆದೋರಿದ ಅನಿಶ್ಚಿತತೆ, ಆತಂಕ, ಅತಂತ್ರ ಪರಿಸ್ಥಿತಿಯನ್ನು ದೂರಮಾಡಬೇಕಿತ್ತು. ಅಕ್ಟೋಬರ್ ೮ನೇ ತಾರೀಖು ಸಂಜೆ ಉಪಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿಯ ರಾಜ್ಯಾಧ್ಯಕ್ಷ ಸದಾನಂದಗೌಡ ಹಾಗೂ ಇತರೆ ಬಿಜೆಪಿ ಮುಖಂಡರು ರಾಜ್ಯಪಾಲರನ್ನು ಭೇಟಿಯಾಗಿ ಜೆಡಿಎಸ್‌ನ ನಾಯಕ ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ತಮ್ಮ ಎಲ್ಲ ಶಾಸಕರು ಈವರೆಗೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡ ಅಧಿಕೃತ ಪತ್ರವನ್ನು ಸಲ್ಲಿಸಿದರು. ಈ ಬೆಳವಣಿಗೆಯ ನಂತರ ಮುಖ್ಯಮಂತ್ರಿ

ಕುಮಾರಸ್ವಾಮಿ ತಮ್ಮ ಸ್ಥಾನಕ್ಕೆ ತಕ್ಷಣ ರಾಜಿನಾಮೆ ಸಲ್ಲಿಸಬೇಕಾಗಿತ್ತು ! ಅದಕ್ಕೂ ಮೀನಮೇಷ ಎಣಿಸುತ್ತ ವಿಲಂಬ ಧೋರಣೆ ಅನುಸರಿಸಲಾಯ್ತು ! ಬಿಜೆಪಿ ಅಧಿಕೃತವಾಗಿ ತನ್ನ ಬೆಂಬಲ ಹಿಂತೆಗೆದುಕೊಂಡ ಇಪ್ಪತ್ನಾಲ್ಕುಗಂಟೆಗಳ ನಂತರವಷ್ಟೇ ಮುಖ್ಯಮಂತ್ರಿ ಕುಮಾರಸ್ವಾಮಿ ತಮ್ಮ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದರು.

ಇದಾದ ನಂತರ ರಾಜ್ಯಪಾಲರು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ವಿಧಿಸಲು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲು ತಡ ಮಾಡಲಿಲ್ಲ. ವಿಧಾನ ಸಭೆಯನ್ನು ವಿಸರ್ಜಿಸದೇ ಅಮಾನತ್ತಿನಲ್ಲಿಟ್ಟು ರಾಜ್ಯದಲ್ಲಿ 'ರಾಷ್ಟ್ರಪತಿ' ಆಳ್ವಿಕೆಯನ್ನು ಹೇರಲಾಯಿತು. ಯಾವುದೇ ವಿಧಾನಸಭೆಯನ್ನು ಸಂಸತ್ತಿನ ಒಪ್ಪಿಗೆ ಇಲ್ಲದೇ ವಿಸರ್ಜಿಸಕೂಡದೆಂದು ಎಸ್. ಆರ್. ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂಕೋರ್ಟ ತೀರ್ಪು ನೀಡಿತ್ತು ! ಹಾಗಾಗಿ ಈ ಕ್ರಮ.

ಎಂದೂ ಅಧಿಕಾರವನ್ನು ಬಿಟ್ಟಿರದ ಕಾಂಗ್ರೆಸ್ ಹಿಂಬಾಗಿಲಿನ ಮೂಲಕ ಮತ್ತೆ ಅಧಿಕಾರ ಪಡೆಯಲು ಜೆ.ಡಿ.ಎಸ್. ನ ಒಂದು ಬಣದೊಡನೆ 'ಗುಪ್ತ' ಸಮಾಲೋಚನೆಯಲ್ಲಿ ತೊಡಗಿತ್ತು. ಕಾಂಗ್ರೆಸ್‌ನ ಕೇಂದ್ರ ಮಂತ್ರಿಗಳಾದ ಎಂ.ವಿ.ರಾಜಶೇಖರನ್, ಆಸ್ಕರ್ ಫರ್ನಾಂಡಿಸ್, ಜೆ.ಡಿ.ಎಸ್. ನ ಎಂ.ಪಿ. ಪ್ರಕಾಶ್‌ರ ಹೆಸರುಗಳು 'ಸಂಭಾವ್ಯ' ಮುಖ್ಯಮಂತ್ರಿಗಳ ಪಟ್ಟಿಯಲ್ಲಿ ಸೇರಿಕೊಂಡು ಗಾಳಿಯಲ್ಲಿ ತೇಲಾಡತೊಡಗಿದವು. ಹೇಳದೇ ಕೇಳದೇ ತಮಗೆ ಕೈಕೊಟ್ಟು ಬಿಜೆಪಿಯೊಂದಿಗೆ ಕೈಜೋಡಿಸಿ ಸರಕಾರ ರಚಿಸಿ ತಮ್ಮ ಬೆನ್ನಿಗೆ ಚೂರಿ ಹಾಕಿದ ಜೆಡಿಎಸ್ ದೊಂದಿಗೆ ಮತ್ತೆ ಸಖ್ಯ ಬೆಳೆಸಿ ಸರಕಾರ ರಚಿಸುವ ಕುರಿತು ಕಾಂಗ್ರೆಸ್ ಪಕ್ಷದಲ್ಲಿಯೇ ಭಿನ್ನಾಭಿಪ್ರಾಯವಿತ್ತು. ಅಸೆಂಬ್ಲಿಯನ್ನು ವಿಸರ್ಜಿಸಿ ಚುನಾವಣೆಗಳನ್ನು ಎದುರಿಸಿ ಜನಾದೇಶ ಪಡೆದು ಸ್ವಂತ ಬಲದ ಮೇಲೆ ಸರಕಾರ ರಚಿಸಬೇಕೆಂಬ ಇಚ್ಛೆಯನ್ನು ಕಾಂಗ್ರೆಸ್‌ನ ಈ ಬಣ ಹೊಂದಿತ್ತು. ದೇವೇಗೌಡರೂ ಹೊಸ ಚುನಾವಣೆಯ ಪರವಾಗಿದ್ದರು. ಬಿಜೆಪಿಯೂ ವಿಧಾನ ಸಭೆಯ ವಿಸರ್ಜನೆಯ ಪರವಾಗಿ ಧ್ವನಿ ಎತ್ತಿತು. ಶಾಸಕರ 'ಕುದುರೆ ವ್ಯಾಪಾರ' ತಪ್ಪಿಸಲು ಇದೊಂದೇ ರಾಜಮಾರ್ಗವಾಗಿತ್ತು.

ಆದರೆ, ಜೆಡಿಎಸ್ ನ ಬಹುತೇಕ ಶಾಸಕರು ವಿಧಾನಸಭೆಯ ವಿಸರ್ಜನೆಯನ್ನು ಬಲವಾಗಿ ವಿರೋಧಿಸತೊಡಗಿದ್ದರು. ಇನ್ನೂ ಇಪ್ಪತ್ತು ತಿಂಗಳು ಅಸೆಂಬ್ಲಿ ಅವಧಿ ಇರುವಾಗಲೇ ಮತ್ತೆ ಚುನಾವಣೆ ಎದುರಿಸಲು ಅವರು ಸಿದ್ಧರಿರಲಿಲ್ಲ. ದೇವೇಗೌಡ–ರೇವಣ್ಣರ ವಿರುದ್ಧ ಹಲವಾರು ಜೆಡಿಎಸ್ ಶಾಸಕರು ಒಂದು ರೀತಿಯ ಬಂಡಾಯವನ್ನೇ ಹೂಡಿದರು. ಇದೇ ಹೊತ್ತಿಗೆ, ಚುನಾವಣೆ ಬೇಡವಾಗಿದ್ದ ಜೆಡಿಎಸ್‌ನ ಶಾಸಕರ ಒಂದು ಗುಂಪನ್ನು ಹಿಂದಿಟ್ಟುಕೊಂಡು ಕಾಂಗ್ರೆಸ್ ಜೊತೆಗೂಡಿ ಸರಕಾರ ರಚಿಸುವ ಕಸರತ್ತಿನಲ್ಲಿ

ಎಂ. ಪಿ. ಪ್ರಕಾಶ್ ತೊಡಗಿದ್ದರು. ಪ್ರಕಾಶರ ಈ ಪ್ರಯತ್ನಕ್ಕೆ ತಮ್ಮ ಬೆಂಬಲ, ಒಪ್ಪಿಗೆ ಇಲ್ಲವೆಂದು ದೇವೇಗೌಡರು ಎಂದಿನಂತೆ ಅಪಸ್ವರ ತೆಗೆದರು. ದೇವೇಗೌಡರ ಕುಟುಂಬದ ಸದಸ್ಯರನ್ನು ಹೊರಗಿಟ್ಟು ಬರುವುದಾದರೆ ಸರಕಾರ ರಚನೆಗೆ ಸಹಕಾರ, ಬೆಂಬಲ ನೀಡುವುದಾಗಿ ಕಾಂಗ್ರೆಸ್ ಕಡೆಯಿಂದ ಸಂದೇಶ ರವಾನೆಯಾದ ಸುದ್ದಿ ಬಹಿರಂಗವಾಯಿತು. ಪ್ರಕಾಶರೂ ಈ ಸೂಚನೆಗೆ ಸಮ್ಮತಿಸಿದ್ದರು. ಆದರೆ, ದೇವೇಗೌಡರು ಹಾಗೂ ಅವರ ಕುಟುಂಬದವರನ್ನು ಹೊರಗಿಟ್ಟು ಸರಕಾರ ರಚಿಸುವುದಾದರೆ ಅದಕ್ಕೆ ತಮ್ಮ ಬೆಂಬಲ ಇಲ್ಲವೆಂದು ದೇವೇಗೌಡರ 'ಕುಟುಂಬ ನಿಷ್ಠ', 'ಸ್ವಾಮಿನಿಷ್ಠ' ಜೆಡಿಎಸ್ ಶಾಸಕರು ವಿರೋಧ ವ್ಯಕ್ತಪಡಿಸಿದರು.

ಎಂ. ಪಿ. ಪ್ರಕಾಶರು ಏನೋ ಮಾಡಲು ಹೋಗಿ ಏನೋ ಆಗಿತ್ತು ! ಯಾವಾಗಲೂ ಅಧಿಕಾರ ಸಿಗುವ ಕಡೆಗೇ ವಾಲುತ್ತ ಅನುಕೂಲ ಸಿಂಧು ಸಿದ್ಧಾಂತಕ್ಕೆ ಒಗ್ಗಿಕೊಳ್ಳುತ್ತ ಒಂದು ರೀತಿಯ ನಾಜೂಕಯ್ಯನ ಪಾತ್ರವಾಡುತ್ತ, 'ಎಲ್ಲ ಕಡೆ ಸಲ್ಲುವ ಪ್ರಕಾಶ' ಎಂಬ ಖ್ಯಾತಿ ಪಡೆದಿದ್ದ ಎಂ. ಪಿ. ಪ್ರಕಾಶ್, ಮೊಟ್ಟ ಮೊದಲ ಬಾರಿಗೆ ಎರಡೂ ಪಕ್ಷಗಳ 'ವಿಶ್ವಾಸ ಕಳೆದುಕೊಂಡು' ಅತ್ತಲೂ ಇಲ್ಲ – ಇತ್ತಲೂ ಇಲ್ಲ' ಎಂಬ ಎಡಬಿಡಂಗಿ ಸ್ಥಿತಿ ತಂದುಕೊಂಡರು. ಕಾಂಗ್ರೆಸ್‌ಪಕ್ಷ ಪ್ರಕಾಶರನ್ನು ನಡುನೀರಿನಲ್ಲಿ 'ಕೈ' ಬಿಟ್ಟಿತು !

ಕೊನೆಗೂ ಜೆಡಿಎಸ್ ನ ಬಹುತೇಕ ಶಾಸಕರ ಹಟವೇ ಗೆದ್ದಿತು ! ಕೆಲವು ಮಠಾಧಿಪತಿಗಳೂ ಮತ್ತೆ ಜೆಡಿಎಸ್ ಹಾಗೂ ಬಿಜೆಪಿ ನಡುವೆ ಸಂಧಾನ–ರಾಜಿ ಮಾಡಿಸಲು ಪ್ರಯತ್ನ ನಡೆಸಿದ್ದರು. ಪರಸ್ಪರ ಆರೋಪ–ಪ್ರತ್ಯಾರೋಪ ಮಾಡುತ್ತ ಚುನಾವಣೆಗೆ ಸಿದ್ಧತೆ ನಡೆಸಿದ್ದ ಮೂರೂ ಪಕ್ಷಗಳು– ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ – ಯಾತ್ರೆ, ಆಂದೋಲನ, ಪತ್ರಿಕಾ ಪ್ರಕಟಣೆಗಳ ಸಮರ ನಡೆಸಿದ್ದವು. ಪಕ್ಷೇತರರು, ಸಣ್ಣಪುಟ್ಟ ಪಕ್ಷಗಳ ನಾಯಕರು ಚುನಾವಣೆಗೆ ಸಿದ್ಧರಿಲ್ಲದ ಮೂರೂ ಪಕ್ಷಗಳ ಶಾಸಕರ ಬೆಂಬಲದಿಂದ 'ಸರಕಾರ' ರಚಿಸುವ ಮಾತನ್ನಾಡತೊಡಗಿದ್ದರು.

ಅಕ್ಟೋಬರ್ ೨೭ರಂದು ದಿಢೀರ ಬೆಳವಣಿಗೆಯೊಂದರಲ್ಲಿ ಬಿಜೆಪಿಗೆ ತನ್ನ ಬೇಷರತ್ ಬೆಂಬಲ ಸೂಚಿಸಿ ಹೊಸ 'ಸರಕಾರ' ರಚನೆಗೆ ಅನುವು ಮಾಡಿಕೊಡುವ 'ಹಠಾತ್' ನಿರ್ಣಯವನ್ನು ಜೆಡಿಎಸ್‌ನ ವರಿಷ್ಠರು ಕೈಗೊಂಡರು. ಇದಕ್ಕೆ ಮುಖ್ಯ ಕಾರಣವೇನೆಂದರೆ ಕಾಂಗ್ರೆಸ್ ಬೆಂಬಲದೊಂದಿಗೆ ಎಂ. ಪಿ. ಪ್ರಕಾಶ ಎಲ್ಲಿ ಮುಖ್ಯಮಂತ್ರಿ ಆಗಿ ಬಿಡುತ್ತಾರೋ ಎಂಬ ಭಯ ! ಗೌಡರ ಆಮಿಷಕ್ಕೆ ಬಲಿಯಾದ ಬಿಜೆಪಿಯ ನಾಯಕರು ರಾಜ್ಯಪಾಲರನ್ನು ಭೆಟ್ಟಿಯಾಗಿ ಸರಕಾರ ರಚನೆಗೆ ಜೆಡಿಎಸ್‌ನ ಶಾಸಕರು ಕೊಟ್ಟ

ಬೆಂಬಲ ಪತ್ರವನ್ನು ಹಾಜರ ಪಡಿಸಿ 'ಸರಕಾರ' ರಚಿಸುವ ಹಕ್ಕನ್ನು ಮಂಡಿಸಿದರು. ಬಿಜೆಪಿ ಹಾಗೂ ಜೆಡಿಎಸ್‌ನ ೧೨೯ ಶಾಸಕರು 'ವೈಯಕ್ತಿಕ ಪ್ರಮಾಣ ಪತ್ರಗಳನ್ನು' ರಾಜ್ಯಪಾಲರಿಗೆ ಸಲ್ಲಿಸುವುದರ ಜೊತೆಗೆ ರಾಜ್ಯಪಾಲರೆದುರು ಸಾಮೂಹಿಕ ಕವಾಯತು ನಡೆಸಿದರು. ಆ ಕಾಲಕ್ಕೆ ಬಿಜೆಪಿ ಹಾಗೂ ಜೆಡಿಎಸ್‌ನ ವರಿಷ್ಠ ನಾಯಕರು ಹಾಜರಿದ್ದರು. ಈ ಕಸರತ್ತಿನ ನಂತರವೂ ಸರಕಾರ ರಚನೆಗೆ ತಮಗೆ ಆಹ್ವಾನ ನೀಡದ ರಾಜ್ಯಪಾಲರ ವಿಲಂಬ ನೀತಿಯನ್ನು ವಿರೋಧಿಸಿ ಬಿಜೆಪಿ ಹಾಗೂ ಜೆಡಿಎಸ್‌ನ ಶಾಸಕರು ದಿಲ್ಲಿಯಲ್ಲಿ ರಾಷ್ಟ್ರಪತಿಗಳ ಮುಂದೆ ಪರೇಡ್ ನಡೆಸಿದರು.

ಅಂತೂ ಕೊನೆಗೆ ಕೇಂದ್ರ ಸರಕಾರ ಅಳೆದು ತೂಗಿ ಬೇರೆ ದಾರಿ ಕಾಣದೇ ಅಸೆಂಬ್ಲಿಯ ಅಮಾನತ್ತನ್ನು ರದ್ದುಗೊಳಿಸಿ ಬಿಜೆಪಿ, ಜೆಡಿಎಸ್‌ಪಕ್ಷಗಳ ಕೂಟವನ್ನು ಸರಕಾರ ರಚನೆಗೆ ಆಹ್ವಾನಿಸಲು ರಾಷ್ಟ್ರಪತಿ ಮೂಲಕ ರಾಜ್ಯಪಾಲರಿಗೆ ಸಂದೇಶ ಕಳಿಸಿತು. ನವಂಬರ ೧೨ ರಂದು ನಾಲ್ಕು ಜನ ಬಿಜೆಪಿ ಮಂತ್ರಿಗಳೊಂದಿಗೆ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸಿದರು.

## ದಕ್ಷಿಣ ಭಾರತದ ರಾಜ್ಯವೊಂದರ ಪ್ರಪ್ರಥಮ ಬಿ.ಜೆ.ಪಿ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ : ಸಾತ್ ದಿನೋಂಕಾ ಸುಲ್ತಾನ್ !

ನವೆಂಬರ್ ೧೨, ೨೦೦೭ರಂದು ದಕ್ಷಿಣ ಭಾರತದ ರಾಜ್ಯವೊಂದರ ಪ್ರಪ್ರಥಮ ಬಿ.ಜೆ.ಪಿ. ಮುಖ್ಯಮಂತ್ರಿ ಎಂದು ಕರ್ನಾಟಕದ ವಿಧಾನಸೌಧದ ಎದುರಿಗಿನ ಮೆಟ್ಟಿಲುಗಳ ಮೇಲೆ ಏರ್ಪಡಿಸಲಾಗಿದ್ದ ಭವ್ಯಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಬಿ.ಎಸ್.ಯಡಿಯೂರಪ್ಪನವರು ಒಂದೇ ವಾರದಲ್ಲಿ ರಾಜೀನಾಮೆ ಸಲ್ಲಿಸುವ ಪ್ರಸಂಗ ಬಂದಿತು! ಅವರು 'ಸಾತ್ ದಿನ್ ಕಾ ಸುಲ್ತಾನ್' ಎಂಬ ಬಿರುದಿಗೆ ಅರ್ಹರಾಗಿ ಸುವರ್ಣ ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಕಡಿಮೆ ಅವಧಿಯ ಮುಖ್ಯಮಂತ್ರಿ ಎಂದೆನಿಸಿದರು.

ಅಕ್ಟೋಬರ್ ೦೩, ೨೦೦೭ರಂದು ಜೆ.ಡಿ.ಎಸ್. ಎಂಬ ದೋಸ್ತಿ ಪಕ್ಷ – ಬಿ.ಜೆ.ಪಿ.ಯ ಯಡಿಯೂರಪ್ಪನವರಿಗೆ ಒಪ್ಪಂದದ ಪ್ರಕಾರ ಅಧಿಕಾರ ಹಸ್ತಾಂತರಿಸದೆ 'ವಚನ ಭ್ರಷ್ಟತೆ'ಯ ಕಳಂಕ ಹೊತ್ತುಕೊಂಡು 'ನಂಬಿಕೆದ್ರೋಹ' ಎಸಗಿತ್ತು. ಯಡಿಯೂರಪ್ಪನವರು ಈಗ ಎರಡನೆಯ ಸಲ ಜೆ.ಡಿ.ಎಸ್.

ನಾಯಕರಾದ ದೇವೇಗೌಡ ಹಾಗು ಕುಮಾರಸ್ವಾಮಿಯವರಿಂದ 'ವಿಶ್ವಾಸದ್ರೋಹ'ಕ್ಕೊಳಗಾಗಿದ್ದರು.

ರಾಜ್ಯಪಾಲರಿಗೆ 'ವೈಯಕ್ತಿಕ ಪ್ರಮಾಣಪತ್ರ'ಗಳನ್ನು ಸಲ್ಲಿಸಿ, ಅವರೆದುರು ಹಾಗು ರಾಷ್ಟ್ರಪತಿಯೆದುರು ತಮ್ಮ ಪಕ್ಷದ ೪೯ ಶಾಸಕರನ್ನು ಹಾಜರು ಪಡಿಸಿ ಬಿ.ಜೆ.ಪಿ.ಗೆ ಬೆಂಬಲ ಸೂಚಿಸಿ ಸರಕಾರ ರಚನೆಗೆ ಬೇಷರತ್ ಸಮ್ಮತಿ ನೀಡಿದ್ದ ಜೆ.ಡಿ.ಎಸ್‌ನ ನಾಯಕರು-ಮುಖ್ಯಮಂತ್ರಿ ಯಡಿಯೂರಪ್ಪನವರು ನವಂಬರ್ ೧೯, ೨೦೦೭ರಂದು ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚಿಸುವ ಮೊದಲು ತಾವು ಮುಂದಿಟ್ಟಿದ್ದ ಹಲವಾರು ಷರತ್ತುಗಳಿಗೆ ಒಪ್ಪಿಗೆ ಸೂಚಿಸಿ ಬಾಂಡ್ ಪೇಪರ್ ಮೇಲೆ ಸಹಿ ಹಾಕಿ ಕೊಡಬೇಕೆಂದು ಪಟ್ಟು ಹಿಡಿದರು. ಇಂಥ ಬಾಂಡ್ ಪೇಪರ್‌ನ ಅನಾಗರಿಕ ರಾಜಕೀಯ ಬಿ.ಜೆ.ಪಿ ನಾಯಕರಿಗೆ ಒಪ್ಪಿಗೆಯಾಗಲಿಲ್ಲ.

ನಾಲ್ವತ್ತು ತಿಂಗಳ ಹಿಂದೆ ಕಾಂಗ್ರೆಸ್‌ಗೆ ಕೈಕೊಟ್ಟು ಬಿ.ಜೆ.ಪಿ.ಯ ಸಖ್ಯ ಬೆಳೆಸಿ, ಮುಖ್ಯಮಂತ್ರಿ ಪಟ್ಟಗಿಟ್ಟಿಸಿಕೊಂಡು, ತಮಗೆ ಬೇಕಾದ ಮಹತ್ವದ ಖಾತೆ ಪಡೆದುಕೊಂಡು ಅಧಿಕಾರ ಅನುಭವಿಸಿದ ಜೆ.ಡಿ.ಎಸ್ ತನ್ನ 'ಮಾನಗೆಟ್ಟ' ನೀಚ ನಡವಳಿಕೆಯ ಮೂಲಕ ಸುವರ್ಣ ಮಹೋತ್ಸವ ಆಚರಿಸಿದ ಕರ್ನಾಟಕದ ಮುಖಕ್ಕೆ ಮಸಿ ಬಳಿಯಿತು. ಇಡೀ ಭಾರತದಲ್ಲಿ ಯಾವ ರಾಜಕೀಯ ಪಕ್ಷವೂ ಎಂದೂ ಎಸಗದಿದ್ದಂಥ "ಮೋಸ - ಮಿತ್ರದ್ರೋಹ - ವಿಶ್ವಾಸ ದ್ರೋಹದ" ಹೇಯ ರಾಜಕೀಯಕ್ಕೆ ಜೆ.ಡಿ.ಎಸ್. ನಾಯಕರು ನಿದರ್ಶನ ಒದಗಿಸಿದರು.

ಅಸೆಂಬ್ಲಿಯಲ್ಲಿ ವಿಶ್ವಾಸಮತ ಯಾಚಿಸಿ ಗೊತ್ತುವಳಿ ಮಂಡಿಸಿದ್ದ ಯಡಿಯೂರಪ್ಪನವರು - ವಿಶ್ವಾಸಮತಕ್ಕೆ ವಿರುದ್ಧವಾಗಿ ಮತ ಚಲಾಯಿಸಲು ಆಗಲೇ ತನ್ನ ಶಾಸಕರಿಗೆ ಜೆ.ಡಿ.ಎಸ್ 'ವ್ಹಿಪ್' ಜಾರಿಗೊಳಿಸಿದ್ದರಿಂದ - 'ವಿಶ್ವಾಸಮತ' ಗೊತ್ತುವಳಿಯನ್ನು ಮತಕ್ಕೆ ಹಾಕುವ ಮೊದಲೇ ಸದನದಿಂದ ಸೀದಾ ರಾಜಭವನಕ್ಕೆ ತೆರಳಿ ತಮ್ಮ ರಾಜೀನಾಮೆ ಸಲ್ಲಿಸಿದರು.

ಇಡೀ ರಾಜ್ಯದ ಜನತೆ ಈ ಬೆಳವಣಿಗೆಯಿಂದ ರೋಸಿ ಹೋಗಿ ದೇವೇಗೌಡರ ಕುಟುಂಬಕ್ಕೆ ಶಾಪಹಾಕಿ 'ಛೀ', 'ಥೂ' ಎಂದು ಉಗಿದರು. ಎಲ್ಲೆಡೆ ಪ್ರತಿಭಟನೆಗಳು ನಡೆದು ಜೆ.ಡಿ.ಎಸ್.ನ ತಂದೆ-ಮಕ್ಕಳ ಪ್ರತಿಕೃತಿಗಳನ್ನು ದಹಿಸಲಾಯಿತು. ಇದರಿಂದ ವಿಚಲಿತರಾಗದ ಜೆ.ಡಿಎ.ಸ್.ನ ನಾಯಕರು ಕಳ್ಳನ ತಿರುಬೊಬ್ಬೆಯಂತೆ ಈ ಎಲ್ಲ ಬೆಳವಣಿಗೆಗಳಿಗೆ ಬಿ.ಜೆ.ಪಿ.ಯೇ ಕಾರಣ ಎಂಬಂತೆ ಯಡಿಯೂರಪ್ಪನವರ ತಲೆಮೇಲೆ ಗೂಬೆ ಕೂರಿಸುವ ವ್ಯರ್ಥ ಪ್ರಯತ್ನದಲ್ಲಿ ತೊಡಗಿರುವ ಸಂಗತಿ ಸಾರ್ವಜನಿಕವಾಗಿ ನಗೆ ಪಾಟಲಿಗೆ ಈಡಾಗಿದೆ. ಕರ್ನಾಟಕದ ಜನತೆ ತಲೆತಗ್ಗಿಸುವಂತಾಗಿದೆ !

# ಇದೇ ಲೇಖಕರ ಇತರ ಕೃತಿಗಳು

೧) ಭೃಂಗನಾದ (ಸಹಕವಿ) - ೧೯೫೫
೨) ನಕ್ಷತ್ರ (ಕವನ ಸಂಕಲನ) -೧೯೬೦
೩) ಸಂಕ್ರಾಂತಿ (ಕವನ ಸಂಕಲನ) -೧೯೬೫ (ಉದಯ ಪ್ರಕಾಶನ, ಗೋಕಾಕ)
೪) ರಾಜ್ಯಶಾಸ್ತ್ರ (ಸಹಲೇಖಕ) -೧೯೭೩ (ಕವಿವಿ ಪ್ರಕಟಣೆ)
೫) ರಾಜ್ಯಶಾಸ್ತ್ರ ದರ್ಶನ -೧೯೭೩ (ಪ್ರಕಾಶಕರು: ಆಕಳವಾಡಿ ಬುಕ್ ಡಿಪೊ, ಧಾರವಾಡ)
೬) ಭಾರತದ ಸಂವಿಧಾನ ಮತ್ತು ಸರಕಾರ (ಸಹಲೇಖಕ) -೧೯೭೬ (ಕವಿವಿ ಪ್ರಕಟಣೆ)
೭) ಕಲ್ಯಾಣ ರಾಜ್ಯದ ಕಲ್ಪನೆ -೧೯೭೭ (ಕವಿವಿ ಪ್ರಕಟಣೆ)
೮) ಪ್ರಜಾಪ್ರಭುತ್ವದ ಭಾರತೀಯ ಮೂಲಗಳು (ಭಾಷಾಂತರ) ೧೯೭೮ (ಕವಿವಿ ಪ್ರಕಟಣೆ)
೯) ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ -೧೯೭೯ (ಕವಿವಿ ಪ್ರಕಟಣೆ)
೧೦) ರಾಜ್ಯಶಾಸ್ತ್ರ ಪರಿಚಯ -೧೯೮೨ (ಪರಂಜ್ಯೋತಿ ಪಬ್ಲಿಕೇಶನ್ಸ್, ಧಾರವಾಡ)
೧೧) ರಾಜ್ಯಶಾಸ್ತ್ರ ಪ್ರವೇಶ -೧೯೯೧ (ವಿದ್ಯಾನಿಧಿ ಪ್ರಕಾಶನ, ಗದಗ)
೧೨) ಸರಕಾರದ ಮೂಲಾಂಶಗಳು -೧೯೯೦ (ವಿದ್ಯಾನಿಧಿ ಪ್ರಕಾಶನ, ಗದಗ)
೧೩) ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ಸಂಘಟನೆ -೧೯೯೨ (ವಿದ್ಯಾನಿಧಿ ಪ್ರಕಾಶನ. ಗದಗ)
೧೪) ರಾಜ್ಯಶಾಸ್ತ್ರದ ಮೂಲತತ್ವಗಳು -೧೯೯೬ (ವಿದ್ಯಾನಿಧಿ ಪ್ರಕಾಶನ, ಗದಗ)
೧೫) ಸರಕಾರದ ಮೂಲತತ್ವಗ ಳು -೧೯೯೭ (ವಿದ್ಯಾನಿದಿ ಪ್ರಕಾಶನ, ಗದಗ)
೧೬) ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ಅಂತಾರಾಷ್ಟ್ರೀಯ ಸಂಘಟನೆ -೧೯೯೭ (ವಿದ್ಯಾನಿಧಿ ಪ್ರಕಾಶನ, ಗದಗ)
೧೭) 'ಕಾವ್ಯ-೧೯೯೪' (ಸಹಲೇಖಕ) (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ)
೧೮) ಹನಿಹನಿ (ಚುಟುಕು ಸಂಗ್ರಹ) (ಸಹ ಕವಿ) ಸಂಕ್ರಮಣ ಪ್ರಕಾಶನ
೧೯) ಚುಟುಕು ಚಿಲುಮೆ (ಸಹ ಕವಿ) (ರಾಯಚೂರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಪ್ರಕಟಣೆ)
೨೦) ಅಮೃತಸೇಚನ -(ಸಹ ಕವಿ) (ಕರ್ನಾಟಕ ಕಾಲೇಜಿನ ಅಮೃತ ಮಹೋತ್ಸವ ಸಂದರ್ಭದ ಪ್ರಕಟಣೆ)
೨೧) ಸ್ವಾತಂತ್ರ್ಯ ಚಿಂತನೆ -೨೦೦೦ (ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟಣೆ) (ಸಹಲೇಖಕ)
೨೨) 'ಪ್ರಪಂಚದ ಪಾಪು' - (ಸಹಲೇಖಕ)
೨೩) ಹರ್ಡೇಕರ ಮಂಜಪ್ಪ - (ಸಹಲೇಖಕ-ಅನುವಾದ)
೨೪) ಉಕ್ಕಿನ ಮನುಷ್ಯ (ಸಂಪಾದಕ) (ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರ ಜನ್ಮಶತಮಾನೋತ್ಸವ ಸಂದರ್ಭದ ಸ್ಮರಣ ಗ್ರಂಥ)

# ಸಂಘದ ಪದಾಧಿಕಾರಿಗಳು

| | | |
|---|---|---|
| ಅಧ್ಯಕ್ಷರು | : | **ನಾಡೋಜ ಡಾ. ಪಾಟೀಲ ಪುಟ್ಟಪ್ಪ** |
| ಉಪಾಧ್ಯಕ್ಷರು | : | **ಶ್ರೀ ಚಂದ್ರಶೇಖರ ಅಳಗುಂಡಗಿ** |
| ಗೌರವ ಉಪಾಧ್ಯಕ್ಷರು | : | **ಶ್ರೀ ಜಿ. ಜಿ. ದೊಡವಾಡ,** ಧಾರವಾಡ |
| | | **ಶ್ರೀ ಎಂ. ಆಯ್. ಸವದತ್ತಿ,** ಧಾರವಾಡ |
| | | **ನಾಡೋಜ ಡಾ. ಜಿ. ನಾರಾಯಣ,** ಬೆಂಗಳೂರು |
| | | **ಶ್ರೀ ಧ. ಸುರೇಂದ್ರ ಕುಮಾರ,** ಬೆಂಗಳೂರು |
| | | **ಡಾ. ರಾಜನ್ ದೇಶಪಾಂಡೆ,** ಧಾರವಾಡ |
| ಕಾರ್ಯಾಧ್ಯಕ್ಷರು | : | **ಶ್ರೀ ಶಿವಣ್ಣ ಬೆಲ್ಲದ** |
| ಕೋಶಾಧ್ಯಕ್ಷರು | : | **ಶ್ರೀ ಎಸ್. ಎಂ. ಹೊಳೆಯಣ್ಣವರ** |
| ಪ್ರಧಾನ ಕಾರ್ಯದರ್ಶಿ | : | **ಪ್ರೊ. ಬಿ. ವ್ಹಿ. ಗುಂಜೆಟ್ಟಿ** |
| ಸಹ ಕಾರ್ಯದರ್ಶಿ | : | **ಶ್ರೀ ಸದಾನಂದ ಶಿವಳ್ಳಿ** |
| ಕಾರ್ಯಕಾರಿ ಸಮಿತಿ ಸದಸ್ಯರು | : | **ಶ್ರೀ ಕೃಷ್ಣ ಜೋಶಿ** |
| | : | **ಶ್ರೀ ಸಿದ್ಧಲಿಂಗ ದೇಸಾಯಿ** |
| | : | **ಶ್ರೀ ಬಸವಪ್ರಭು ಹೊಸಕೇರಿ** |
| | : | **ಶ್ರೀ ಮೋಹನ ನಾಗಮ್ಮನವರ** |
| | : | **ಶ್ರೀ ಶಿವಾನಂದ ಭಾವಿಕಟ್ಟಿ** |
| | : | **ಶ್ರೀ ಶಂಕರ ಹಲಗತ್ತಿ** |
| | : | **ಶ್ರೀಮತಿ ವಿಜಯಾ ಸಂ. ಲಿಂಬಣ್ಣದೇವರಮಠ** |
| | : | **ಶ್ರೀಮತಿ ಜಯಶ್ರೀ ಗುತ್ತಲ** |
| | : | **ಶ್ರೀ ಶಿವಪ್ಪ ರಾಮಪ್ಪ ಕಾರಡಗಿ** |
| | | ಹಾಗೂ |
| | | ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು |
| | | (ಸರಕಾರದ ಪ್ರತಿನಿಧಿ) |

# ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟಣೆಗಳು

| ಅ.ಸಂ. | ಪುಸ್ತಕದ ಹೆಸರು | ಲೇಖಕರು | ಬೆಲೆ | ಪ್ರಕಟಣೆ |
|---|---|---|---|---|
| *೧. | ಉತ್ತರರಾಮ ಚರಿತ್ರೆ | ಧೋಂಡೋ ನರಸಿಂಹ ಮುಳಬಾಗಲ | ೯ ಆಣೆ | ೧೮೯೨ |
| ೨. | ವೇಣೀ ಸಂಹಾರ | ಧೋಂಡೋ ನರಸಿಂಹ ಮುಳಬಾಗಲ | | ೧೮೯೨ |
| ೩. | ಆರ್ಯ ಕುಲಾಂಗನಾ | ಎಚ್. ತಿಮ್ಮಕೃಷ್ಣರಾವ್ | | ೧೮೯೬ |
| ೪. | ಕಂತ, ತಗಾಯಿ, ಇಳಿವತ್ತಿ | ಆರ್. ಎಸ್. ಕುಲಕರ್ಣಿ | ೧ಆ೬ಪೈ | ೧೮೯೬ |
| ೫. | ಮಾಳವಿಕಾಗ್ನಿ ಮಿತ್ರ | ಧೋಂಡೋ ನರಸಿಂಹ ಮುಳಬಾಗಲ | ೪೪ಪೈ | ೧೮೯೭ |
| ೬. | ಕನ್ನಡ ಸುಶೀಲಾ ಪರಿಣಯಂ (ನಾಟಕ) | ಎಚ್. ಚಿದಂಬರಯ್ಯ | ೪ ಆಣೆ | ೧೮೯೯ |
| ೭. | ಕನ್ನಡಿಗರ ಜನ್ಮ ಸಾರ್ಥಕತೆ | ವಲ್ಲಭ ಮಹಾಲಿಂಗ ತಟ್ಟಿ | ೩ ಆಣೆ | ೧೮೯೯ |
| ೮. | ಹಿತೋಪದೇಶ ಭಾಗ–೩ | ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ | ೫ ಆಣೆ | ೧೯೦೦ |
| ೯. | ಹಿತೋಪದೇಶ ಭಾಗ–೪ | ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ | ೫ ಆಣೆ | ೧೯೦೦ |
| ೧೦. | ಬಾಲ್ಯವಿವಾಹಶಾಸ್ತ್ರ ನಿಷೇಧ | ತಿಮ್ಮಾಜಿ ಅನಂತ ಕಾಳಿ | ೫ ಆಣೆ | ೧೯೦೦ |
| ೧೧. | ನಿರ್ದೆಯಲ್ಲೆಬ್ಬಿಸಲ್ಪಟ್ಟ ಚಂದನದಾಸನು (ನಾಟಕ) | ಗಂಗಾಧರರಾವ ಹುಯಿಲಗೋಳ | ೪ ಆಣೆ | ೧೯೦೧ |
| ೧೨. | ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೩ ಆಣೆ | ೧೯೦೧ |
| ೧೩. | ವೀರಮಣಿ | ತೋಂಟೇಶ ಅನ್ನದಾನಿ ಮಂಗಳೂರು | ೨ ಆಣೆ | ೧೯೦೨ |
| ೧೪. | ಸತ್ಯರಾಜಾಪೂರ್ವದೇಶ ಯಾತ್ರೆಗಳು | ಅನು : ರಾಮರಾವ್ ಬೆನಗಲ್ | ೮ ಆಣೆ | ೧೯೦೩ |
| ೧೫. | ಸುಭದ್ರಾ ಹರಣಂ | | ೨ ಆಣೆ | ೧೯೦೩ |
| ೧೬. | ಅಭಿನವ ಕಾದಂಬರಿ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೫ ಆಣೆ | ೧೯೦೪ |
| ೧೭. | ಆರ್ಥರ್ ಡ್ಯೂಕ್ ಆಫ್ ವೆಲಿಂಗ್ಟನ್ ಚರಿತ್ರೆಯು | ಗುರುಬಸಪ್ಪಾ ಫಕೀರಪ್ಪಾ ಹಳಕಟ್ಟಿ | ೧ ರೂ. | ೧೯೦೪ |
| ೧೮. | ಆರ್ಯವಿದ್ಯಾದರ್ಶನವು | ಗುರುನಾಥ ವೆಂಕಟೇಶ ಕಿತ್ತೂರ | ೮ ಆಣೆ | ೧೯೦೪ |
| ೧೯. | ಚಿತ್ತೂರಿನ ಮುತ್ತಿಗೆ | ಕೃಷ್ಣಾಜಿ ಹ. ಮುದವೇಡಕರ | ೬ ಆಣೆ | ೧೯೦೫ |
| ೨೦. | ಸುಭದ್ರಾವಿಜಯ ನಾಟಕಂ | ಬಿ. ರಾಮರಾವ್ | ೧೨ ಆಣೆ | ೧೯೦೬ |
| ೨೧. | ಕರ್ನಾಟಕ ಕಥಾಸರಿತ್ಸಾಗರ | ಸೋಮದೇವ ಮಹಾಕವಿ | ೬ ಆಣೆ | ೧೯೦೬ |
| ೨೨. | ಕೃಷಿಕರ್ಮ ಶಾಸ್ತ್ರವು | ರಾಮಚಂದ್ರ ಮಧ್ವ ಮಹಿಷಿ | ೧೨ ಆಣೆ | ೧೯೦೬ |
| ೨೩. | ದಕ್ಷಿಣ ಮುಸಲ್ಮಾನ ರಾಜ್ಯಗಳ ಇತಿಹಾಸವು | ರಾಘವೇಂದ್ರ ಕೃ. ಇನಾಮತಿ | ೬ ಆಣೆ | ೧೯೦೭ |
| ೨೪. | ವಿಜಯನಗರದ ಸಾಮ್ರಾಜ್ಯವು | ವೀರಭದ್ರ ಬಸಪ್ಪಾ | ೧ ರೂ. | ೧೯೦೮ |
| ೨೫. | ಮಾನವಶಾಸ್ತ್ರವು | ಗುಡ್ಡೋ ಮುಕುಂದ ಉದಕಟ್ಟಿ | ೮ ಆಣೆ | ೧೯೦೮ |
| ೨೬. | ಎಂಟು ಸ್ತ್ರೀ ರತ್ನಗಳು | ಗದಿಗೆವ್ವ ಕುರಹಟ್ಟಿ | ೬ ಆಣೆ | ೧೯೦೯ |
| ೨೭. | ನಾಮದಾರ ವಿಲಿಯಮ್ ಎವರ್ಟ್ ಗ್ಲಾಡಸ್ಟನ್ ದೊರೆಗಳ ಚರಿತ್ರೆಯು | ಗುರುಬಸಪ್ಪ ಫಕ್ಕೀರಪ್ಪ ಹಳಕಟ್ಟಿ | ೧ ರೂ. | ೧೯೦೯ |

| | | | |
|---|---|---|---|
| ೨೮. ವಿಶ್ವ | ಜೀವಾಜಿ ವಿಷ್ಣು ಗೋರೆ | ೪ ಆಣೆ | ೧೯೧೦ |
| ೨೯. ಮೋಹಿನಿ ಅಥವಾ ನಿಂದಕರ ನಡವಳಿ | ಗದಿಗಯ್ಯಾ ಹು. ಹೊನ್ನಾಪುರಮಠ | ೮ ಆಣೆ | ೧೯೧೧ |
| ೩೦. ಕನ್ನಡ ಮಾತು ತಲೆ ಎತ್ತುವ ಬಗೆ | ಬಿ. ಎಂ. ಶ್ರೀಕಂಠಯ್ಯ | | ೧೯೧೧ |
| ೩೧. ಶಿಕ್ಷಣ ಮೀಮಾಂಸೆ | ವೆಂಕಟೇಶ ಬಿ. ಆಲೂರ | ೨ ರೂ. | ೧೯೧೧ |
| | ವೆಂಕಟೇಶ ನ. ಮಗದಾಳ | ೪ ಆಣೆ | |
| ೩೨. ಕೌಸಲ್ಯಾಪರಿಣಯಂ | ಕೆ. ರಾಮಸ್ವಾಮಯ್ಯಂಗಾರ | ೩ ಆಣೆ | ೧೯೧೨ |
| ೩೩. ಕಾಲಿದಾಸ ಚರಿತ್ರ | ಗುರುನಾಥ ವೆಂಕಟೇಶ ಕಿತ್ತೂರ | ೬ ಆಣೆ | ೧೯೧೨ |
| ೩೪. ಕರ್ನಾಟಕ ಯಯಾತಿ ನಾಟಕಂ | ಶಾ. ವೆಂಕಟರಮಣಯ್ಯ | ೪ ಆಣೆ | ೧೯೧೩ |
| ೩೫. ಕವಿಕಾರ್ಯ ಪ್ರಶಂಸೆ | ಮ. ಅ. ರಾಮಾನುಜಯ್ಯಂಗಾರ | ೩ ಆಣೆ | ೧೯೧೩ |
| ೩೬. ಸರಸ್ವತೀ | ಅನು : ಲಿಂಗೋ ರಾಮಚಂದ್ರ ಅಕ್ಕೂರ | ೧೨ ಆಣೆ | ೧೯೧೩ |
| ೩೭. ಭಾರತೀಯ ವಿದುಷಿಯರು | ಮ. ಪ್ರ. ಪೂಜಾರ | ೫ ಆಣೆ | ೧೯೧೪ |
| ೩೮. ಪ್ರಾಚೀನ ಹಿಂದೂಸ್ತಾನ | ವೆಂಕಟೇಶ ಮಗದಾಳ | ೧ ರೂ. | ೧೯೧೪ |
| ೩೯. ಪಂ. ಈಶ್ವರಚಂದ್ರ ವಿದ್ಯಾಸಾಗರ ಇವರ ಚರಿತ್ರವು | ಕೆ. ರಾಮಸ್ವಾಮಯ್ಯಂಗಾರ | ೧ ರೂ. | ೧೯೧೭ |
| ೪೦. ಅಶೋಕ ಅಥವಾ ಪ್ರಿಯದರ್ಶಿನಿ | ಎಂ. ಪಿ. ಪೂಜಾರ | ೧ ರೂ.೬ ಆಣೆ | ೧೯೧೯ |
| ೪೧. ಬೇಗಮ ಸಮರೂ | ಎಸ್. ಎ. ಕುಲಕರ್ಣಿ | ೬ ಆಣೆ | ೧೯೨೦ |
| ೪೨. ಹಜರತ ಮಹಮ್ಮದ ಪೈಂಗಬರರು | ಎಮ್. ಪಿ. ಪೂಜಾರ | ೬ ಆಣೆ | ೧೯೨೦ |
| ೪೩. ಅಮೆರಿಕೆಯೊಳಗಿನ ಬಡ ವಿದ್ಯಾರ್ಥಿಗಳು | ಶ್ರೀನಿವಾಸ ಪಾಂಡುರಂಗ ಕೋಟಿ | ೫ ಆಣೆ | ೧೯೨೦ |
| ೪೪. ಮದುವೆ | ಮ. ಪ್ರ. ಪೂಜಾರ | ೨ ಆಣೆ | ೧೯೨೦ |
| *೪೫. ಹರೀಶನ ಪ್ರೇಮ | | ೪ ಆಣೆ | ೧೯೨೦ |
| ೪೬. ಇಸೋಪನ ಚರಿತ್ರೆ | ತ. ನಾ. ಅಮ್ಮಿನಭಾವಿ | ೩ ಆಣೆ | ೧೯೨೦ |
| ೪೭. ಪಂಡಿತರಾಜ ಜಗನ್ನಾಥ | ಕೇಶವ ರಂಗಭಟ್ಟ ಜೋಶಿ | ೪ ಆಣೆ | ೧೯೨೦ |
| ೪೮. ವಿದ್ಯಾರಣ್ಯ ಸ್ವಾಮಿಗಳು | ಭೀ. ಜೀ. ಹುಲಿಕವಿ | ೧ ರೂ. | ೧೯೨೨ |
| ೪೯. ಅಭಿಷೇಕ ನಾಟಕ | ಪಾನ್ಯಂ ಸುಂದರಶಾಸ್ತ್ರಿ | ೬ ಆಣೆ | ೧೯೨೪ |
| ೫೦. ಕರ್ನಾಟಕ ಸ್ವಪ್ನವಾಸವದತ್ತಂ | ಅನು : ಭೀ. ಜೀ. ಹುಲಿಕವಿ | ೬ ಆಣೆ | ೧೯೨೫ |
| ೫೧. ಸತ್ಕಥಾ ಕುಸುಮಮಂಜರಿ | ನಾರಾಯಣ ವೆಂಕಟೇಶ ಕುರಡಿ | ೧೦ ಆಣೆ | ೧೯೨೫ |
| ೫೨. ದಿವಾಣ ಬಹಾದ್ದೂರ ರೊದ್ದ ಶ್ರೀನಿವಾಸರಾಯರ ಚರಿತ್ರೆಯು | | | ೧೯೨೫ |
| ೫೩. ಭಾಸಕವಿ ಅಭಿಷೇಕ ನಾಟಕ | ಅನು : ಪಾನ್ಯಂ ಸುಂದರಶಾಸ್ತ್ರಿ | ೬ ಆಣೆ | ೧೯೨೫ |
| ೫೪. ರಘುವಂಶ (ಕಾಳಿದಾಸ ವಿರಚಿತ) | ಅನು : ಕಲಮಡಿ ನರಹರಿರಾಯರು | ೨ ರೂ. | ೧೯೨೮ |
| ೫೫. ಆರ್ಯರ ಶಿಕ್ಷಣ ಪದ್ಧತಿ | ಎಸ್. ಎನ್. ನರಹರಯ್ಯ | ೪ ಆಣೆ | ೧೯೨೮ |
| ೫೬. ಭೀಷ್ಮಾಚಾರ್ಯ | ಮ. ಪ್ರ. ಪೂಜಾರ | ೫ ಆಣೆ | ೧೯೨೮ |
| ೫೭. ಜೈನಧರ್ಮ ಪರಿಭಾಷೆ | ಮಹಾದೇವ ಪ್ರಭಾಕರ ಪೂಜಾರ | ೧ರೂ.೪ಆಣೆ | ೧೯೩೦ |
| ೫೮. ನರಗುಂದ ಬಂಡಾಯ | ಪಂ. ಭೀ. ಜೀ. ಹುಲಿಕವಿ | ೧ ರೂ. | ೧೯೩೦ |
| ೫೯. ವೇಣೀಬಂಧನ | ತಮ್ಮಾಜಿ ನಾ. ಅಮ್ಮಿನಭಾವಿ | ೪ ಆಣೆ | ೧೯೩೭ |
| ೬೦. ಕರ್ನಾಟಕ ಜನಜೀವನ | ಬೆಟಗೇರಿ ಕೃಷ್ಣಶರ್ಮ | ೨ ರೂ. | ೧೯೩೯ |

| | | |
|---|---|---|
| ೬೧. ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ | ಪ್ರೊ. ಸ. ಸ. ಮಾಳವಾಡ | ೨ ರೂ. ೧೯೩೯ |
| ೬೨. ಕಾವ್ಯಾವಲೋಕನ | ಪ್ರೊ. ಎಸ್. ಎಸ್. ಬಸವನಾಳ | ೧೯೩೯ |
| ೬೩. ಶಬ್ದಾನುಶಾಸನ ಭಾಗ-೧ | ಕುಂಡಲಗಿರಿ ಆಚಾರ್ಯ | ೧೯೪೧ |
| ಶಬ್ದಾನುಶಾಸನ ಭಾಗ-೨ | ಕುಂಡಲಗಿರಿ ಆಚಾರ್ಯ | ೧೯೪೧ |
| ೬೪. ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆ ಭಾಗ-೨ | ಶಿ. ಶಿ. ಬಸವನಾಳ | ೨ ರೂ. ೧೯೪೧ |
| ೬೫. ಕರ್ನಾಟಕ ವಿದ್ಯಾವರ್ಧಕ ಸಂಘ ಐವತ್ತು ವರ್ಷ | | ೧೯೪೧ |
| ೬೬. ಜೀವನ ವಾಙ್ಮಯ ವಿಮರ್ಶೆ | ಗಳಗನಾಥ | ೧ ರೂ.೮ಆಣೆ ೧೯೪೧ |
| *೬೭. A Cultural History of Karnataka | ಕರಮರಕರ ಎ. ಪಿ. ಹಾಗೂ ಕಲಮದಾನಿ | ೫ ರೂ. ೧೯೪೬ |
| *೬೮. ನಾನು ಓದುವುದೇನು ? | ವಿವಿಧ ಲೇಖಕರು | ೧ ರೂ. ೧೯೬೮ |
| ೬೯. ಕಾರ್ಯಾಲಯ ದೀಪಿಕೆ | | ೨೦ ರೂ. ೧೯೭೬ |
| ೭೦. ಅಸಂಗತ ನಾಟಕಗಳು | ಕೀರ್ತಿನಾಥ ಕುರ್ತಕೋಟಿ | ೧ ರೂ. ೧೯೭೬ |
| ೭೧. ಲಾವಣಿ ಸಾಹಿತ್ಯ | ಸಿಂಪಿ ಲಿಂಗಣ್ಣ | ೧ ರೂ. ೧೯೭೬ |
| ೭೨. ಚೆನ್ನವೀರ ಕಣವಿ ಕಾವ್ಯದೃಷ್ಟಿ | ಗೌರೀಶ ಕಾಯ್ಕಿಣಿ | ೪ ರೂ. ೧೯೭೭ |
| *೭೩. ಆಲ್ಬರ್ಟ್ ಐನ್‌ಸ್ಟೀನ್ | ಡಾ. ಎಂ. ಆಯ್. ಸವದತ್ತಿ<br>ಡಾ. ವಿ. ಎಂ. ಪೂಜಾರ | ೩ ರೂ. ೧೯೮೧ |
| ೭೪. ರುಚಿ | ಡಾ. ಕೆ. ಕೃಷ್ಣಮೂರ್ತಿ | ೧.೮೦ ೧೯೮೧ |
| ೭೫. ಜಾನಪದ | ಡಾ. ಜೀ. ಶಂ. ಪರಮಶಿವಯ್ಯ | ೧.೮೦ ೧೯೮೧ |
| *೭೬. ಬಾಣ ಕಾದಂಬರಿ | ಗಂಗಾಧರ ಮಡಿವಾಳೇಶ್ವರ ತುರಮರಿ | ೩೫ ರೂ. ೧೯೯೫ (೧೦ನೇ ಮುದ್ರಣ) |
| *೭೭. ಕನ್ನಡ ಕರ್ನಾಟಕ ಏನು ಮಾಡಬೇಕು ? | ಡಾ. ಪಾಟೀಲ ಪುಟ್ಟಪ್ಪ | ೨ ರೂ. ೧೯೯೫ |
| *೭೮. ಕಾವ್ಯಯಾನ | ಡಾ. ಬಸವರಾಜ ಸಾದರ | ೩೦ ರೂ. ೨೦೦೦ |
| *೭೯. ಸ್ವಾತಂತ್ರ್ಯ ಚಿಂತನೆ | ಮೋಹನ ನಾಗಮ್ಮನವರ | ೫೦ ರೂ. ೨೦೦೦ |
| *೮೦ ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು | ಡಾ. ಬಸವರಾಜ ಸಾದರ | ೧೫೦ ರೂ. ೨೦೦೨ |
| *೮೧. ಗೋಕಾಕ ವರದಿ ಹೋರಾಟದ ಕಥೆ | ಡಾ. ಪಾಟೀಲ ಪುಟ್ಟಪ್ಪ | ೧೫ ರೂ. ೨೦೦೨ |
| *೮೨. ಕಥನ ಕುತೂಹಲ | ಮೋಹನ ನಾಗಮ್ಮನವರ | ೬೦ ರೂ. ೨೦೦೩ |
| *೮೩. ಬಯಲ ಬೇರ ಚಿಗುರು | ಮೋಹನ ನಾಗಮ್ಮನವರ | ೧೫೦ ರೂ. ೨೦೦೩ |
| *೮೪. ಮಾನವ್ಯ ಕವಿ ಬಿ. ಎ. ಸನದಿ | ಬಿ. ವ್ಹಿ. ಗುಂಜೆಟ್ಟಿ | ೧೦ ರೂ. ೨೦೦೩ |
| *೮೫. ಸ್ನೇಹ ಸೌರಭ | ಸಂ. ಬಿ. ವ್ಹಿ. ಗುಂಜೆಟ್ಟಿ | ೬೦ ರೂ. ೨೦೦೪ |
| *೮೬ ಕನ್ನಡ ಪೋಷಕರು | ಡಾ. ಜಿ. ಡಿ. ಜೋಶಿ | ೫೦ ರೂ. ೨೦೦೫ |
| *೮೭. ಸ್ವಾತಂತ್ರ್ಯ ಶರಣ್ಯರು | ಮೋಹನ ನಾಗಮ್ಮನವರ | ೧೦೦ ರೂ. ೨೦೦೫ |
| *೮೮. ಸುವರ್ಣ ಕರ್ನಾಟಕ ರಾಜಕೀಯ ಸಿಂಹಾವಲೋಕನ | ಪ್ರೊ. ಆರ್. ವಿ. ಹೊರಡಿ | ೪೦ ರೂ. ೨೦೦೮ |

(* ಮಾರಾಟಕ್ಕೆ ಲಭ್ಯವಿವೆ)

ಪ್ರತಿಭಾವಂತ ಪ್ರಾಧ್ಯಾಪಕರು, ನಾಡು-ನುಡಿಯ ಹಿತಚಿಂತಕರು ಹಾಗೂ ಅತ್ಯಂತ ಸಮರ್ಥ ಹರಿತ, ಸಮಯೋಚಿತ ಮಾತುಗಾರರು ಆಗಿರುವ ಪ್ರೊ. ಆರ್. ವಿ. ಹೊರಡಿ ಅವರು ನಮ್ಮ ಮಧ್ಯೆ ಇರುವ ಒಬ್ಬ ಅಪರೂಪದ ಪ್ರಾಧ್ಯಾಪಕರು. ಧಾರವಾಡದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಕರ್ನಾಟಕ ಕಾಲೇಜಿನಲ್ಲಿ ವಿದ್ಯಾರ್ಥಿದೆಸೆಯಲ್ಲಿಯೇ ಕವಿಯಾಗಿ ರೂಪುಗೊಂಡವರು, ಪರಿಣತ ವಿದ್ಯಾರ್ಥಿ ಎಂದು ಖ್ಯಾತರಾದವರು. ಮುಂಬೈ ವಿಶ್ವವಿದ್ಯಾನಿಲಯದಿಂದ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಕರ್ನಾಟಕದ ಹೆಮ್ಮೆಯ ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ಪ್ರಾರಂಭಿಸಿದವರು. ಕಾಲಾನಂತರದಲ್ಲಿ ಕರ್ನಾಟಕ ಕಾಲೇಜಿನಲ್ಲಿ ನಿಯುಕ್ತರಾಗಿ, ವಿಭಾಗದ ಮುಖ್ಯಸ್ಥರಾಗಿ ವಿದ್ಯಾರ್ಥಿಸ್ತೋಮದ ಗೌರವಾದರಗಳನ್ನು ಹೊಂದಿ ನಿವೃತ್ತರಾದವರು. ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಗ್ರಂಥ ಪ್ರಕಟಣೆ ಹಾಗೂ ಆಯಾ ಕಾಲಕ್ಕೆ ತಕ್ಕ ರಾಜಕೀಯ ವಿಶ್ಲೇಷಣೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಜನಾನುರಾಗಿಗಳಾದವರು. ಯಾವ ಭಿಡೆ, ಮುರವತ್ತುಗಳಿಗೆ ಒಳಗಾಗದ ನಿಸ್ಪೃಹ ವ್ಯಕ್ತಿತ್ವದ ಪ್ರೊ. ಆರ್. ವಿ. ಹೊರಡಿ ಅವರು ಸುವರ್ಣ ಕರ್ನಾಟಕ ಸಂದರ್ಭದಲ್ಲಿ ನಮ್ಮ ಸಂಘದಲ್ಲಿ ನೀಡಿದ ಉಪನ್ಯಾಸವನ್ನು ಪ್ರಸ್ತುತ ಸುವರ್ಣ ಕರ್ನಾಟಕ ರಾಜಕೀಯ ಸಿಂಹಾವಲೋಕನ ಗ್ರಂಥರೂಪದಲ್ಲಿ ಸಿದ್ಧಪಡಿಸಿಕೊಟ್ಟು ಉಪಕರಿಸಿದ್ದಾರೆ. ಪ್ರಸ್ತುತ ಗ್ರಂಥದಲ್ಲಿ ಅವರು ಮಾಡಿದ ವೈಚಾರಿಕ ವಿಶ್ಲೇಷಣೆ ಸಮಗ್ರ ಕರ್ನಾಟಕದ ಇದುವರೆಗಿನ ಚಿತ್ರವನ್ನು ನಮ್ಮ ಕಣ್ಮುಂದೆ ನಿಲ್ಲುವಂತೆ ಮಾಡುತ್ತದೆಂಬುದು ನಿಸ್ಸಂದೇಹ.

**ಪ್ರೊ. ಬಿ.ವ್ಹಿ. ಗುಂಜೆಟ್ಟಿ**

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ